ಎಂ. ವೆಂಕಟಕೃಷ್ಣಯ್ಯ

THE LIFE

OF

BOOKER T. WASHINGTON

ಬೂಕರ್ ಟಿ. ವಾಷಿಂಗ್‌ಟನ್‌ರವರ ಚರಿತ್ರೆ

BY

M. VENKATAKRISHNAYYA

[**Second Edition**]

MYSORE

PRINTED BY M. S. LAKSHMANA ROW

AT THE K. V. V. PRESS

1919

PRICE 1 RUPEE] [ಬೆಲೆ ೧ ರೂಪಾಯಿ

ಪ್ರಥಮಮುದ್ರಣಕ್ಕೆ ಪೀಠಿಕೆ.

ಸ್ತ್ರೀ ಪುರುಷರು ಅವರವರ ಕರ್ಮಗಳಿಗನುಸಾರವಾಗಿ ಫಲಗಳನ್ನು ಹೊಂದುವರು. ಕೆಲವರು ಆಗರ್ಭಶ್ರೀಮಂತರಾಗಿ ಜನಿಸಿ ಸಂಪತ್ತಿಗೆ ಸಹಜವಾದ ಪಾಶಗಳಿಗೆ ಸಿಕ್ಕಿ ಇಂದ್ರಿಯಪರವಶರಾಗಿ ಅತ್ಯಂತ ಹೀನಸ್ಥಿತಿಗೆ ಬರುವರು. ಕೆಲವರು ಅನಿರ್ವಚನೀಯವಾದ ದರಿದ್ರಾವಸ್ಥೆಯಲ್ಲಿ ಜನಿಸಿ, ದಾಸಾನುದಾಸರಾಗಿ ಕಾಲಕ್ಷೇಪವನ್ನು ಮಾಡಿ, ಅಸಾಧಾರಣವಾದ ಕ್ಲೇಶಗಳಲ್ಲಿಯೂ ವಿದ್ಯೆಯನ್ನೂ, ಉದ್ಯೋಗಾಸಕ್ತಿಯನ್ನೂ, ಪರೋಪಕಾರ ಬುದ್ಧಿಯನ್ನೂ, ಭೂತದಯೆಯನ್ನೂ ಪಡೆದು, ಜಿತೇಂದ್ರಿಯರಾಗಿ ಹೆಣ್ಣು ಹೊನ್ನು ಮಣ್ಣುಗಳೆಂಬ ಪಾಶಗಳಿಗೆ ಅಧೀನರಾಗದೆ, ಅಹೋರಾತ್ರಿಯಲ್ಲಿಯೂ ಅಸಾಧಾರಣವಾದ ಮೆಹನತ್ತನ್ನು ಮಾಡಿ, ಅಜ್ಞಾನದಲ್ಲಿಯೂ, ದಾರಿದ್ರ್ಯದಲ್ಲಿಯೂ ಮುಳುಗಿ ತೇಲುತ್ತಿರುವವರನ್ನು ಉದ್ಧರಿಸಬೇಕೆಂಬ ಸಂಕಲ್ಪವನ್ನು ಮಾಡಿ, ಅಂಥಾ ಸತ್ಸಂಕಲ್ಪದಲ್ಲಿ ಜಗದೀಶ್ವರನ ಪ್ರಸನ್ನತೆಗೆ ಪಾತ್ರರಾಗಿ ಇಷ್ಟಾರ್ಥಸಿದ್ಧಿಯನ್ನು ಹೊಂದಿ, ಅಪಾರವಾದ ಪುಣ್ಯವನ್ನೂ, ಯಶಸ್ಸನ್ನೂ, ಇಹಪರಗಳನ್ನೂ ಪಡೆಯುವರು. ಇಂಥವರಲ್ಲಿ ಬೂಕರ್ ಟಿ. ವಾಷಿಂಗ್ಟನ್‌ರವರು ಒಬ್ಬರಾಗಿರುವರು. ಇವರ ಜೀವಮಾನದ ಚರಿತ್ರೆಯನ್ನು ಕನ್ನಡದಲ್ಲಿ ಬರೆದು ಕನ್ನಡಿಗರಿಗೆ ಉಪಯೋಗವಾಗುವಂತೆ ಮಾಡಬೇಕೆಂದು ಸರ್ ವಿಶ್ವೇಶ್ವರಯ್ಯನವರೂ ಮತ್ತು ರಾವ್ ಬಹದೂರ್ ಮ|| ಎಂ. ಶಾಮರಾಯರವರೂ ನನಗೆ ಆಜ್ಞಾಪಿಸಿದರು. ಇವರ ಆಜ್ಞೆಯನ್ನು ಶಿರಸಾವಹಿಸಿ ಬೂಕರ್ ಟಿ. ವಾಷಿಂಗ್ಟನ್‌ರವರ ಜೀವಮಾನ ಚರಿತ್ರೆಯನ್ನು ಯಥಾಶಕ್ತಿ ಕನ್ನಡದಲ್ಲಿ ಬರೆದಿರುತ್ತೇನೆ. ಈ ಗ್ರಂಥವನ್ನು ಓದಿದರೂ, ಶ್ರವಣಮಾಡಿದರೂ ಹಾಗೆ ಓದತಕ್ಕವರಿಗೂ, ಶ್ರವಣಮಾಡತಕ್ಕವರಿಗೂ ಇಹಪರಸಾಧನೋಪಾಯಗಳು ಅನೇಕ ಮುಖವಾಗಿ ಉಂಟಾಗಬಹುದೆಂದು ನಂಬಿರುವೆನು. ವಾಚಕರಿಗೆ ಹಾಗೆ ಉಪಯೋಗವಾದ ಪಕ್ಷದಲ್ಲಿ ಈ ಗ್ರಂಥವನ್ನು ಬರೆಯುವದರಲ್ಲಿ ಮಾಡಲ್ಪಟ್ಟ ವ್ಯವಸಾಯವು ಸಂಪೂರ್ಣವಾಗಿ ಸಫಲವಾಯಿತೆಂದು ಭಾವಿಸುತ್ತೇನೆ.

ದ್ವಿತೀಯಮುದ್ರಣಕ್ಕೆ ಪೀಠಿಕೆ.

ಬೂಕರ್ ಟಿ ವಾಷಿಂಗ್ಟನ್‌ರವರ ಜೀವಮಾನದ ಚರಿತ್ರೆಯು ಪ್ರಸಕ್ತ ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಗೆ ನಿಯಮಿಸಲ್ಪಟ್ಟಿರುವುದು. ಇದರ ಪ್ರಥಮ ಮುದ್ರಣದ ಪತ್ರಿಕೆಗಳು ಜಾಗ್ರತೆಯಾಗಿ ಮುಗಿದುಹೋದದ್ದರಿಂದ ಎರಡನೆಯ ಮುದ್ರಣವು ಮಾಡಲ್ಪಟ್ಟಿರುವುದು.

ತಾ|| ೨೦-೭-೧೯೧೯.

ಎಂ. ವೆಂಕಟಕೃಷ್ಣಯ್ಯ.

ವಿಷಯಸೂಚಿಕೆ.

ಅಧ್ಯಾಯ ೧.

ಅಧ್ಯಾಯ ೨.

ಅಧ್ಯಾಯ ೩.

ಅಧ್ಯಾಯ ೪.

ಅಧ್ಯಾಯ ೫.

ಅಧ್ಯಾಯ ೬.

ಅಧ್ಯಾಯ ೭.

ಅಧ್ಯಾಯ ೮.

ಅಧ್ಯಾಯ ೯.

ಅಧ್ಯಾಯ ೧೦.

ಅಧ್ಯಾಯ ೧೧.

ಅಧ್ಯಾಯ ೧೨.

ಅಧ್ಯಾಯ ೧೩.

ಅಧ್ಯಾಯ ೧೪.

ಅಧ್ಯಾಯ ೧೫.

ಅಧ್ಯಾಯ ೧೬.

ಉಪಸಂಹಾರ.

ಶ್ರೀಃ.

ಬೂಕರ್ ವಾಷಿಂಗ್‌ಟನ್ನಿನ ಚರಿತ್ರೆ.

ಅಧ್ಯಾಯ ೧

ಬಾಲ್ಯ.

ಉಪಕ್ರಮ.—ನಾನು ಹುಟ್ಟಿದುದು 'ವರ್ಜೀನಿಯ' ದೇಶದಲ್ಲಿ. ಆದರೆ ಆ ದೇಶದ ಯಾವ ಪಟ್ಟಣದಲ್ಲಿ ನಾನು ಹುಟ್ಟಿದೆನೊ, ಯಾವ ದಿವಸ ಹುಟ್ಟಿದೆನೊ ಅದು ನನಗೆ ಸ್ವಲ್ಪವೂ ತಿಳಿಯದು. ಅಂತು, ಯಾವುದೋ ಒಂದು ಸ್ಥಳದಲ್ಲಿ ಯಾವುದೋ ಒಂದು ದಿವಸ ನಾನು ಹುಟ್ಟಿದೆನು. ನಾನು 1858 ಅಥವಾ 1859ನೆಯ ಇಸವಿಯಲ್ಲಿ ಹುಟ್ಟಿದೆನೆಂದು ಹೇಳುತ್ತಾರೆ

ನನ್ನ ತಂದೆಯ ಸ್ಥಿತಿ.—ನಾನು ಹುಟ್ಟಿದಾಗ ನಾನೂ ನಮ್ಮವರೂ ಜೀತಗಾರರಾಗಿದ್ದೆವು ಆಗ ನಾವು ಅನುಭವಿಸುತ್ತಿದ್ದ ದುರವಸ್ಥೆಯು ಹೇಳತೀರದು. ನಮ್ಮವರು ಎಂದರೆ ನಮ್ಮ ನೆಂಟರಿಷ್ಟರು ಯಾರ್ಯಾರು ಇದ್ದರೆಂದಾಗಲಿ, ನಾವು ಯಾರ ವಂಶದಲ್ಲಿ ಹುಟ್ಟಿದೆನೆಂದಾಗಲಿ ನಾನರಿಯೆನು. ನಮ್ಮ ತಂದೆ ಯಾರೋ ನಾನು ಕಾಣೆನು. ಅವನ ಹೆಸರಂತು ನನಗೆ ಮೊದಲೇ ತಿಳಿಯದು. ಅವನು ನನ್ನನ್ನು ಒಂದು ದಿನವಾದರೂ ಹತ್ತಿರ ಕುಳ್ಳಿರಿಸಿಕೊಂಡು ನನ್ನನ್ನು ಮುದ್ದಾಡಲಿಲ್ಲ. ಇದರಿಂದ ನಮ್ಮ ತಂದೆಯನ್ನು ದೂರಲು ನಾನು ಹೊರಟೆನೆಂದು ತಿಳಿಯಕೂಡದು. ಆತನ ತಪ್ಪೇನಿರುವುದು ? ಆತನೂ ತನ್ನ ಹಾಗೆ ಇದ್ದ ಇತರರಾದ ಸಾವಿರಾರು ಜನರ ಜತೆಯಲ್ಲಿ ಆಗ ಪ್ರಚಾರದಲ್ಲಿದ್ದ ಜೀತಗಾರತನಕ್ಕೆ ತುತ್ತಾಗಿ ಎಲ್ಲಿಯೋ ನರಳುತ್ತಿದ್ದನು.

ನನ್ನ ಜೀವಿಕೆ.—ಆಗ ನಾವೆಲ್ಲರೂ ಆ ದೇಶದಲ್ಲಿ ಒಬ್ಬ ಸಾಹುಕಾರನ ಹತ್ತಿಯ ಹೊಲಗಳೊಳಗೆ ದುಡಿಯುತ್ತಿದ್ದೆವು. ನಮ್ಮ ತಾಯಿಯು ಒಂದು ಹರುಕು ಗುಡಿಸಲಲ್ಲಿದ್ದುಕೊಂಡು, ಅಲ್ಲಿಯ ಕೂಲಿಯವರಿಗೆಲ್ಲ ಅಡುಗೆಮಾಡಿ ಹಾಕುತ್ತಿದ್ದಳು. ಆ ಗುಡಿಸಲಿಗೆ ಹೆಸರಿಗೆ ಮಾತ್ರ ಒಂದು ಮುರುಕು ಕದವಿದ್ದಿತು. ಅದರಲ್ಲಿನ ನೆಲಕ್ಕೂ ಬೀದಿಗೂ ಏನೂ ವ್ಯತ್ಯಾಸವಿರಲಿಲ್ಲ. ಅದರ ಮಧ್ಯದಲ್ಲಿದ್ದ ಒಂದು ದೊಡ್ಡ ಗುಂಡಿಯಲ್ಲಿ ಗೆಣಸುಗಳನ್ನು ತುಂಬಿಡುತ್ತಿದ್ದರು. ಇದು ಇಷ್ಟು ಚೆನ್ನಾಗಿ ನನಗೆ ಈಗಲೂ ನೆನೆಪಿನಲ್ಲಿರಲು ಕಾರಣವುಂಟು. ಆ ಗುಂಡಿಯ ಮುಚ್ಚಳವನ್ನು ಮುಚ್ಚುವಾಗಲೂ ತೆರೆಯುವಾಗಲೂ ನನಗೆ ಒಂದೆರಡು ಗೆಣಸುಗಳು ಸಿಕ್ಕುತ್ತಿದ್ದವು. ನಾನು ಅವುಗಳನ್ನು ಸುಟ್ಟು ತಿಂದು ಪರಮಾನಂದವನ್ನು ಹೊಂದುತ್ತಿದ್ದೆನು. ನನಗೆ ಒಬ್ಬ ಅಣ್ಣನೂ ಒಬ್ಬ ತಂಗಿಯೂ ಇದ್ದರು. ಅವರೂ ನಾನೂ ಒಂದೇ ಹಾಸಿಗೆಯ ಮೇಲೆ ಮಲಗುತ್ತಿದ್ದೆವು. ಅದೆಂತಹ ಹಾಸುಗೆ ? ನಮಗೆ ಸ್ವಾತಂತ್ರ್ಯ ಬರುವವರೆಗೆ ನಾವು ಹಾಸಿಗೆಯ ಮುಖವನ್ನೇ ಕಾಣೆವು. ಕಸದ ಗುಡ್ಡೆಯ ಮೇಲೆ ಬಿದ್ದುಕೊಳ್ಳುತ್ತಿದ್ದೆವೆಂದು ಹೇಳಿದರೂ ಅದು ಅತಿಶಯೋಕ್ತಿಯಾಗಲಾರದು. ನಮ್ಮ ತಾಯಿಗೆ ನಮ್ಮ ಯೋಗಕ್ಷೇಮಗಳನ್ನು ನೋಡಿಕೊಳ್ಳುವುದಕ್ಕೆ ಹೊತ್ತೇ ಇರಲಿಲ್ಲ. ಇದಕ್ಕಾಗಿ ಅವಳು ಬೆಳಗ್ಗೆ ತನ್ನ ಕೆಲಸಕ್ಕೆ ಹೊರಡುವುದಕ್ಕೆ ಮುಂಚೆಯೂ, ರಾತ್ರಿ ತನ್ನ ಕೆಲಸ ಮುಗಿದಮೇಲೂ ಸ್ವಲ್ಪ ಅವಕಾಶ ಮಾಡಿಕೊಳ್ಳುತ್ತಿದ್ದಳು.

ನನ್ನ ಕಷ್ಟ.—ನಾನು ಯಾವಾಗ್ಗೂ ಒಂದು ದಿವಸವಾದರೂ ಕ್ರಮವಾಗಿ ಆಟಗಳನ್ನು ಆಡಿದವನಲ್ಲ. ಆದರೆ, ಒಂದು ದಿವಸವೂ ಕೆಲಸವಿಲ್ಲದೆ ಇರುತ್ತಿರಲಿಲ್ಲ. ನಾನು ಜೀತಗಾರಿಕೆಯಲ್ಲಿರುವವರೆಗೂ ಚಿಕ್ಕವನಾಗಿದ್ದಕಾರಣ ನನ್ನ ಕೈಲಿ ಗುಡಿಸಿಸುತ್ತಿದ್ದರು. ಕೆಲಸಮಾಡುತ್ತಿದ್ದವರಿಗೆ ಬಾಯಾರಿಕೆಯಾದಾಗ ನನ್ನ ಕೈಲಿ ಅವರಿಗೆ ನೀರು ಹೊರಿಸುತ್ತಿದ್ದರು. ಇದಲ್ಲದೆ ವಾರಕ್ಕೊಂದಾವರ್ತಿ ಸುಮಾರು ಮೂರು ಮೈಲಿ ದೂರದಲ್ಲಿದ್ದ ಒಂದು ಬೀಸುವ ಯಂತ್ರಕ್ಕೆ ಗೋಧಿಯನ್ನು ತೆಗೆದುಕೊಂಡು ಹೋಗಬೇಕಾಗಿತ್ತು. ಈ ಕೆಲಸವೆಂದರೆ ನನಗೆ ಬಲು ಹೆದರಿಕೆ. ಒಂದು ದೊಡ್ಡ ಗೋಣಿಯ ಚೀಲದ ತುಂಬ ಗೋಧಿಕಾಳನ್ನು ತುಂಬಿ, ಕುದುರೆಯ ಮೇಲೆ ಹೇರಿ, ಅದರ ಜತೆಯಲ್ಲಿ ನನ್ನನ್ನು ಕಳುಹಿಸುತ್ತಿದ್ದರು. ಹೀಗೆ ನಾನು ತೆಗೆದುಕೊಂಡು ಹೋದಾಗೆಲ್ಲ ಒಂದು ದಿನವೂ ತಪ್ಪದೆ ಆ ಚೀಲದ ಭಾರವು ಹೇಗೋ ಒಂದೇ ಕಡೆಗೆ

ಬಂದು ನಡುದಾರಿಯಲ್ಲಿ ಬಿದ್ದುಬಿಡುತಿದ್ದಿತು. ಒಂದೊಂದು ವೇಳೆ, ಅದರ ಜತೆಯಲ್ಲಿ ನಾನೂ ಬಿದ್ದುಬಿಡುತಿದ್ದೆನು. ಆ ಹಾಳು ಮೂಟೆ ಬಿದ್ದರೆ ಅದನ್ನು ಎತ್ತುವುದಕ್ಕೆ ನನ್ನಿಂದಾಗುತ್ತಿತ್ತೆ ? ಅದನ್ನು ಎತ್ತಿ ಮತ್ತೆ ಸರಿಯಾಗಿ ಇಡಲು ಸಮರ್ಥರಾದವರು ಯಾರಾದರೂ ಬರುವವರೆಗೂ ನಾನು ಅಲ್ಲಿಯೇ ಕಾದುಕೊಂಡು ಇರಬೇಕಾಗುತಿದ್ದಿತು. ಹೀಗೆ ಅನೇಕ ವೇಳೆ ಎರಡು ಮೂರು ಘಂಟೆಗಳ ಹೊತ್ತು ಕಾದುಕೊಂಡಿರುತ್ತಿದ್ದೆನು. ಅಷ್ಟು ಹೊತ್ತು ನನಗೆ ಮಾಡುವುದಕ್ಕೆ ಕೆಲಸವೇನು ? ನನ್ನ ಸ್ಥಿತಿಯನ್ನು ನೋಡಿಕೊಂಡು ದುಃಖಪಟ್ಟು ಸುಮ್ಮನೆ ಅತ್ತುಬಿಡುತಿದ್ದೆನು. ಹೊತ್ತು ಮೀರಿಹೋದರೆ ಆ ಗೋಧಿಯನ್ನು ಯಂತ್ರಕ್ಕೆ ಕೊಟ್ಟು ಹಿಟ್ಟುಮಾಡಿಸಿಕೊಂಡು ಹೋಗುವುದಕ್ಕೆ ಮತ್ತಿಷ್ಟು ಹೊತ್ತಾಗುತಿದ್ದಿತು. ಆ ದಾರಿಯಲ್ಲಿ ವಿಶೇಷವಾಗಿ ಜನಗಳು ತಿರುಗಾಡುತ್ತಿರಲಿಲ್ಲ. ಅದಲ್ಲದೆ, ಆ ದಾರಿಯು ದಟ್ಟವಾದ ಕಾಡಿನ ಮಧ್ಯದಲ್ಲಿ ಹೋಗುತಿದ್ದಿತು. ಸಾಲದುದಕ್ಕೆ, ಆ ಕಾಡಿನಲ್ಲೆಲ್ಲ ಸೋಲ್ಜರುಗಳು ಅವಿತುಕೊಂಡಿರುತ್ತಾರೆಂದೂ, ಅವರು ನೀಗ್ರೊ ಹುಡುಗರನ್ನು ಕಂಡರೆ ಮೊದಲು ಅವರ ಎರಡು ಕಿವಿಗಳನ್ನೂ ಕೊಯ್ದುಹಾಕುವರೆಂದೂ ಜನರು ಹೆದರಿಸುತಿದ್ದರು. ಇದೆಲ್ಲವನ್ನೂ ಅನುಭವಿಸಿ ಹೇಗೋ ಮನೆಗೆ ಬಂದು ಸೇರಿದರೆ, ಅಲ್ಲಿ ತಪ್ಪದೆ ಬೈಗಳನ್ನೂ ಏಟನ್ನೂ ತಿನ್ನಬೇಕಾಗಿದ್ದಿತು. ನಾನು ಜೀತಗಾರನಾಗಿರುವವರೆಗೂ ಓದುಬರಹಗಳ ಮುಖವನ್ನೇ ಕಂಡವನಲ್ಲ. ಒಂದೆರಡು ದಿನ ಮಾತ್ರ ನಮ್ಮ ಯಜಮಾನನ ಮಗಳ ಪುಸ್ತಕಗಳನ್ನು ಹೊತ್ತುಕೊಂಡು ಅವಳ ಪಾಠಶಾಲೆಯವರೆಗೂ ಹೋಗಿ ಬಂದೆನು. ಅಲ್ಲಿ ಹುಡುಗರೆಲ್ಲರೂ ಸೇರಿ ಓದುತಿದ್ದುದನ್ನು ನೋಡಿದಾಗ ಅದು ನನ್ನ ಮನಸ್ಸಿನಲ್ಲಿ ಚನ್ನಾಗಿ ನಾಟಿತು. ಆ ಮೇಲೆ ನಾನು ಹೀಗೆ ಪಾಠಶಾಲೆಗೆ ಹೋಗಿ ಓದಿ ಬರೆಯುವುದು ಸ್ವರ್ಗಸೌಖ್ಯಕ್ಕೆ ಸಮಾನವಾಗಿ ಭಾವಿಸಿಕೊಂಡೆನು. ಓದುಬರಹದ ವಿಷಯ ಹಾಗಿರಲಿ. ನಾವು ಮನುಷ್ಯರಂತೆ ಸರಿಯಾಗಿ ಊಟಮಾಡಿದ ದಿನವ್ಯಾವುದು ? ನಾವು ವರ್ಜಿನಿಯದಲ್ಲಿರುವವರೆಗೂ, ನಮ್ಮ ಊಟವೂ ನಾಯಿಬೆಕ್ಕುಗಳ ಊಟವೂ ಒಂದೇ ಆಗಿರುತಿದ್ದಿತು. ಒಂದುಸಲ ಒಂದು ಚೂರು ರೊಟ್ಟಿ ಸಿಕ್ಕಿದರೆ ಅದನ್ನು ತಿಂದುಬಿಡುವುದು, ಮತ್ತೊಂದು ಗಳಿಗೆಗೆ ಒಂದು ಗುಟುಕು ಹಾಲು ಸಿಕ್ಕಿದರೆ ಆಗ ಅದನ್ನು ಕುಡಿಯುವುದು, ಈ ಮಧ್ಯದಲ್ಲಿ ಒಂದು ಗೆಣಸೋ ಆಲೂಗೆಡ್ಡೆಯೋ ಸಿಕ್ಕಿದರೆ ಅಲ್ಲಿಯೇ ಅದನ್ನು ತಿನ್ನುವುದು, ಇದೇ ನಮ್ಮ ಆಹಾರದ ಕ್ರಮ

ವಾಗಿತ್ತು. ಎಷ್ಟೋ ಸಲ ಅಡುಗೆ ಮಾಡಿದ ಪಾತ್ರೆಯಲ್ಲಿಯೋ ಅದರ ಮೇಲಿನ ಮುಚ್ಚಳದಲ್ಲಿಯೋ ನಮ್ಮ ಊಟವು ನಡೆದಿರುವುದು.

ಜೀತಗಾರಿಕೆಯೆಂಬುದರ ಅರ್ಥಜ್ಞಾನ.—ನಾನು ಸ್ವಲ್ಪ ದೊಡ್ಡವನಾದ ಮೇಲೆ, ನಮ್ಮ ಯಜಮಾನನ ಮನೆಯಲ್ಲಿ ಎಲ್ಲರೂ ಊಟಮಾಡುತ್ತಿದ್ದಾಗ, ನೊಣಗಳು ಬಾರದಂತೆ ಬೀಸುತ್ತಿರುವುದಕ್ಕಾಗಿ ನನ್ನನ್ನು ಕರೆಯುತಿದ್ದರು. ಅಲ್ಲಿ ಊಟಕ್ಕೆ ಸೇರುತ್ತಿದ್ದ ಬಿಳಿಯ ಜನರೆಲ್ಲರೂ ಯುದ್ಧದ ಸಮಾಚಾರ ಹೊರತು ಬೇರೆ ಮಾತನ್ನಾಡುತ್ತಿರಲಿಲ್ಲ. ಆಗ ಸಂಯುಕ್ತ ಸಂಸ್ಥಾನದ ಜನಗಳು ಎರಡು ಪಂಗಡವಾಗಿ ಯುದ್ಧಮಾಡುತಿದ್ದರು. ಅವರಲ್ಲಿ ಉತ್ತರದೇಶದವರು ಜೀತಗಾರ ಪದ್ಧತಿಯನ್ನು ತಪ್ಪಿಸಿಬಿಡಬೇಕೆಂದೂ, ದಕ್ಷಿಣದ ಕಡೆಯುವರು ಅದು ಆಗಲಾರದೆಂದೂ ಹಟ ಹಿಡಿದಿದ್ದರು. ಇದೆಲ್ಲವೂ ನನಗೆ ಆಗ ನಮ್ಮ ಯಜಮಾನನ ಮನೆಯುವರು ಊಟಮಾಡುವಾಗ ಆಡುತಿದ್ದ ಮಾತುಗಳನ್ನು ಕೇಳಿ ಸ್ವಲ್ಪಸ್ವಲ್ಪ ತಿಳಿಯಬಂದಿತು. ಇದಾದ ಮೇಲೆ, ನಮ್ಮ ತಾಯಿಯು ಅನೇಕವೇಳೆ ದೇವರಿಗೆ ನಮಸ್ಕರಿಸಿ, ಲಿಂಕನ್ನಿನ ಪಕ್ಷದವರಿಗೆ ದೇವರು ಜಯಕೊಡಲಿ, ಅದರಿಂದ ನನಗೂ ನನ್ನ ಮಕ್ಕಳಿಗೂ ಬಿಡುಗಡೆಯಾಗಲಿ ಎಂದು ಬೇಡಿಕೊಳ್ಳುತ್ತಿದ್ದುದಕ್ಕೆ ನನಗೆ ಅರ್ಥವಾಗುತ ಬಂದಿತು. ಹೀಗೆ ನಾನು ನೊಣ ಹೊಡೆಯುವ ಕೆಲಸದಲ್ಲಿದ್ದಾಗ ಒಂದು ದಿನ ನಮ್ಮ ಯಜಮಾನನ ಮಕ್ಕಳೂ ಇನ್ನು ಕೆಲವರೂ ಸೇರಿ ಸಿಹಿದೋಸೆಯನ್ನು ತಿನ್ನುತಿದ್ದರು. ಅದನ್ನು ಕಂಡು ನನಗೆ ಬಾಯಲ್ಲಿ ನೀರು ಕಡೆಯಿತು. ಹಾಗೆಯೇ ಅದನ್ನು ನೋಡುತ ನೋಡುತ ಅದಕ್ಕೆ ಸಮಾನವಾದ ಪದಾರ್ಥವೇ ಇಲ್ಲವೆಂದು ತೋರಿತು. ಆ ಮೇಲೆ ನಾನು ನನ್ನ ಮನಸ್ಸಿನಲ್ಲಿ ನನಗೆ ಎಂದಿಗಾದರೂ ಬಿಡುಗಡೆಯಾದರೆ, ಆ ಹೆಂಗಸರಂತೆ ನಿರಾಳವಾಗಿ ಕುಳಿತುಕೊಂಡು ಮನಸ್ಸು ದಣಿಯುವಂತೆ ಅಂಥ ದೋಸೆಗಳನ್ನು ಮಾಡಿಸಿ ತಿಂದುಬಿಡಬೇಕೆಂದೂ ಅದಕ್ಕೆ ಸಮಾನವಾದ ಸೌಖ್ಯವು ಮತ್ತಾವುದೂ ಇರಲಾರದೆಂದೂ ಎಂದುಕೊಂಡರು.

ಬಟ್ಟೆಗಳು—ನಮ್ಮ ಬಟ್ಟೆಗಳ ಅಂದವನ್ನು ನಾನೇನು ಹೇಳಲಿ! ನಮಗೆ ಕೊಡುತ್ತಿದ್ದ ಶಣಬಿನ ಷರಟುಗಳು ಅಗ್ಗವಾಗಿಯೂ, ಗಟ್ಟಿಯಾಗಿಯೂ ಇರಬೇಕೆಂದು, ಅವುಗಳಲ್ಲಿ ನಯವಾಗಿರುವ ಭಾಗವನ್ನೆಲ್ಲಾ ತೆಗೆದುಕೊಂಡು ಕೆಲಸಕ್ಕೆ ಬಾರದವೆಂದು ಬಿಸಾಟ ಭಾಗಗಳಿಂದ ನಮಗೆ ಬಟ್ಟೆಗಳನ್ನು ಹೊಲಿಸಿಕೊಡುತಿದ್ದರು.

ಇಂತಹ ಗೋಣಿ ರಟ್ಟಿನ ಹೊಸ ಅಂಗಿಯನ್ನು ಹಾಕಿಕೊಳ್ಳುವಾಗ ಆಗುವ ಯಾತನೆಗೆ ಸಮಾನವಾದ ಯಾತನೆಯೇ ಇಲ್ಲ. ಮೈತುಂಬ ಅಂಟುಪುರಲೆ ಮೆತ್ತಿಕೊಂಡು ಅಥವಾ ನೂರಾರು ಸೂಜಿಗಳಿಂದ ಮೈಯನ್ನೆಲ್ಲ ಚುಚ್ಚಿದರೆ ಯಾವ ಸುಖ ಉಂಟಾಗಬಹುದೋ, ಆ ಸುಖವು ಈ ಬಟ್ಟೆಯನ್ನು ಹಾಕಿಕೊಂಡಾಗ ಅನುಭವಿಸಲ್ಪಡುತ್ತಿತ್ತು. ಆದರೆ ಅದನ್ನು ಬಿಟ್ಟರೆ ಗತಿ ಇಲ್ಲ. ಬೇಕಾದರೆ ಆ ಬಟ್ಟೆಗಳನ್ನು ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಸುಮ್ಮನಿರಬೇಕು. ನಾನೇನೋ ಆ ಬಟ್ಟೆಗಳನ್ನು ಹಾಕಿಕೊಳ್ಳುವುದಕ್ಕೆ ಬದಲಾಗಿ ಬೆತ್ತಲೆಯೇ ಇರುವುದು ಉತ್ತಮವೆಂದಿದ್ದೆನು. ಆದರೆ ಹಾಗಿರಲು ಆಗುತ್ತಿರಲಿಲ್ಲ. ಒಂದೊಂದು ವೇಳೆ ಇಂತಹ ಹೊಸ ಷರಟುಗಳನ್ನು ಹಾಕಿಕೊಳ್ಳಬೇಕಾದರೆ ಸಹಿಸಲಾರದಷ್ಟು ದುಃಖ ಬರುತಿದ್ದಿತು. ಆಗ ನಮ್ಮಣ್ಣನು ಅದನ್ನು ತಾನು ತೆಗೆದುಕೊಂಡು ನಾಲ್ಕು ದಿನ ಹಾಕಿಕೊಂಡು ಸವೆಯಿಸಿ, ಅದರ ಮುಳ್ಳುಗಳು ಸ್ವಲ್ಪ ಮೊಂಡಾಗುವಂತೆ ಮಾಡಿ ನನಗೆ ಕೊಡುತ್ತಿದ್ದನು. ನಾನು ಅವನ್ನು ಎಂದಿಗೂ ಮರೆಯಲಾರೆನು. ನಾನು ದೊಡ್ಡ ಹುಡುಗನಾಗುವವರೆಗೂ ಬಹಳ ದಿವಸ ಇಂತಹ ಬಟ್ಟೆಗಳಲ್ಲೇ ಕಾಲಹರಣ ಮಾಡುತಿದ್ದೆನು.

ಕಪ್ಪು ಜನರ ಸಾಧುಸ್ವಭಾವ —ಇದನ್ನು ನೋಡಿದರೆ ಆಗ ಬಿಳಿಯ ಜನರಿಗೂ, ಕಪ್ಪು ಜನರಿಗೂ ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗುತ್ತಿರಲಿಲ್ಲವೆಂದೂ ಒಬ್ಬೊಬ್ಬರಿಗೆ ಬದ್ಧದ್ವೇಷವಿರುತ್ತಿದ್ದಿತೆಂದೂ ತೋರಬಹುದು. ಆದರೆ ಖಂಡಿತವಾಗಿ ನಾವೆಲ್ಲರೂ ಬಿಳಿಯ ಜನರ ಕಷ್ಟಸುಖಗಳಲ್ಲಿ ಭಾಗಿಗಳಾಗಿ, ಅವರ ಕಷ್ಟವನ್ನೇ ನಮ್ಮ ಕಷ್ಟವನ್ನಾಗಿಯೂ, ಅವರ ಸುಖವನ್ನೇ ನಮ್ಮ ಸುಖವನ್ನಾಗಿಯೂ ಭಾವಿಸುತ್ತಿದ್ದೆವು. ನಮ್ಮ ಜನಗಳಿಗೆ ಸ್ವಾತಂತ್ರ್ಯ ಬಂದ ಮೇಲೆ, ಅನೇಕರು ತಮ್ಮ ಹಿಂದಣ ಯಜಮಾನರಿಗೂ, ಅವರ ವಂಶದವರಿಗೂ ಕಷ್ಟಕಾಲ ಒದಗಿದಾಗ ನಾನಾವಿಧವಾಗಿ ಸಹಾಯ ಮಾಡಿಧಾರೆ. ಹೀಗೆ ಒಬ್ಬನು ಬಡತನಕ್ಕೆ ಸಿಕ್ಕಿದ ತನ್ನ ಯಜಮಾನನ ಮಗನಿಗೆ ವಿದ್ಯಾಭ್ಯಾಸ ಮಾಡಿಸಿದನು. ಮತ್ತೊಬ್ಬನು ಕುಡಿತ ಮೊದಲಾದ ಕೆಟ್ಟ ಚಾಳಿಗಳಿಂದ ಸರ್ವಸ್ವವನ್ನೂ ಕಳೆದುಕೊಂಡ ತನ್ನ ಯಜಮಾನನ ಮಗನಿಗೆ ಅನ್ನ ಬಟ್ಟೆಗಳನ್ನು ಕೊಟ್ಟು ಸಾಕಿದನು. ಇದಲ್ಲದೆ ಬಿಳಿಯ ಜನರು ಯಾವ ಕೆಲಸವನ್ನು ಬೇಕಾದರೂ ನಮ್ಮಲ್ಲಿ ನಂಬಿಕೆಯಿಟ್ಟು ಮಾಡುತ್ತಿದ್ದರು. ಕಪ್ಪು ಜನರಲ್ಲಿ ಯಾರೂ ಹೀಗೆ ನಂಬಿದವರಿಗೆ ಮೋಸಮಾಡಿದುದನ್ನು ನಾನು ಕಾಣೆನು. ಒಂದು ಸಮಯ

ದಲ್ಲಿ ಓಹಿಯೊ ದೇಶದಲ್ಲಿ ನೋಡಿದ ನನ್ನ ಮನೆಯವನೊಬ್ಬನ ಕಥೆಯನ್ನು ಹೇಳಿದರೆ, ಈ ವಿಷಯವು ಗೊತ್ತಾಗುವುದು.

ಕಪ್ಪು ಜನರಲ್ಲಿ ಒಬ್ಬನ ವೃತ್ತಾಂತ —ಜೀತಗಾರರನ್ನೆಲ್ಲ ಜೀತದಿಂದ ಬಿಡಿಸಬೇಕೆಂದು ಸರ್ಕಾರದವರು ವಿಧಿಸುವುದಕ್ಕೆ ಮುಂಚೆ, ಅವನು ತನ್ನ ಯಜಮಾನನಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದನು. ಅದರ ಪ್ರಕಾರ, ಅವನು ತನ್ನ ಯಜಮಾನನಿಗೆ ವರುಷಕ್ಕಿಷ್ಟೆಂದು ಒಂದು ನಿಗದಿಯಾದ ಹಣವನ್ನು ಕೊಟ್ಟು ಆ ಮೇಲೆ ತನ್ನ ಸ್ವಾತಂತ್ರ್ಯವನ್ನು ಪಡೆಯಬಹುದೆಂದೂ, ಅದುವರೆಗೆ ಅವನು ಹಣವನ್ನು ಸಂಪಾದಿಸುವುದಕ್ಕಾಗಿ ಎಲ್ಲಿಬೇಕಾದರೂ ಕೆಲಸ ಮಾಡಬಹುದೆಂದೂ ಗೊತ್ತಾಗಿದ್ದಿತು. ಆದರೆ ಅವನು ತಾನಿದ್ದ ವರ್ಜೀನಿಯ ದೇಶದಲ್ಲಿ ದುಡ್ಡು ಸಿಕ್ಕುವ ಯಾವ ಕೆಲಸವೂ ದೊರೆಯದಿರುವುದನ್ನು ನೋಡಿ, ಓಹಿಯೊ ಪ್ರಾಂತ್ಯಕ್ಕೆ ಹೋಗಿ, ಅಲ್ಲಿ ಕೆಲಸ ಮಾಡುತ್ತಿದ್ದನು. ಸ್ವಲ್ಪಕಾಲದೊಳಗಾಗಿ ಸರ್ಕಾರದವರ ಅಪ್ಪಣೆಯಂತೆ ಎಲ್ಲರಿಗೂ ಬಿಡುಗಡೆಯಾದಾಗ, ಎಲ್ಲರ ಜತೆಯಲ್ಲಿ ಇವನಿಗೂ ಬಿಡುಗಡೆಯಾಯಿತು. ಆ ಮೇಲೆ ಇವನು ತನ್ನ ಯಜಮಾನನಿಗೆ ಒಂದು ಕಾಸನ್ನೂ ಕೊಡಬೇಕಾದುದಿಲ್ಲದಿದ್ದರೂ ಇವನನ್ನು ಯಾರೂ ಕೇಳತಕ್ಕವರಿರಲಿಲ್ಲ. ಅವನ ಮನಸ್ಸು ಮಾತ್ರ ಅದಕ್ಕೊಪ್ಪಬಡಲಿಲ್ಲ. ಅದುವರೆಗೆ ತಾನು ಕೊಡಬೇಕಾಗಿದ್ದ ಒಂದು ಸಾವಿರ ರೂಪಾಯಿಗಳನ್ನು ಬಡ್ಡಿಯೊಡನೆ ತೆಗೆದುಕೊಂಡು ತನ್ನ ಯಜಮಾನನಿರುವ ಸ್ಥಳಕ್ಕೆ ಹೋಗಿ ಅದನ್ನು ತಲುಪಿಸಿದನು. ಅಷ್ಟು ಕಷ್ಟಪಟ್ಟು, ತಾನು ಆಡಿದ ಮಾತನ್ನು ಉಳಿಸಿಕೊಳ್ಳದಿದ್ದರೆ, ಸ್ವಾತಂತ್ರ್ಯ ಬಂದರೂ ತನಗೆ ಆ ಸ್ವಾತಂತ್ರ್ಯದ ಸುಖ ಮಾತ್ರ ಬರುತ್ತಿರಲಿಲ್ಲ ಎಂದು ಹೇಳಿದನು.

ನೀಗ್ರೊ ಜನರ ಸ್ಥಿತಿ.—ಹೀಗೆ ಹೇಳಿದುದರಿಂದ, ಆಗ ಜೀತಗಾರಿಕೆಯೇ ಸುಖಕರವಾಗಿದ್ದಿತೆಂದೂ, ಕೆಲವರು ಅದರಲ್ಲಿಯೇ ಇರಲು ಇಷ್ಟಪಡುತ್ತಿದ್ದರೆಂದೂ ತಿಳಿಯಕೂಡದು. ಬಿಟ್ಟರೆ ಸಾಕೆಂದು ಎಲ್ಲರೂ ಒದ್ದಾಡುತ್ತಿದ್ದರು. ಬಿಡುಗಡೆ ಬೇಡವೆಂದಾಗಲಿ ಅಥವಾ ಸ್ವಾತಂತ್ರ್ಯ ಬಂದ ಮೇಲೆ ಮತ್ತೆ ಜೀತಗಾರಿಕೆಗೆ ಹೋಗುತ್ತೇನೆಂದಾಗಲಿ ಹೇಳಿದವರು ಯಾರೂ ಇರಲಿಲ್ಲ. ಜೀತಗಾರಿಕೆಯಲ್ಲಿ ಸಿಕ್ಕಿ ನರಳುವುದಕ್ಕಿಂತ ದೊಡ್ಡದಾದ ದೌರ್ಭಾಗ್ಯವು ಮತ್ತಾವುದೂ ಇಲ್ಲವೆಂದು ಎಲ್ಲರೂ ಭಾವಿಸಿದ್ದರು. ನಾವು ಇಂತಹ ದುರ್ದೆಶೆಯನ್ನನುಭವಿಸಬೇಕಾಗಿದ್ದಿತು. ಇದ

ಕ್ಕಾಗಿ ನಮ್ಮ ದೇಶದವರನ್ನು ಬೈದು ಫಲವೇನು ? ಆ ಕೆಟ್ಟ ಪದ್ಧತಿಯು ಹೇಗೋ ಬಂದಿತು. ಸರ್ಕಾರದವರೂ ಅದಕ್ಕೆ ಬೆಂಬಲ ಕೊಟ್ಟು ನಡೆಸುತ್ತಾ ಬಂದರು. ಕೊನೆಗೆ ಇದನ್ನು ಬಿಟ್ಟುಬಿಡಬೇಕೆಂದರೂ ಅಸಾಧ್ಯವಾಗಿ ತೋರುವ ಹಾಗಾಯಿತು. ಆದರೂ ಅಮೆರಿಕಾ ದೇಶದಲ್ಲಿದ್ದ ಒಂದು ಕೋಟಿ ಕಪ್ಪು ಜನರಿಗೆ ಈ ಸಮಯದಲ್ಲಿದ್ದ ಅನುಕೂಲ್ಯವೂ, ಮುಂದೆ ಉತ್ತಮಸ್ಥಿತಿಗೆ ಬರಬಹುದೆಂಬ ಪ್ರತ್ಯಾಶೆಯೂ ಪ್ರಪಂಚದ ಮತ್ತಾವ ನೀಗ್ರೊ ಜನರಿಗೂ ಇರಲಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆನು.

ಜೀತಗಾರಿಕೆಯಿಂದ ಉಂಟಾದ ಕೆಡಕು.—ಈ ಪದ್ಧತಿಯಿಂದ, ಜೀತಗಾರರಾಗಿದ್ದವರಿಗೆ ಎಷ್ಟು ಕೆಡಕಾಯಿತೋ ಜೀತಗಾರರನ್ನಿಟ್ಟುಕೊಂಡಿದ್ದವರಿಗೂ ಅಷ್ಟೇ ಆಯಿತೆಂದು ಧಾರಾಳವಾಗಿ ಹೇಳಬಹುದು. ಅಗ ಇದ್ದ ಸಪಾಟಿನಲ್ಲಿ, ಕೆಲಸ ಮಾಡುವುದು ಮನುಷ್ಯನ ಯೋಗ್ಯತೆಗೆ ಕಡಮೆಯೆಂದು ಭಾವಿಸಲ್ಪಟ್ಟಿದ್ದಿತು. ಈ ಕಾರಣದಿಂದ, ಮೇಲಿನ ಸ್ಥಿತಿಯವರೆಲ್ಲರೂ ಕೆಲಸ ಮಾಡುವುದಕ್ಕೆ ಹಿಂಜರಿಯುತ್ತಿದ್ದರು. ನಮ್ಮವರು ಜೀತಗಾರರಾಗಿದ್ದುದರಿಂದ ಹೇಗಾದರೂ ಕೆಲಸ ಮಾಡಿಯೇ ತೀರಬೇಕಾಗಿದ್ದಿತು. ಆದರೆ ಬಿಳಿಯ ಜನರು ಏನೇನೂ ಕೆಲಸ ಮಾಡದೆ ಇರುತ್ತಿದ್ದ ಕಾರಣ ಅವರು ಕೇವಲ ಪರತಂತ್ರರಾದರು. ಯಾವಾಗಲೂ ಮತ್ತೊಬ್ಬರ ಸಹಾಯವಿಲ್ಲದಿದ್ದರೆ ಅವರಿಗೆ ಗತಿಯೇ ಇಲ್ಲದಂತಾಯಿತು. ಕಪ್ಪು ಜನರು ಕೆಲಸ ಮಾಡಬೇಕಲ್ಲಾ ಎಂದು ಕೆಲಸ ಮಾಡುತ್ತಿದ್ದರೇ ಹೊರತು, ಅದರಲ್ಲಿ ಶ್ರದ್ಧೆಯನ್ನು ವಹಿಸಿ, ದಿನದಿನಕ್ಕೆ ಹೆಚ್ಚು ಬುದ್ಧಿವಂತಿಕೆಯನ್ನು ಉಪಯೋಗಿಸಿ, ಕೆಲಸ ಮಾಡಬೇಕೆಂಬ ಯೋಚನೆಯೇನೂ ಇರಲಿಲ್ಲ. ಯಜಮಾನರಿಗೆ ಕೆಲಸ ಮಾಡುವುದಕ್ಕೇ ಬರುತ್ತಿರಲಿಲ್ಲ. ಸೇವಕರಿಗೆ ಕೆಲಸ ಮಾಡುವುದರಲ್ಲಿ ಇಚ್ಛೆಯೂ, ಬುದ್ಧಿವಂತಿಕೆಯೂ ಇರಲಿಲ್ಲ. ಹೀಗಾಗಿದ್ದ ಕಾರಣ, ಕೆಲಸವು ನೆಟ್ಟಗೂ, ತೃಪ್ತಿಕರವಾಗಿಯೂ ನಡೆಯುತ್ತಿರಲಿಲ್ಲ.

ಸರ್ಕಾರದವರು ಜೀತಗಾರಿಕೆಯನ್ನು ತಪ್ಪಿಸಿದ್ದು.—ಕೊನೆಗೆ ನಮಗೆ ಸ್ವಾತಂತ್ರ್ಯ ಬರುವ ಕಾಲವು ಒದಗಿ ಬಂದಿತು. ಯುದ್ಧದಲ್ಲಿ ನಮ್ಮ ಪಕ್ಷವನ್ನು ಹಿಡಿದು ಹೋರಾಡುತ್ತಿದ್ದವರಿಗೆ ಜಯವಾಯಿತು. ಈ ವರ್ತಮಾನ ತಿಳಿದೊಡನೆಯೇ ನಮ್ಮವರಲ್ಲಿ ಆನಂದಕ್ಕೆ ಪಾರವೇ ಇರಲಿಲ್ಲ. ಯಾರನ್ನು ನೋಡಿದರೂ ಸಂತೋಷದಿಂದ ಹಾಡುತ್ತಿದ್ದರು. ಅರ್ಧರಾತ್ರಿಯಾದರೂ ಗಾನವು ನಿಲ್ಲುತ್ತಿರಲಿಲ್ಲ. ಇಷ್ಟುಮಟ್ಟಿನ

ಆನಂದಾನುಭವಕ್ಕೆ ಸ್ವಾತಂತ್ರ್ಯಲಾಭವೇ ಮುಖ್ಯಕಾರಣವಾಗಿತ್ತು. ಹಿಂದೆ ಇಂತಹ ಮಾತನ್ನು ಹೇಳಿದರೆ, ಸ್ವಾತಂತ್ರ್ಯವೆಂಬುದು ಪರಲೋಕದಲ್ಲಿ ನಮಗೆ ಬರಬಹುದಾದ ಸ್ವಾತಂತ್ರ್ಯವೇ ಹೊರತು ಈ ಲೋಕದಲ್ಲಿ ಇಲ್ಲವೇ ಇಲ್ಲವೆಂದು, ಅಂಜಿಕೆಯಿಂದ ಮೆಲ್ಲ ಮೆಲ್ಲಗೆ ಹೇಳುತಿದ್ದರು. ಆದರೆ, ಈಗ ಧೈರ್ಯವಾಯಿತು. ಈಗ ಯಾರೂ ಸ್ವಾತಂತ್ರ್ಯ ಶಬ್ದಕ್ಕೆ ಈ ವಿಧವಾಗಿ ವ್ಯಾಖ್ಯಾನ ಮಾಡಲಿಲ್ಲ. ಇಹಲೋಕದ ಸ್ವಾತಂತ್ರ್ಯವನ್ನನುಭವಿಸಲು ಎಲ್ಲರೂ ಸಿದ್ಧರಾದರು. ಈ ವಿಷಯವು ನಮಗೆ ಸ್ಪಷ್ಟವಾಗಿ ತಿಳಿಯುವುದಕ್ಕೆ ಮೊದಲು ದಿವಸ ಬೆಳಿಗ್ಗೆ ನಮ್ಮ ಯಜಮಾನನ ಬಂಗಲಿಯಲ್ಲಿ ಏನೋ ಒಂದು ವಿಶೇಷ ನಡೆಯುವುದೆಂದು ವರ್ತಮಾನ ಬಂದಿತು. ಆ ದಿನ ರಾತ್ರಿಯನ್ನು ಹೇಗೆಯೇ ಕಳೆದೆವು; ಒಬ್ಬರಿಗೂ ನಿದ್ರೆಯೇ ಬರಲಿಲ್ಲ. ಬೆಳಗಾದ ಕೂಡಲೇ, ಮಕ್ಕಳು ಮೊದಲುಗೊಂಡು ಎಲ್ಲರೂ ಬಂಗಲಿಗೆ ಬರಬೇಕೆಂದು ಹೇಳಿ ಕಳುಹಿಸಿದರು. ನಾವು ಹೋಗುವುದರೊಳಗಾಗಿ, ನಮ್ಮ ಯಜಮಾನನ ಮನೆಯವರೆಲ್ಲರೂ ಹೊರಗಣ ಜಗಲಿಯ ಮೇಲೆ ನಿಂತು ನೋಡುತ್ತಿದ್ದರು. ಆಗ ಅವರೆಲ್ಲರೂ ಬಹಳ ವ್ಯಸನದಲ್ಲಿರುವಂತೆ ತೋರಿತು. ಏತಕ್ಕೆ ? ನಾವು ಹೊರಟುಹೋಗುವುದರಿಂದ ಅವರಿಗೆ ನಷ್ಟವಾಗುವುದೆಂದೇ ? ಇರಲಾರದು. ಅವರಿಗೆ ನಮ್ಮಲ್ಲಿ ಒಂದು ವಿಧವಾದ ಪುತ್ರವಾತ್ಸಲ್ಯವಿದ್ದಿತು. ಇದರಿಂದ ನಾವು ಹೊರಟುಹೋಗುತ್ತೇವಲ್ಲಾ ಎಂದು ಅವರಿಗೆ ವ್ಯಸನವಾಗುತ್ತಿತ್ತೇ ಹೊರತು ಮತ್ತೆ ಬೇರೆಯಲ್ಲ. ಆಗ ನಡೆದವುಗಳಲ್ಲಿ ಈಗ ನನಗೆ ಚೆನ್ನಾಗಿ ಜ್ಞಾಪಕವಾಗಿರುವುದಾವುದೆಂದರೆ:—ಯಾರೋ ಒಬ್ಬರು ಅಧಿಕಾರಿಗಳು ಬಂದು, ಸ್ವಲ್ಪಹೊತ್ತು ಮಾತನಾಡಿ ಆ ಮೇಲೆ ಒಂದು ಕಾಗದವನ್ನು ಓದಿದರು. ಅದೇ ನಮ್ಮೆಲ್ಲರಿಗೂ ಕೊಡಲ್ಪಟ್ಟ ಸ್ವಾತಂತ್ರ್ಯದ ಪ್ರಕಟನೆಯಾಗಿದ್ದಿತು. ಅದನ್ನೋದಿಯಾದ ಮೇಲೆ, ಇನ್ನು ಮುಂದೆ “ ನೀವೆಲ್ಲರೂ ಸ್ವತಂತ್ರರಾದಿರಿ, ನೀವೆಲ್ಲಿಗೆ ಬೇಕಾದರೂ ಹೋಗಬಹುದು, ಏನು ಬೇಕಾದರೂ ಮಾಡಬಹುದು ” ಎಂದು ಹೇಳಿದರು. ಆಗ ನಮ್ಮ ತಾಯಿಗೆ ಉಂಟಾದ ಸಂತೋಷವೇ ಸಂತೋಷ. ಆಕೆಯು ನಮ್ಮನ್ನು ಬಾರಿಬಾರಿಗೂ ಮುದ್ದಿಟ್ಟುಕೊಂಡಳು. ಅವಳ ಕಣ್ಣುಗಳಿಂದ ಆನಂದಬಾಷ್ಪವು ಧಡಧಡನೆ ಸುರಿಯಿತು. ಬಳಿಕ ಅವಳು ನಮಗೆ ಆ ಪ್ರಕಟನೆಯ ಅರ್ಥವನ್ನು ಹೇಳಿದಳು. ಇಂತಹ ಸುದಿನವ ಬಂದೀತೇ ಎಂದು ಕಾದಿದ್ದೆನೆಂದೂ, ಒಂದು ವೇಳೆ ಇಂತಹ ಸುದಿನವು ಬಂದೂ ನಾನು ಬದುಕಿರುವುದರೊಳಗಾಗಿ ಅದು ಬರುವುದೋ ಇಲ್ಲವೋ

ಎಂದು ತವಕಪಡುತಿದ್ದೆನೆಂದೂ ಈಗ ಬಹಳ ಸಂತೋಷವಾಯಿತೆಂದೂ ಹೇಳಿದಳು. ಇದರಂತೆಯೇ ಆಗ ಎಲ್ಲಿ ನೋಡಿದರೂ ಸಂತೋಷವೂ, ಯಾರನ್ನು ನೋಡಿದರೂ ನಗುಮುಖವೂ ಕಾಣುತಿದ್ದವು. ಆ ಮಹಾ ಸಂತೋಷದಿಂದ ಕೆಲವರು ಹುಚ್ಚರಂತೆ ಕುಣಿದಾಡುತಿದ್ದರು. ಆದರೆ ಇವೆಲ್ಲವೂ ಒಂದು ಗಳಿಗೆ ಮಾತ್ರ ಇದ್ದವು. ಉತ್ತರ ಕ್ಷಣದಲ್ಲಿಯೇ ಸಂತೋಷ ಹೋಗಿ ಚಿಂತೆಯು ತಲೆಹಾಕಿತು. ಸ್ವಾತಂತ್ರ್ಯವೇನೋ ಬಂದಿತು. ಬರಿಯ ಸ್ವಾತಂತ್ರ್ಯದಿಂದ ಆಗುವ ಫಲವೇನು ? ತಮಗೂ ತಮ್ಮ ಮಕ್ಕಳಿಗೂ ಊಟ ಉಪಚಾರಗಳು ನಡೆಯುವುದು ಹೇಗೆ ? ಮನೆಮಠಗಳೆಲ್ಲಿ ? ದುಡ್ಡು ಕಾಸು ಬರುವುದೆಲ್ಲಿಂದ ? ಹೀಗೆ ಅನೇಕ ವಿಧವಾದ ಯೋಚನೆಗಳು ನಮ್ಮವರ ಮನಸ್ಸನ್ನೆಲ್ಲ ಆಕ್ರಮಿಸುತ ಬಂದವು. ಆಗ ನಮ್ಮವರ ಗತಿಯು ಹತ್ತು ವರ್ಷದ ಹುಡುಗನು ತನ್ನ ಅನ್ನಬಟ್ಟೆಗಳನ್ನು ಸಂಪಾದಿಸಿಕೊಂಡು ಸಂಸಾರ ಮಾಡಿಕೊಂಡಿರ ಬೇಕೆಂದು ಏರ್ಪಡಿಸಿದ ಹಾಗಾಯಿತು. ಎಲ್ಲರೂ ಸ್ವಾತಂತ್ರ್ಯ ಬರಲಿಲ್ಲವೆಂದು ತವಕಪಡುತಿದ್ದರೇ ಹೊರತು, ಸ್ವಾತಂತ್ರ್ಯ ಬಂದರೆ ಅದರ ಹಿಂದೆಯೇ ಎಷ್ಟು ಕಷ್ಟ ಒದಗುವುದೋ ಅದು ಒಬ್ಬರಿಗೂ ತೋರಿರಲಿಲ್ಲ. ಆಗ ಕೆಲವರಿಗೆ ಅರವತ್ತು ಎಪ್ಪತ್ತು ವರ್ಷಗಳಾಗಿದ್ದವು ಇಂಥವರು ಹುಟ್ಟಿದಂದಿನಿಂದ ಕಾಣದ ಸ್ಥಳಗಳಿಗೆ ಹೋಗಿ ಕೆಲಸಮಾಡುವುದೆಂದರೇನು ? ಮಾಡುವುದು ತಾನೇ ಏನು ? ಜೀವನ ನಡೆಯುವುದೇ ಬಹಳ ಕಷ್ಟವಾಯಿತು. ಸಾಲದುದಕ್ಕೆ, ನಾಲ್ವತ್ತು ಐವತ್ತು ವರ್ಷಗಳು ಒಂದೇ ಕಡೆಯಲ್ಲಿದ್ದು ತಮ್ಮ ಯಜಮಾನರುಗಳಲ್ಲಿ ಒಂದು ವಿಧವಾದ ವಿಶ್ವಾಸ ಹುಟ್ಟಿ, ಈಗ ಹಠಾತ್ತಾಗಿ ಎಲ್ಲರನ್ನೂ ಬಿಟ್ಟು ಹೋಗಬೇಕೆಂದರೆ, ಎಲ್ಲರಿಗೂ ಅಸಾಧ್ಯವಾಗಿ ಪರಿಣಮಿಸಿತು. ಇದರಿಂದ ಕೆಲವರಿಗೆ ತಮ್ಮ ಹಿಂದಣ ಯಜಮಾನರ ಮನೆಗೆ ಹೋಗಿ ಮಾತನಾಡಿಕೊಂಡು ಬಂದ ಹೊರತು ಮನಸ್ಸಿಗೆ ಸರಿಯಾಗಿ ಸಮಾಧಾನವಾಗಲಿಲ್ಲ.

ನಾನು ಮಾಲ್ಡನ್ ಪಟ್ಟಣಕ್ಕೆ ಹೋದುದು.—ಹೀಗೆ ಸ್ವಾತಂತ್ರ್ಯ ಬಂದ ಮೇಲೆ, ನಮ್ಮ ಬಲತಂದೆಯು ತಾನು ಪಶ್ಚಿಮ ವರ್ಜಿನಿಯ ದೇಶದಲ್ಲಿರುವುದಾಗಿಯೂ, ಅಲ್ಲಿಗೆ ನಾವೆಲ್ಲರೂ ಬರಬೇಕೆಂದೂ ಹೇಳಿ ಕಳುಹಿಸಿದನು. ನಾವಿದ್ದ ಸ್ಥಳಕ್ಕೂ ಅಲ್ಲಿಗೂ ನೂರಾರು ಮೈಲಿಗಳಾಗುತಿದ್ದವು. ಆದರೂ ಅದವಲ್ಲಿ ಮುಕ್ಕಾಲುಪಾಲು ದಾರಿಯನ್ನು ನಡೆದುಕೊಂಡು ಹೋದೆವು. ದಾರಿಯಲ್ಲಿ ನಾವು ಅನುಭವಿಸಿದ ಕಷ್ಟವನ್ನು ಹೇಳತೀರದು. ಹೊದೆಯುವುದಕ್ಕೆ ಬಟ್ಟೆ ಇರಲಿಲ್ಲ. ನಿಲ್ಲುವುದಕ್ಕೆ ಸ್ಥಳ

ವಿರಲಿಲ್ಲ. ಅಂತೂ ಇಂತೂ ನಮ್ಮ ತಂದೆ ಇದ್ದ ಮಾಲ್ಡನ್ ಪಟ್ಟಣಕ್ಕೆ ಹೋಗಿ ಸೇರಿದೆವು. ಆತನು ಆಗ ಅಲ್ಲಿ ಒಂದು ಉಪ್ಪಿನ ಗಣಿಯಲ್ಲಿ ಕೆಲಸ ಮಾಡುತಿದ್ದನು. ನಾವು ಹೋದ ಹೊತ್ತಿಗೆ ಸರಿಯಾಗಿ ನಮ್ಮ ವಾಸಕ್ಕೆ ಒಂದು ಗುಡಿಸಲು ಸಿದ್ಧವಾಗಿ ದ್ದಿತು. ಆದರೆ, ನಾವು ಮೊದಲಿದ್ದ ಗುಡಿಸಲಿಗಿಂತಲೂ ಅದು ಯಾವ ವಿಧದಲ್ಲಿಯೂ ಉತ್ತಮವಾಗಿರಲಿಲ್ಲ. ಕೆಲವು ಭಾಗಗಳಲ್ಲಿ ಅದಕ್ಕಿಂತಲೂ ಕೆಟ್ಟ ಸ್ಥಿತಿಯಲ್ಲಿತ್ತೆಂದು ಹೇಳಬಹುದು. ನಮ್ಮ ಮೊದಲಿನ ಮನೆಯುಲ್ಲಿ ಯಾವುದಕ್ಕೆ ಕಡಮೆಯಾಗಿದ್ದರೂ, ನಿರ್ಮಲವಾದ ಗಾಳಿಗೇನೂ ಕಡಮೆ ಇರಲಿಲ್ಲ. ಈಗಿನ ಮನೆಯಲ್ಲಿ ಅದೂ ಇರಲಿಲ್ಲ. ಒಂದು ಮನೆಯ ಮೇಲೆ ಮತ್ತೊಂದನ್ನು ಕಟ್ಟಿಬಿಟ್ಟಿದ್ದರು. ಮನೆಯ ಸುತ್ತಲೂ ಕಸವೂ ಕೊಳೆಯೂ ತುಂಬಿದ್ದವು. ಅದರ ದುರ್ಗಂಧವನ್ನು ಹೇಳತೀರದು. ಅಲ್ಲಿದ್ದ ಜನಗಳು ಕುಡಿತ, ಜಗಳ, ಜೂಜು ಮುಂತಾದ ದುರ್ವ್ಯಾಪಾರಗಳಲ್ಲಿಯೇ ಕಾಲಕಳೆ ಯುತಿದ್ದರು. ನಾನು ಚಿಕ್ಕವನಾಗಿದ್ದರೂ, ನನ್ನ ತಂದೆಯು ನನ್ನನ್ನು ಒಂದು ಉಪ್ಪಿನ ಗಣಿಗೆ ಕರೆದುಕೊಂಡು ಹೋಗಿ ಅಲ್ಲಿ ಕೆಲಸಕ್ಕೆ ಸೇರಿಸಿದರು. ಒಂದೊಂದು ದಿವಸ ನಾಲ್ಕು ಘಂಟೆಗೆ ಎದ್ದು ಕೆಲಸಕ್ಕೆ ಹೋಗಬೇಕಾಗಿದ್ದಿತು.

ವಿದ್ಯಾಭ್ಯಾಸಕ್ಕೆ ಪ್ರಾರಂಭ—ಈ ಚಿಕ್ಕ ವಯಸ್ಸಿನಲ್ಲಿ ಓದುಬರಹವನ್ನು ಕಲಿಯಬೇಕೆಂದು ನನಗೆ ಬಹಳ ಆಸೆಯಾಯಿತು. ಇದು ನನಗೆ ಚನ್ನಾಗಿ ಜ್ಞಾಪ ಕವಿದೆ. ನಾನು ಸಾಯುವುದರೊಳಗಾಗಿ ಇನ್ನೇನೂ ಮಾಡಲಾರದೆ ಹೋದರೂ ಸಾಮಾನ್ಯವಾದ ಪುಸ್ತಕಗಳನ್ನೂ ವರ್ತಮಾನಪತ್ರಿಕೆಗಳನ್ನೂ ಓದುವ ಮಟ್ಟಿಗಾದ ರೂ ಅಕ್ಷರವನ್ನು ಕಲಿಯಬೇಕೆಂದು ನಿರ್ಧರಮಾಡಿಕೊಂಡೆನು. ಆದುದರಿಂದ, ಈ ಹೊಸ ಪ್ರದೇಶದಲ್ಲಿ ಕಾಲೂರಿದೊಡನೆಯೇ, ಒಂದು ಪುಸ್ತಕವನ್ನು ತಂದುಕೊಡ ಬೇಕೆಂದು ನಾನು ನಮ್ಮ ತಾಯಿಯನ್ನು ಕೇಳಿಕೊಂಡೆನು. ಅವಳಿಗೆ ಅದು ಹೇಗೆ ಸಿಕ್ಕಿತೋ, ಅದನ್ನು ಎಲ್ಲಿಂದ ತಂದಳೋ ನಾನು ಕಾಣೆನು. ಅಂತು ಒಂದು ಬಾಲ ಪಾಠದ ಪುಸ್ತಕವನ್ನು ತಂದು ನನ್ನ ಕೈಗೆ ಕೊಟ್ಟಳು. ಓದುವುದನ್ನು ಕಲಿಯಬೇ ಕಾದರೆ ಮೊದಲು ಅಕ್ಷರಗಳನ್ನು ಕಲಿಯಬೇಕೆಂದು ಹಿಂದೆ ಯಾರೋ ದೊಡ್ಡವರು ಹೇಳಿದ್ದುದು ನನ್ನ ಸ್ಮರಣೆಯುಲ್ಲಿದ್ದಿತು. ಅದೇ ಪ್ರಕಾರವಾಗಿ, ನಾನು ಮೊದಲು ಅಕ್ಷರಗಳನ್ನು ಕಲಿತುಕೊಳ್ಳುವುದಕ್ಕೆ ಉಪಕ್ರಮಿಸಿ, ಕೆಲವು ವಾರಗಳಲ್ಲಿಯೇ ಅಕ್ಷರಗಳನ್ನೆಲ್ಲ ಕಲಿತುಕೊಂಡೆನು. ಅಕ್ಷರಗಳನ್ನು ಕಲಿಯುವುದಕ್ಕೆ ಇಷ್ಟು ದಿನ

ಗಳು ಬೇಕೆ ಎಂದು ಯಾರಾದರೂ ಕೇಳಬಹುದು ? ಆಗ ನಾನು ಸ್ವಯಂ ಗುರುವಾಗಿಯೂ ಸ್ವಯಂ ಶಿಷ್ಯನಾಗಿಯೂ ಇದ್ದೆನು. ನನಗೆ ಕಲಿಸಿಕೊಡಿರೆಂದು ಯಾರಲ್ಲಿ ಹೋಗಿ ಕೇಳಲಿ ? ನಮ್ಮ ಸುತ್ತಮುತ್ತಲಿದ್ದವರೊಳಗಾಗಿ ನಮ್ಮವನೊಬ್ಬನೂ ಅಕ್ಷರ ತಿಳಿದವನಾಗಿರಲಿಲ್ಲ. ಓದುಬರಹ ಬಲ್ಲವರಾದ ಬಿಳಿಯ ಜನರಲ್ಲಿ ಹೋಗಿ ಕೇಳುವುದಕ್ಕೆ ಬಹಳ ಭಯವಾಗುತ್ತಿದ್ದಿತು. ಓದುವುದಕ್ಕೇನೋ ಬಹಳ ಆಸೆ ಇದ್ದಿತು. ಅಂತೂ ಇಂತೂ ಅಕ್ಷರಗಳು ಬಂದ ಹಾಗಾಯಿತು. ನನಗೆ ಎಷ್ಟು ಆಸೆ ಇದ್ದಿತೋ ನಮ್ಮ ತಾಯಿಗೂ ಅಷ್ಟೇ ಆಸೆ ಇದ್ದಿತು. ನನಗಿಂತಲೂ ಅವಳಿಗೆ ಹೆಚ್ಚಾಗಿಯೇ ಇದ್ದಿತೆಂದು ಹೇಳಬಹುದು. ಓದು ಕಲಿಯುವುದಕ್ಕೆ ನಾನೆಷ್ಟು ಪ್ರಯತ್ನಪಟ್ಟೆನೋ, ನನಗೆ ವಿದ್ಯೆಯನ್ನು ಕಲಿಸುವುದಕ್ಕೆ ನಮ್ಮ ತಾಯಿಯೂ ಅಷ್ಟು ಪ್ರಯತ್ನಪಟ್ಟಳು. ಅವಳಿಗೆ ಓದುಬರಹ ಬಾರದಿದ್ದರೂ, ತನ್ನ ಮಕ್ಕಳು ಮುಂದಕ್ಕೆ ಬರಬೇಕೆಂಬ ಆಸೆಯು ಅವಳಿಗೆ ವಿಶೇಷವಾಗಿದ್ದಿತು. ಹೀಗಿದ್ದ ಕಾರಣ ಯಾವ ಸ್ಥಿತಿಯಲ್ಲಿದ್ದರೂ ಎಂತಹ ಕಷ್ಟ ಬಂದರೂ ಅವಳು ಅಧೈರ್ಯಪಡುತ್ತಿರಲಿಲ್ಲ. ಧೈರ್ಯದಿಂದ ನಿಂತು ಉತ್ತಮಸ್ಥಿತಿಗೆ ಬರಲು ಕೈಲಾದನುಟ್ಟಿಗೆ ಪ್ರಯತ್ನಮಾಡುತಿದ್ದಳು. ಈ ಸ್ವಭಾವವು ನನಗೆ ನಮ್ಮ ತಾಯಿಯ ಹಾಲಿನ ಜತೆಯಲ್ಲಿಯೇ ಬೆರತು ಬಂದಿತೆಂದು ತೋರುತ್ತದೆ.

ವಿದ್ಯಾಭ್ಯಾಸಕ್ಕ ಅನುಕೂಲ್ಯ.—ಹೀಗಿರುವ ಸಮಯದಲ್ಲಿ, ಓದುವುದಕ್ಕೆ ಅರಿತಿದ್ದ ಒಬ್ಬ ನೀಗ್ರೊ ಹುಡುಗನು ಆ ಪಟ್ಟಣಕ್ಕೆ ಬಂದನು. ಅವನಿಗೆ ಓದು ಬರುವುದೆಂದು ತಿಳಿದೊಡನೆಯೇ, ನಮ್ಮ ಜನರೆಲ್ಲರೂ ಪ್ರತಿ ದಿನವೂ ಸಾಯಂಕಾಲ ಕೆಲಸ ಮುಗಿದ ಮೇಲೆ ಅವನ ಕೈಯಲ್ಲಿ ಒಂದು ವರ್ತಮಾನ ಪತ್ರಿಕೆಯನ್ನು ಕೊಟ್ಟು, ಅವನ ಸುತ್ತಲೂ ಮುತ್ತಿಕೊಳ್ಳುತಿದ್ದರು. ಆಗ ಅವನು ಅವರಿಗೆ ಆ ಪತ್ರಿಕೆಯಲ್ಲಿದ್ದ ವರ್ತಮಾನಗಳನ್ನು ಓದಿ ತಿಳಿಸುತಿದ್ದನು. ಇದನ್ನು ನೋಡಿ ನಾನು 'ಇವನ ಸಮಾನ ಪುಣ್ಯವಂತನೇ ಇಲ್ಲ ; ಇಷ್ಟು ಮಟ್ಟಿಗೆ ಪತ್ರಿಕೆಗಳನ್ನೋದುವುದಕ್ಕೆ ಬಂದ ಮೇಲೆ ಇನ್ನು ಹೆಚ್ಚು ಬೇಕಾದುದೇನು' ಎಂದುಕೊಂಡೆನು.

ಪಾಠಶಾಲಾ ನಿರ್ಮಾಣ.—ಇಂತಹ ಸಮಯದಲ್ಲಿ, ಮಕ್ಕಳು ಓದುವುದಕ್ಕೆ ಯಾವುದಾದರೊಂದು ಪಾಠಶಾಲೆಯನ್ನೇರ್ಪಡಿಸಬೇಕೆಂದು ನಮ್ಮವರ ಮನಸ್ಸಿಗೆ ತೋರಿತು. ಆದರೆ, ಆಗ್ಯೆ ಆ ಕೆಲಸವು ಅಕ್ಕಿಯಿಲ್ಲದೆ ಅನ್ನಮಾಡುವ ಹಾಗಿದ್ದಿತು.

ಎಲ್ಲರಿಗೂ ಉತ್ಸಾಹವೇನೋ ತುಂಬಿದ್ದಿತು ; ಹುಡುಗರೂ ಪಾಠಶಾಲೆಗೆ ಸೇರುವುದಕ್ಕೆ ಸಿದ್ಧರಾಗಿದ್ದರು. ಆದರೇನು? ಪಾಠ ಹೇಳಿಕೊಡುವುದಕ್ಕೆ ಉಪಾಧ್ಯಾಯರು ಯಾರೂ ಇರಲಿಲ್ಲ. ಪತ್ರಿಕೆಯನ್ನೋದುತ್ತಿದ್ದ ಹುಡುಗನ ವಿಷಯವನ್ನು ವಿಚಾರ ಮಾಡಿ, ಅವನು ತೀರ ಹುಡುಗನೆಂದು ಬಿಟ್ಟುಬಿಡಬೇಕಾಯಿತು. ಕೊನೆಗೆ, ಹಿಂದೆ ಸಿಪಾಯಿಯಾಗಿದ್ದ ಆ ಊರಿನವನೊಬ್ಬನು ಸುಮಾರಾಗಿ ಬುದ್ಧಿವಂತನಾಗಿರುವನೆಂದು ಕೇಳಿ, ಆತನನ್ನು ಕರೆಯಿಸಿ ಗೊತ್ತುಮಾಡಿಕೊಂಡರು. ಒಂದೊಂದು ಮನೆಯವರೂ ತಿಂಗಳಿಗಿಷ್ಟೆಂದು ನಿಗದಿಯಾಗಿ ಉಪಾಧ್ಯಾಯನಿಗೆ ಕೊಡತಕ್ಕುದೆಂದು ನಿಷ್ಕರ್ಷೆಯಾಯಿತು. ಆದರೆ, ಪಾಠಶಾಲೆಯು ಗೊತ್ತಾಗಲಿಲ್ಲ. ಒಂದೊಂದು ಮನೆಯಲ್ಲಿ ಒಂದೊಂದು ದಿವಸ ಉಪಾಧ್ಯಾಯನಿದ್ದುಕೊಂಡು ಹುಡುಗರಿಗೆ ಪಾಠಹೇಳಬೇಕೆಂದು ಎಲ್ಲರೂ ಒಪ್ಪಿಕೊಂಡರು ಇದರಿಂದ ಆತನಿಗೆ ಬಹಳ ಅನುಕೂಲ್ಯವಾಯಿತು. ಏಕೆಂದರೆ, ಪ್ರತಿಯೊಂದು ಮನೆಯವರೂ ಉಪಾಧ್ಯಾಯನು ಬರುವ ದಿವಸ ಸಾಧ್ಯವಾದ ಮಟ್ಟಿಗೆ ಒಳ್ಳೆಯ ಅಡುಗೆಯನ್ನು ಮಾಡಿ ಬಡಿಸುತಿದ್ದರು. ನಾನು ಒಳ್ಳೆಯ ತಿಂಡಿ ಸಿಕ್ಕುವುದೆಂದು ಉಪಾಧ್ಯಾಯನು ಬರುವ ದಿವಸ ಬಂದರೆ ಸಾಕೆಂದು ಕಾಯ್ದುಕೊಂಡಿರುತಿದ್ದೆನು.

ಪಾಠಶಾಲಾಭಿವೃದ್ಧಿ.—ಈ ಏರ್ಪಾಟು ಇಷ್ಟು ಸಣ್ಣದಾಗಿ ಪ್ರಾರಂಭಿಸಲ್ಪಟ್ಟರೂ, ಜನರೆಲ್ಲರಿಗೂ ನಿಜವಾದ ಅಭಿಲಾಷೆಯೂ, ಉತ್ಸಾಹವೂ ಇದ್ದುದರಿಂದ ಪಾಠಶಾಲೆಯು ಬಲು ಬೇಗ ದೊಡ್ಡದಾಯಿತು. ಎಳೆಯ ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರಿಗೂ ಓದು ಕಲಿಯಬೇಕೆಂದು ಬಹಳ ಆಶೆಯು ಉಂಟಾಯಿತು. ಮುದುಕರು ಓದು ಕಲಿತು ಮಾಡಬೇಕಾದುದೇನೆಂದು ಕೇಳಬಹುದು. ಅವರು ಅಕ್ಷರಗಳನ್ನು ಕಲಿತುಕೊಂಡು ಸಾಯುವುದರೊಳಗಾಗಿ ನಾಲ್ಕು ಪಂಗ್ತಿ ಬೈಬಿಲ (ಕ್ರೈಸ್ತವೇದ) ವನ್ನು ಓದಿ ಪ್ರಾಣಬಿಟ್ಟರೆ ತಮ್ಮ ಜನ್ಮಸಾರ್ಥಕವಾಗುವುದೆಂದು ದೃಢವಾಗಿ ನಂಬಿದ್ದರು. ಉಪಾಧ್ಯಾಯರು ಹೆಚ್ಚುಹೆಚ್ಚಾಗಿ ಸಿಕ್ಕಿದ ಹಾಗೆಲ್ಲ, ಜನಗಳೂ ಹೆಚ್ಚುಹೆಚ್ಚಾಗಿ ಸೇರುತ ಬಂದರು. ಕೊನೆಗೆ, ಬೆಳಗಿನ ಹೊತ್ತು ಮಾತ್ರ ಪಾಠ ನಡೆಯುತ್ತಿದ್ದುದು ಹೋಗಿ, ರಾತ್ರಿಯೂ ನಡೆಯುವ ಹಾಗಾಯಿತು. ಕೊನೆಗೆ ಭಾನುವಾರವೂ ಬಿಡುವಿಲ್ಲದಂತಾಯಿತು. ಹಗಲಿನ ಪಾಠಶಾಲೆ, ರಾತ್ರಿಯ ಪಾಠಶಾಲೆ, ಭಾನುವಾರದ ಪಾಠಶಾಲೆ, ಇವೆಲ್ಲವೂ ತುಂಬಿದವು. ಆಮೇಲೆ, ಸ್ಥಳಸಾಲದೆಂದು ಆಗಾಗ್ಗೆ ಬಂದ ಜನರನ್ನು ಹಿಂದಕ್ಕೆ ಕಳುಹಿಸುವುದಕ್ಕೂ ಉಪಕ್ರಮವಾಯಿತು.

ನನ್ನ ವಿದ್ಯಾಭ್ಯಾಸಕ್ಕೆ ಅಡ್ಡಿ.—ಈ ರೀತಿಯಾಗಿ ಪಾಠಶಾಲೆಯು ಏರ್ಪಟ್ಟಿತು. ಆದರೆ, ನನ್ನ ಗ್ರಹಚಾರವೇನೆಂದು ಹೇಳಲಿ! ನಾನು ಉಪ್ಪಿನ ಗಣಿಯಲ್ಲಿ ಚೆನ್ನಾಗಿ ಕೆಲಸಮಾಡುತ್ತಿದ್ದುದನ್ನು ನೋಡಿ, ನಮ್ಮ ತಂದೆಯು ನನ್ನನ್ನು ಅಲ್ಲಿಯೇ ಸರ್ವದಾ ಇಟ್ಟುಕೊಂಡರೆ ಇನ್ನೂ ಹೆಚ್ಚು ಸಂಪಾದನೆಯಾಗುವುದೆಂದು ಯೋಚಿಸಿ, ನನ್ನನ್ನು ಅಲ್ಲಿಯೇ ಎಡಬಿಡದೆ ನಿಲ್ಲಿಸಿಕೊಳ್ಳಲು ಉಪಕ್ರಮಿಸಿದನು. ಓದುವುದಕ್ಕೇ ಬಿಡುತ್ತಿರಲಿಲ್ಲ. ಆ ಮೇಲೆ ನನ್ನ ಆಶೆಯೆಲ್ಲವೂ ಭಗ್ನವಾಯಿತು. ಸಾಲದುದಕ್ಕೆ, ನಮ್ಮ ಮನೆಯ ಮುಂದೆಯೇ ಹುಡುಗರೆಲ್ಲರೂ ಓದುವುದಕ್ಕೆ ಪುಸ್ತಕಗಳನ್ನು ಹಿಡಿದುಕೊಂಡು ಹೋಗುತ್ತಿದ್ದರು. ಇದನ್ನು ನೋಡಿ ನನಗೆ ಮೊದಲು ಬಹು ಸಂಕಟವಾಯಿತು. ಆ ಮೇಲೆ ಹೇಗೆ ಆಗಲಿ, ಏನೇ ಬರಲಿ, ನಾನು ವಿದ್ಯೆಯನ್ನು ಕಲಿತುಕೊಂಡೇ ತೀರುವೆನೆಂದು ನಿಶ್ಚಯಮಾಡಿಕೊಂಡು, ಮನಸ್ಸಿಗೆ ಧೈರ್ಯ ತಂದುಕೊಂಡೆನು. ಅಲ್ಲಿಂದ ಮುಂದಕ್ಕೆ ನನ್ನ ಶ್ರದ್ಧೆಯೂ ಉತ್ಸಾಹವೂ ಇಮ್ಮಡಿಯಾದವು.

ಪುನಃ ವಿದ್ಯಾಭ್ಯಾಸಕ್ಕೆ ಅನುಕೂಲ್ಯ.—ನಾನು ಮಾಡುತ್ತಿದ್ದ ಯೋಚನೆಗಳೂ ಪ್ರಯತ್ನಗಳೂ ಎಲ್ಲವೂ ನಮ್ಮ ತಾಯಿಯ ತಿಳುವಳಿಕೆಗೆ ಬಂದವು. ಆಗ ಅವಳೂ ಬಹಳವಾಗಿ ವ್ಯಸನಪಟ್ಟಳು. ಆಮೇಲೆ ಸಮಾಧಾನ ಮಾಡಿದಳು. ಧೈರ್ಯ ಹೇಳಿದಳು. ನನ್ನ ವಿದ್ಯಾಭ್ಯಾಸಕ್ಕಾಗಿ ತನ್ನ ಕೈಲಾಗುವ ಸಹಾಯವನ್ನೆಲ್ಲಾ ಮಾಡುವಂತೆ ಮಾತು ಕೊಟ್ಟಳು. ಹೀಗೆ ಕೆಲವು ದಿನಗಳಾದ ಮೇಲೆ ಒಂದು ದಿನ ಉಪಾಧ್ಯಾಯರನ್ನು ಕಂಡು, ಅವರೊಡನೆ ನನ್ನ ಅಭಿಲಾಷೆಯನ್ನೂ ಕಷ್ಟಸುಖಗಳನ್ನೂ ಹೇಳಿಕೊಂಡೆನು. ಆಗ ಅವರು ರಾತ್ರಿಯ ಹೊತ್ತು ತಮ್ಮ ಕೆಲಸವೆಲ್ಲವೂ ಮುಗಿದ ಮೇಲೆ ನನಗೆ ಪಾಠ ಹೇಳಿಕೊಡುವುದಾಗಿ ಒಪ್ಪಿಕೊಂಡರು. ಈ ರಾತ್ರಿ ಪಾಠವೇ ನನಗೆ ಬಹಳ ಅನುಕೂಲವಾಗಿದ್ದಿತು. ಆಗ ಮಿಕ್ಕ ಹುಡುಗರು ಹಗಲು ಹೊತ್ತು ಎಷ್ಟು ಕಲಿಯುತ್ತಿದ್ದರೋ, ಅದಕ್ಕೆರಡರಷ್ಟನ್ನು ನಾನು ರಾತ್ರಿಯ ಹೊತ್ತು ಕಲಿತುಕೊಳ್ಳುತಿದ್ದೆನು. ಈ ಅನುಭವವೇ ಮುಂದೆ ಹ್ಯಾಂಪ್ಟನ್, ಕಸ್ಕಗಿ ಪಟ್ಟಣಗಳಲ್ಲಿಯೂ ರಾತ್ರಿ ಪಾಠಶಾಲೆಗಳನ್ನು ಏರ್ಪಡಿಸಲು ಉತ್ತೇಜನ ಮಾಡಿತು. ಆದರೂ ನನಗೆ ಇನ್ನೂ ಹುಡುಗತನವಾಗಿತ್ತು. ಇತರ ಬಾಲಕರಂತೆ ಹಗಲುಹೊತ್ತು ಪುಸ್ತಕಗಳನ್ನು ತೆಗೆದುಕೊಂಡು ಹೋಗದಿದ್ದರೆ, ಅದು ಓದುಗಾರಿಕೆಯೇ ಅಲ್ಲವೆಂದು ನನ್ನ ಮನಸಿನಲ್ಲಿ ನಾಟಿದ್ದಿತು. ಇದಕ್ಕಾಗಿ ನಾನು ಮಹಾಪ್ರಯತ್ನ ಮಾಡಿದೆನು.

ಕೊನೆಗೆ ನನ್ನ ಹಠವೇ ಗೆದ್ದಿತು. ಆದರೆ ಪ್ರತಿ ದಿನವೂ ಬೆಳಗಿನ ಝಾವಕ್ಕೆ ಸರಿಯಾಗಿ ಎದ್ದು ಒಂಭತ್ತು ಘಂಟೆಯವರೆಗೆ ಗಣಿಯಲ್ಲಿ ಕೆಲಸಮಾಡಿ ಆಮೇಲೆ ಪಾಠಶಾಲೆಗೆ ಹೋಗಿ ಬರಬಹುದೆಂದೂ, ಅಲ್ಲಿಂದ ಬಂದಮೇಲೆ ಮತ್ತೆ ಎರಡು ಘಂಟೆಗಳ ಕಾಲವಾದರೂ ಗಣಿಯಲ್ಲಿ ಕೆಲಸ ಮಾಡಬೇಕೆಂದೂ ನಿಷ್ಕರ್ಷೆಯಾಯಿತು.

ಒಂಭತ್ತು ಘಂಟೆಗೆ ಸರಿಯಾಗಿ ಪಾಠಶಾಲೆಗೆ ಹೋಗಬೇಕಾಗಿದ್ದಿತು. ಒಂಭತ್ತು ಘಂಟೆಗೆ ಸರಿಯಾಗಿಯೇ ನನ್ನನ್ನು ಗಣಿಯಿಂದಲೂ ಬಿಡುತಿದ್ದರು. ಪಾಠಶಾಲೆಯಾದರೋ ಗಣಿಗೆ ಹತ್ತಿರದಲ್ಲಿರಲಿಲ್ಲ. ಹೀಗಾದಕಾರಣ, ನಾನು ನಿತ್ಯವೂ ಹೊತ್ತು ಮೀರಿಯೇ ಹೋಗುತಿದ್ದೆನು. ಈ ತೊಂದರೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಏನೇನೋ ಯೋಜನೆಮಾಡಿ ನೋಡಿದೆನು: ಒಂದೂ ಸರಿಹೋಗಲಿಲ್ಲ. ಕೊನೆಗೆ ಒಂದು ಉಪಾಯ ತೋರಿತು. ಇದಕ್ಕಾಗಿ ನನ್ನನ್ನು ಎಲ್ಲರೂ ಬಯ್ಯಬಹುದು ! ಬಯ್ದರೆ ಬಯ್ಯಲಿ ; ಮಾಡಿದುದೇ ಉಂಟಾದಮೇಲೆ, ಅದನ್ನು ಹೇಳುವುದಕ್ಕೇಕೆ ಹಿಂಜರಿಯಬೇಕು ? ನಡೆದುದನ್ನು ನಡೆದ ಹಾಗೆಯೇ ಹೇಳಿಬಿಡುವುದು ಸರ್ವೋತ್ತಮವೆಂದು ನಂಬಿಕೊಂಡಿರುವೆನು. ನಾವು ಮಾಡಿದುದನ್ನು ಮರೆಮಾಚಿಕೊಂಡು ಸುಳ್ಳು ಹೇಳಿದರೆ, ಅದರಿಂದ ಸರಿಯಾಗಿ ಅನುಕೂಲ್ಯವುಂಟಾಗುವುದು ಬಹಳ ವಿರಳ. ನಾನು ಮಾಡಿದ ಕೆಲಸವೇನೆಂದರೆ-ನಮ್ಮ ಗಣಿಯಲ್ಲಿ ಒಂದು ಗಡಿಯಾರವಿದ್ದಿತು. ಅದರ ಕಾಲವನ್ನನುಸರಿಸಿ, ಅಲ್ಲಿದ್ದ ನೂರಾರು ಜನರು ತಮ್ಮ ಕೆಲಸವನ್ನು ನಡೆಯಿಸಿಕೊಂಡು ಹೋಗುತಿದ್ದರು. ಆ ಗಡಿಯಾರದಲ್ಲಿ ಎಂಟೂವರೆ ಘಂಟೆಯಾಗಿದ್ದಾಗ ಅದರ ಮುಳ್ಳನ್ನು ಒಂಭತ್ತು ಘಂಟೆಗೆ ತಿರುಗಿಸಿಬಿಟ್ಟರೆ ನನ್ನ ಕೆಲಸ ಕೈಗೂಡುವುದೆಂದು ನನಗೆ ತೋರಿತು ; ನಾನು ಬೆಳಗೆದ್ದರೆ ಅದೇ ರೀತಿ ಮಾಡುತ ಬಂದೆನು. ಆದರೆ, ಹೀಗೆಷ್ಟುದಿನ ನಡೆದೀತು ? ಒಂದು ದಿನ, ಅಲ್ಲಿ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಅಧಿಕಾರಿಗೆ ಸಂದೇಹ ಬಂದು, ಆ ಗಡಿಯಾರವನ್ನು ಒಂದು ಕನ್ನಡಿಯ ಬಾಗಿಲುಳ್ಳ ಪೆಟ್ಟಿಗೆಯೊಳಗಿಟ್ಟು ಭೀಗ ಹಾಕಿಬಿಟ್ಟನು. ಯಾರಿಗಾದರೂ ಕಷ್ಟವಾಗಲಿ ನಷ್ಟವಾಗಲಿ ಸಂಭವಿಸಬೇಕೆಂದು ನಾನು ಈ ಕೆಲಸವನ್ನು ಮಾಡಿದವನಲ್ಲ. ನಾನು ಹೊತ್ತಿಗೆ ಸರಿಯಾಗಿ ಪಾಠಶಾಲೆಗೆ ಹೋಗಿ ಸೇರಿದರೆ ಸಾಕೆಂದು ಈ ರೀತಿ ಮಾಡಿದೆನು. ಕೊನೆಗೆ ಅದು ಹೀಗೆ ಪರಿಣಮಿಸಿತು.

ವಿದ್ಯಾಭ್ಯಾಸದಲ್ಲಿ ತೊಂದರೆ, ಅದರ ಪರಿಹಾರ.—ನಾನು ಪಾಠಶಾಲೆಗೆ ಕಾಲಿಡುತಿದ್ದ ಹಾಗೆಯೇ ಅಲ್ಲಿ ನನಗೆ ಎರಡು ತೊಂದರೆಗಳುಂಟಾದುವು. ಅಲ್ಲಿ ಎಲ್ಲರೂ ಒಳ್ಳೇ ಟೋಪಿಗಳನ್ನು ಹಾಕಿಕೊಂಡು ಬರುತ್ತಿದ್ದರು. ನಾನು ಹುಟ್ಟಿದಂದಿನಿಂದ ಟೋಪಿಯನ್ನು ಹಾಕಿಕೊಂಡವನೇ ಅಲ್ಲ. ಅದು ಬೇಕೆಂದು ಇದುವರೆಗೆ ಯಾರಿಗೂ ತೋರಿಯೂ ಇರಲಿಲ್ಲ. ಈಗ ಮಿಕ್ಕವರೆಲ್ಲರೂ ಟೋಪಿಯನ್ನು ಹಾಕಿಕೊಂಡು ಬಂದು ನಾನು ಮಾತ್ರ ಬೋಳುತಲೆಯಲ್ಲಿ ಹೋಗುವುದು ನನಗೆ ಸ್ವಲ್ಪವೂ ಚೆನ್ನಾಗಿ ಕಾಣಲಿಲ್ಲ. ಆದರೇನು ? ನಾನು ಟೋಪಿಯನ್ನು ಕೊಂಡುಕೊಳ್ಳಬಲ್ಲೆನೆ ? ಮನೆಗೆ ಹೋಗಿ ಇದನ್ನು ನನ್ನ ತಾಯಿಯ ಮುಂದೆ ಹೇಳಿದೆನು. ಆಗಿನ ಸ್ಥಿತಿಯಲ್ಲಿ ನನಗೆ ಟೋಪಿಯನ್ನು ಕೊಂಡುಕೊಡುವುದು ಆವಳಿಗೆ ಸಾಧ್ಯವಾಗಿರಲಿಲ್ಲ. ಆದರೂ, ನಾನು ಕೇಳಿದುದಕ್ಕೆ ಸುಮ್ಮನಿರಬಾರದೆಂದು, ಎರಡು ತುಂಡು ಬಟ್ಟೆಗಳನ್ನು ತಂದು ಒಂದು ಟೋಪಿಯನ್ನು ಹೊಲಿದು, ಮೂರನೆಯ ದಿವಸವೇ ನನಗೆ ಕೊಟ್ಟಳು. ಅದೇ ನನ್ನ ಮೊದಲನೆಯ ಟೋಪಿ. ಅದು ತಲೆಯ ಮೇಲೆ ಬಂದೊಡನೆಯೇ ನನಗೆ ಪರಮಾನಂದವಾಯಿತು. ಇದು ನೆನಪಿಗೆ ಬಂದಾಗಲೆಲ್ಲಾ ನನಗೆ ನಮ್ಮ ತಾಯಿಯ ಸ್ವಭಾವವು ಚೆನ್ನಾಗಿ ನೆನಪಿಗೆ ಬರುತ್ತದೆ. ಆಕೆಗೆ ಡಂಭಾಚಾರವೆಂದರೆ ಆಗುತ್ತಿರಲಿಲ್ಲ. ತನ್ನ ಕೈಲಾಗದಿದ್ದರೂ ಏನಾದರೂ ಮಾಡುವುದಕ್ಕೆ ಹೋಗಿ ನಾಲ್ಕು ಜನಗಳ ಕೈಯ್ಯಲ್ಲಿ ಹೊಗಳಿಸಿಕೊಳ್ಳಬೇಕೆಂಬ ಇಚ್ಛೆ ಇರಲಿಲ್ಲ. ಇದು ಬಲು ದೊಡ್ಡಗುಣವೆಂದು ತಿಳಿದುಕೊಂಡು ನಾನು ಸಾಧ್ಯವಾದ ಮಟ್ಟಿಗೂ ಆ ಗುಣವನ್ನು ಸಂಪಾದಿಸುವುದಕ್ಕೆ ಪ್ರಯತ್ನಿಸುತ್ತಿರುವೆನಲ್ಲದೆ, ಇದನ್ನು ಇತರರಿಗೂ ಬೋಧಿಸುತ್ತಿರುವೆನು. ನಮ್ಮ ತಾಯಿಯು ತಾನು ಉಪವಾಸ ವನವಾಸಗಳನ್ನಾದರೂ ಮಾಡಿ ನಾನು ಕೇಳಿದಂತಹ ಟೋಪಿಯನ್ನು ನನಗೆ ತಂದುಕೊಡಬಹುದಾಗಿದ್ದಿತು. ಆದರೂ ಆವಳು ಅದು ತನ್ನ ಯೋಗ್ಯತೆಗೆ ಮೀರಿದುದೆಂದು ತೋರಿದ ಕಾರಣ ಸಾಲವನ್ನಾದರೂ ಮಾಡಿ ನನಗೆ ಅಂತಹ ಟೋಪಿಯನ್ನು ತಂದುಕೊಡಲು ಪ್ರಯತ್ನಮಾಡಲಿಲ್ಲ. ಈಚೆಗೆ ನಾನು ಬಹಳ ಬೆಲೆಯುಳ್ಳ ಟೋಪಿಯನ್ನೇನೋ ಹಾಕಿಕೊಂಡಿದ್ದೇನೆ. ಆದರೆ ಆ ಎರಡು ತುಂಡು ಬಟ್ಟೆಗಳನ್ನು ಸೇರಿಸಿ ಹೊಲಿದ ಟೋಪಿಯನ್ನು ಹಾಕಿಕೊಂಡಾಗ ಉಂಟಾದ ಉತ್ಸಾಹವೂ ಸಂತೋಷವೂ ಮತ್ತಾವಾಗಲೂ ನನಗುಂಟಾಗಲಿಲ್ಲ. ಆಗ ನಾನು ಇಂತಹ ಸಣ್ಣ ಟೋಪಿಯನ್ನು ಹಾಕಿಕೊಂಡಿರುವುದನ್ನು ನೋಡಿ ನನ್ನ

ಜೊತೆಯವರಲ್ಲಿ ಕೆಲವರನ್ನು ನನ್ನನ್ನು ಪರಿಹಾಸ ಮಾಡುತ್ತಿದ್ದರು. ಅಯ್ಯೋ— ಪಾಪ! ಈಗ ಅವರ ಅವಸ್ಥೆ ಏನಾಗಿ ಹೋಗಿದೆ! ಈಗ ಅವರು ಅಂತಹ ಬಟ್ಟೆಯ ಟೋಪಿಯನ್ನೂ ಕಾಣಲಾರದಂಥ ಸ್ಥಿತಿಗೆ ಬಂದು ಇದ್ದಾರೆ!

ಹೆಸರು ಬರುವುದಕ್ಕೆ ಕಾರಣ.—ಪಾಠಶಾಲೆಯಲ್ಲಿ ನನ್ನ ಹೆಸರನ್ನು ಬರೆಯಿಸುವಾಗ ನನಗೆ ಮತ್ತೊಂದು ತೊಂದರೆ ಬಂದೊದಗಿತು. ನನಗೆ ಪ್ರಪಂಚಜ್ಞಾನ ಬಂದಾಗಿನಿಂದ ನನ್ನನ್ನು ಬೂಕರ್ ಎಂದು ಎಲ್ಲರೂ ಕರೆಯುತಿದ್ದರು. ಆದರೆ ಮಿಕ್ಕ ಹುಡುಗರೆಲ್ಲರಿಗೂ (ಕ್ಲ್ಯಾರ್ಕ್ ಹಾವೆಲ್, ಹೆನ್ರಿಗ್ರೇಡಿ, ಎಂಬಂತೆ) ಎರಡೆರಡು ಶಬ್ದಗಳುಳ್ಳ ಹೆಸರುಗಳಿದ್ದವು. ಉಪಾಧ್ಯಾಯರು ನನ್ನ ಹೆಸರಿನಲ್ಲಿಯೂ ಎರಡು ಶಬ್ದಗಳಿರಬೇಕೆಂದು ಕೇಳಿದರೆ ಏನು ಹೇಳಲಿ ಎಂದು ನಾನು ಯೋಚಿಸಿದೆನು. ನನಗೆ ಏನೂ ತೋಚದೆ ಹೋಯಿತು. ಕೊನೆಗೆ ನನ್ನ ಹೆಸರನ್ನು ಉಪಾಧ್ಯಾಯರು ಕೇಳಿದಾಗ ಬೂಕರ್ ವಾಷಿಂಗ್‌ಟನ್ ಎಂದು ನನ್ನ ಬಾಯಲ್ಲಿ ಹೊರಟುಬಿಟ್ಟಿತು. ಅವರು ಅದನ್ನೇ ಬರೆದುಕೊಂಡುಬಿಟ್ಟರು ; ಅದೇ ಇಂದಿಗೂ ಸ್ಥಿರವಾಗಿ ನಿಂತು ಹೋಗಿದೆ.

ಮಹಾತ್ವಾಕಾಂಕ್ಷೆ.—ಅನೇಕ ವೇಳೆ, ನಾನು ಬಿಳಿಯ ಜನರಲ್ಲಿ ಪ್ರಸಿದ್ಧವಾದ ವಂಶದಲ್ಲಿ ಹುಟ್ಟಿದ್ದರೆ ಹೇಗಿರುತಿದ್ದೆನೆಂದು ನನಗೆ ಯೋಚನೆಯುಂಟಾಗುತಿದ್ದಿತು. ಆದರೆ, ಹಾಗೇನಾದರೂ ಆಗಿದ್ದ ಪಕ್ಷದಲ್ಲಿ, ನನ್ನ ಪಿತ್ರಾರ್ಜಿತವಾದ ಆಸ್ತಿಯನ್ನೂ, ಬಿಳಿಯ ಬಣ್ಣವನ್ನೂ ನೆಚ್ಚಿಕೊಂಡು ನಾನು ಸುತರಾಂ ಕೆಲಸಮಾಡದೆ ಇರುತಿದ್ದನೆಂದು ತೋರುತ್ತದೆ. ಹೇಗಾದರೂ ಇರಲಿ. ನನಗೆ ಯಾರೂ ಪ್ರಸಿದ್ಧರಾದ ಪೂರ್ವಪುರುಷರಿರಲಿಲ್ಲವಾದ ಕಾರಣ, ನಾನಾದರೂ ಕಷ್ಟಪಟ್ಟು ಯಶಸ್ಸನ್ನು ಸಂಪಾದಿಸಿ ನನ್ನ ಮಕ್ಕಳು ಮೊಮ್ಮಕ್ಕಳಿಗಾದರೂ ಒಬ್ಬ ಪ್ರಸಿದ್ಧನಾದ ಮೂಲಪುರುಷನನ್ನು ಮಾಡಿಕೊಡಬೇಕೆಂದು ನಿರ್ಧರಮಾಡಿಕೊಂಡೆನು.

ಪ್ರಸಿದ್ಧವಾದ ವಂಶದಲ್ಲಿ ಹುಟ್ಟಿದವರಿಗೆ ಒಂದು ಅನುಕೂಲ. ಇಂತಹ ವಂಶದಲ್ಲಿ ಹುಟ್ಟಿದ ಹುಡುಗನು ತಾನು ಹಿಡಿದ ಕೆಲಸವನ್ನು ಸಾಧಿಸಿಕೊಂಡು ಮುಂದಕ್ಕೆ ಬಾರದೆ ಹೋದರೆ, ಹಿಂದೆ ಹೆಸರು ಪಡೆದಿದ್ದ ತನ್ನ ವಂಶಕ್ಕೇ ಅವಮಾನವಾಗುವುದೆಂದು ಅವನಿಗೆ ಹೆದರಿಕೆ ಇರುತ್ತದೆ. ಇದರಿಂದ ಅಂಥವನು ಕೈಲಾದ ಮಟ್ಟಿಗೂ ತನ್ನ ನಡತೆಯನ್ನು ಚೆನ್ನಾಗಿಟ್ಟುಕೊಂಡು, ಎಷ್ಟು ತೊಂದರೆ ಬಂದರೂ

ಜಗ್ಗದೆ, ತನ್ನ ಜಯಾಪಜಯಗಳ ಮೇಲೆಯೇ ದೃಷ್ಟಿ ಇಟ್ಟಿರುತ್ತಾನೆ. ನನಗೆ ಈ ರೀತಿಯಲ್ಲದಿದ್ದರೆ ಮತ್ತೊಂದು ರೀತಿಯಲ್ಲಿ ಉತ್ಸಾಹವಿದ್ದಿತು. ನಾನು ಹಗಲು ಹೊತ್ತು ಪಾಠಶಾಲೆಗೆ ಹೋಗುತಿದ್ದುದೇ ಅತ್ಯಲ್ಪಕಾಲ. ಅದರಲ್ಲೂ ಸರಿಯಾಗಿ ಹೋಗುತಿರಲಿಲ್ಲ. ಕೊನೆಗೆ ಅದೂ ನಿಂತುಹೋಗಿ ಹಗಲೆಲ್ಲಾ ಕೆಲಸ ಮಾಡಬೇಕಾಗಿ ಬಂದಿತು. ಇನ್ನೇನು ? ರಾತ್ರಿಯ ಪಾಠಶಾಲೆಯೇ ಗತಿಯಾಯಿತು. ನಾನು ಚಿಕ್ಕಂದಿನಲ್ಲಿ ಕಲಿತ ಮುಕ್ಕಾಲುಮೂರುವೀಸಪಾಲು ವಿದ್ಯೆಯೆಲ್ಲವೂ ಹೀಗೆ ರಾತ್ರಿ ಪಾಠಶಾಲೆಯಲ್ಲಿ ಕಲಿತದುದೇ ಆಗಿರುವುದು. ರಾತ್ರಿಯ ಹೊತ್ತು ಪಾಠ ಹೇಳಿ ಕೊಡುವುದಕ್ಕೆ ಸರಿಯಾದ ಉಪಾಧ್ಯಾಯರು ಸಿಕ್ಕುತ್ತಿರಲಿಲ್ಲ. ಕೆಲವು ಸಾರಿ, ಯಾರನ್ನಾದರೂ ಗೊತ್ತುಮಾಡಿಕೊಂಡು ಒಂದೆರಡು ದಿನ ಓದಿದ ಬಳಿಕ, ನನಗೆಷ್ಟು ಬರುವುದೋ ಅವರಿಗೂ ಅಷ್ಟೇ ಬರುವುದೆಂದು ಗೊತ್ತಾಗುತಿದ್ದಿತು. ಇನ್ನು ಕೆಲವು ಕಾಲ, ರಾತ್ರಿಯ ಪಾಠಕ್ಕಾಗಿ ಎರಡು ಮೂರು ಮೈಲಿಗಳ ದೂರ ನಡೆದು ಹೋಗಬೇಕಾಗಿದ್ದಿತು. ಇಷ್ಟರಲ್ಲಿಯೇ ಸಾಲದುದಕ್ಕೆ ನನ್ನನ್ನು ಉಪ್ಪಿನ ಗಣಿಯಿಂದ ತೆಗೆದು ಕಲ್ಲಿದ್ದಲ ಗಣಿಗೆ ಹಾಕಿಬಿಟ್ಟರು. ಕಲ್ಲಿದ್ದಲ ಗಣಿಯೆಂದರೆ ನನಗೆ ಆಗುತಿರಲಿಲ್ಲ. ಏಕೆಂದರೆ ಅಲ್ಲಿ ಒಂದು ಗಳಿಗೆ ಕೆಲಸ ಮಾಡಿಬಂದರೆ, ಮೈ ಕೈ ಬಟ್ಟೆ ಬರೆಗಳೆಲ್ಲವೂ 'ತೊಳೆದ ಕೆಂಡ' ದಂತೆ ಆಗಿಬಿಡುತಿದ್ದವು. ಏನು ಮಾಡಿದರೂ ಆ ಬಣ್ಣ ಮಾತ್ರ ನಿಶ್ಶೇಷವಾಗಿ ಹೋಗುತಿರಲಿಲ್ಲ. ಅಲ್ಲದೆ ಈ ಗಣಿಗಳೊಳಗಿರುವ ಕತ್ತಲೆಯನ್ನು ಹೇಳತೀರದು. ಒಂದೊಂದು ಸಲ ಕೈಲಿದ್ದ ದೀಪವು ಆರಿಹೋದರೆ, ಮತ್ತೊಬ್ಬರಾರಾದರೂ ಅಲ್ಲಿಗೆ ಬರುವವರೆಗೆ ಸುಮ್ಮನೆ ಕುಳಿತಿರಬೇಕಾಗಿರುತಿದ್ದಿತ್ತು. ಹಾಗಿಲ್ಲದಿದ್ದರೆ ತೆವಳಿಕೊಂಡು ಮುಂದೆ ಎಲ್ಲಿಯಾದರೂ ಹೋಗಬೇಕಾಗುತ್ತಿತ್ತು. ಆಗಾಗ್ಗೆ ಒಳಗೆ ಬೆಂಕಿಹೊತ್ತುಕೊಂಡೋ, ಉಸಿರು ಸಿಕ್ಕಿಕೊಂಡೋ, ಬಂಡೆಗಳು ಕಳಚಿಕೊಂಡೋ ಜನಗಳು ಸಾಯುತ್ತಲೇ ಇರುತಿದ್ದರು. ಇವೆಲ್ಲವನ್ನೂ ನೋಡಿ, ಕಲ್ಲಿದ್ದಲ ಗಣಿ ಎಂದರೆ ನನಗೆ ದಿಗಲಾಗುತಿದ್ದಿತು. ಆದರೂ ಅಂತಹ ಕಡೆಯಲ್ಲಿಯೇ ನಾನು ಕೆಲಸಮಾಡಬೇಕಾಗಿ ಬಂದಿತು.

ಹೀಗೆ ಶ್ರಮಪಡುತಿದ್ದ ಕಾಲದಲ್ಲಿ, ನನಗೆ ಏನೇನೋ ಯೋಚನೆಗಳು ಬರುತಿದ್ದವು:—ನಾನೂ ಬಿಳಿಯ ಬಣ್ಣದವರ ವಂಶದಲ್ಲಿ ಹುಟ್ಟಿದ್ದರೆ ನನಗೆ ಯಾವ ಕಷ್ಟ ನಿಷ್ಠುರಗಳೂ ಇಲ್ಲದೆ ಎಷ್ಟು ಸುಖವಾಗಿ ದೊಡ್ಡ ಪದವಿಗೆ ಬರಬಹುದಾ

ಗಿದ್ದಿತು. ಅಂತಹ ಪುಣ್ಯವು ನನಗೆಲ್ಲಿ ಬಂದಿತು ಎಂದು ಹೇಳಿಕೊಳ್ಳುತಿದ್ದೆನು. ಈಚೆಗೆ ನಾನು ತಿಳಿದುಕೊಂಡುದುದೇನೆಂದರೆ—ಯಾವನಾದರೂ ಒಬ್ಬನ ಜಯಾಪಜಯಗಳನ್ನು ನಿಷ್ಕರ್ಷಿಸಬೇಕಾದರೆ, ಅವರು ವರ್ತಮಾನ ಕಾಲದಲ್ಲಿ ಅನುಭವಿಸುವ ಪದವಿಯನ್ನು ನೋಡಿ ನಿಷ್ಕರ್ಷಿಸಬಾರದು. ಅವನು ಆ ಪದವಿಗೆ ಬರುವುದಕ್ಕೆ ಮಾಡಿದ ಪ್ರಯತ್ನಗಳಾವುವು? ಅವನಿಗಿದ್ದ ಅನುಕೂಲ್ಯಗಳಾವುವು? ಎಂಥೆಂಥಾ ಕಷ್ಟಗಳು ಬಂದಿದ್ದವು? ಅವೆಲ್ಲಕ್ಕೂ ಅವನು ಎದೆಗೊಟ್ಟು ನಿಂತನೇ ಇಲ್ಲವೇ ಇವೇ ಮೊದಲಾದ ವಿಷಯಗಳನ್ನು ಚೆನ್ನಾಗಿ ವಿಚಾರ ಮಾಡಬೇಕು. ಅವನು ಪಟ್ಟ ಕಷ್ಟವೆಷ್ಟೋ—ಅವರು ಹೊಂದಿದ ಜಯವೂ ಪಡೆದ ಪದವಿಯೂ ಅಷ್ಟು ದೊಡ್ಡವೆಂದು ಭಾವಿಸಬೇಕು. ಈ ವಿಧವಾಗಿ ಕಷ್ಟಪಟ್ಟರೆ, ನಮ್ಮಲ್ಲಿ ಒಂದು ವಿಧವಾದ ಶಕ್ತಿಯೂ ಧೈರ್ಯವೂ ಅನುಭವವೂ ಉಂಟಾಗುವವು. ಇಂತಹ ಕಷ್ಟಕ್ಕೆ ಸಿಕ್ಕದಿದ್ದವರು ಕಷ್ಟವೆಂದರೇನೆಂಬುದನ್ನೂ ತಿಳಿದುಕೊಳ್ಳಲಾರರು. ಅಲ್ಲದೆ ಹೊರಗಣ ಅನುಕೂಲಗಳೂ ಸಹಾಯಗಳೂ ಎಷ್ಟು ದೂರ ಬಂದಾವು? ಎಂದಿದ್ದರೂ ಸ್ವಸಾಮರ್ಥ್ಯವೇ ಫಲಕಾರಿ, ಅದರ ಬಲವೇ ಬಲ. ಆತ್ಮಶಕ್ತಿ ಇದ್ದರೆ ಬಣ್ಣ, ವಂಶ, ವಯಸ್ಸು ಒಂದೂ ಗಣನೆಗೆ ಬರುವುದಿಲ್ಲ. ಯಾವ ಯಾವ ಅಡಚಣೆಗಳಿದ್ದರೂ, ಅಂಥವರು ಮುಂದಕ್ಕೆ ಬರುವುದೇ ಖಂಡಿತ. ಆತ್ಮಶಕ್ತಿ ಇಲ್ಲದವರು ಎಂದಾದರೂ ಮೂಲೆಗೆ ಬೀಳುವುದೇ ಖಂಡಿತ.

ಅಧ್ಯಾಯ ೨.

ವಿದ್ಯಾಭ್ಯಾಸ.

ಸರಿಯಾದ ವಿದ್ಯಾಭ್ಯಾಸಕ್ಕೆ ಉಪಕ್ರಮ.—ಒಂದು ದಿನ ಕಲ್ಲಿದ್ದಲು ಗಣಿಯಲ್ಲಿ ಕೆಲಸಮಾಡುತಿದ್ದಾಗ, ಯಾರೋ ಇಬ್ಬರು ವರ್ಜಿನಿಯ ಪ್ರಾಂತದಲ್ಲಿ ಕಪ್ಪು ಜನರಿಗೋಸ್ಕರವೇ ಏರ್ಪಡಿಸಲ್ಪಟ್ಟಿರುವ ಒಂದು ಪಾಠಶಾಲೆಯ ವಿಷಯವನ್ನು ಮಾತನಾಡುತಿದ್ದುದು ಕೇಳಿ ಬಂದಿತು. ಕೂಡಲೆ ಆ ಕತ್ತಲೆಯಲ್ಲಿಯೇ ಸದ್ದಾಗದಂತೆ ಅವರು ಮಾತಾಡುತಿದ್ದ ಕಡೆಗೆ ತೆವಳಿಕೊಂಡು ಹೋದೆನು. ಅವರು ಆಡಿದ

ಮಾತನ್ನು ಕೇಳಿದ ಮೇಲೆ, ಆ ಪಾಠಶಾಲೆಯು ನಿಗ್ರೊ ಜನರಿಗೋಸ್ಕರವೇ ಏರ್ಪಡಿಸಲ್ಪಟ್ಟಿದ್ದುದೆಂದೂ, ಬುದ್ಧಿವಂತರೂ ದರಿದ್ರರೂ ಆದ ಹುಡುಗರು ಬಂದರೆ ಅಲ್ಲಿ ಅವರಿಗೆ ಸಹಾಯಗಳನ್ನು ಕಲ್ಪಿಸಿಕೊಡುವರೆಂದೂ ಗೊತ್ತಾಯಿತು. ಹೀಗೆ ಅವರು ಆಡುವ ಮಾತನ್ನು ಕೇಳುತ ಕೇಳುತ ನನಗೆ ಉತ್ಸಾಹವು ಅಧಿಕವಾಯಿತು. ಹ್ಯಾಂಪ್ಟನ್ ಎಂಬ ಪಟ್ಟಣದಲ್ಲಿದ್ದ ನಾರ್ಮಲ್ ಅಂಡ್ ಅಗ್ರಿಕಲ್ಚರಲ್ ಇನ್‌ಸ್ಟಿಟ್ಯೂಟ್ ಎಂಬ ಆ ಪಾಠಶಾಲೆಯು ಬಹು ದೊಡ್ಡದಾಗಿರಬೇಕೆಂದೂ, ಅಲ್ಲಿ ಹೋಗಿ ಇದ್ದರೆ, ಅದರ ಮುಂದೆ ಸ್ವರ್ಗಸೌಖ್ಯವು ಬರಲಾರದೆಂದೂ ನಿರ್ಧರಿಸಿಕೊಂಡೆನು. ಆಮೇಲೆ ಅಲ್ಲಿಗೆ ಹೋಗಲೇಬೇಕೆಂದು ನಿಶ್ಚಯವೂ ಆಯಿತು. ಆದರೆ ಅದು ಇರುವುದು ಎಲ್ಲಿ ? ಎಷ್ಟು ದೂರ ? ನಾನು ಹೋಗುವುದು ಹೇಗೆ ? ಇದೊಂದನ್ನೂ ವಿಚಾರಮಾಡಲೇ ಇಲ್ಲ; ಹ್ಯಾಂಪ್ಟನ್‌ಗೆ ಹೊರಟು ಹೋಗಬೇಕೆಂಬುದೊಂದೇ ನನ್ನನ್ನು ಹಗಲೂ ರಾತ್ರಿಯೂ ಅಂಟಿಕೊಂಡಿದ್ದಿತು.

ನಾನು ಗಣಿಯ ಕೆಲಸವನ್ನು ಬಿಟ್ಟದ್ದು.—ಹೀಗೆ ಎರಡು ಮೂರು ತಿಂಗಳುಗಳು ಕಳೆದವು. ಆ ಮೇಲೆ ಆ ಗಣಿಯ ಯಜಮಾನನ ಮನೆಯಲ್ಲಿ ಒಂದು ಕೆಲಸ ಖಾಲಿಯಾಗಿದೆಯೆಂದು ತಿಳಿಯಬಂದಿತು. ಆದರೆ, ಅವನ ಹೆಂಡತಿಯು ಬಲು ನಸೆ ನಸೆಯುವಳು. ಆಳುಗಳು ಮಾಡಿದ ಕೆಲಸಗಳನ್ನು ಸ್ವಲ್ಪಕ್ಕೆ ಒಪ್ಪುತ್ತಿರಲಿಲ್ಲ. ಅದು ಕಾರಣ, ಅವಳ ಕೈಕೆಳಗೆ ಹದಿನೈದು ಇಪ್ಪತ್ತು ದಿವಸಗಿಂತ ಹೆಚ್ಚಾಗಿ ಯಾರೂ ಇರುತ್ತಿರಲಿಲ್ಲ. ಯಾರನ್ನು ಕೇಳಿದರೂ ಇದೇ ಮಾತನ್ನು ಹೇಳುತಿದ್ದರು. ಆದರೆ ನಾನು ಅಲ್ಲಿಯಾದರೂ ಕೆಲಸಮಾಡಿ ನೋಡುವೆನೇ ಹೊರತು ಈ ಗಣಿಯಲ್ಲಿ ಕೆಲಸ ಮಾಡಲಾರೆನೆಂದು ನಿಶ್ಚಯಿಸಿಕೊಂಡು, ನಮ್ಮ ತಾಯಿಗೆ ನಾನು ಆ ಕೆಲಸಕ್ಕೆ ಹೋಗುತ್ತೇನೆಂದು ಹೇಳಿದೆನು. ಅಲ್ಲಿ ನನ್ನನ್ನು ಐದು ಡಾಲರ್ (ಸುಮಾರು ಹದಿನೈದು ರೂಪಾಯಿ) ಸಂಬಳ ಗೊತ್ತುಮಾಡಿ ಕೆಲಸಕ್ಕೆ ಇಟ್ಟುಕೊಂಡರು.

ನಾನು ನನ್ನ ಒಡತಿಯ ಪ್ರೀತಿಯನ್ನು ಸಂಪಾದಿಸಿದ್ದು.—ಆಕೆಯ ವಿಷಯದಲ್ಲಿ ಎಲ್ಲರೂ ಹೇಳುತಿದ್ದ ಕಥೆಗಳನ್ನು ಕೇಳಿ, ನನಗೆ ಆಕೆಯನ್ನು ನೋಡುವುದಕ್ಕೇ ಹೆದರಿಕೆಯಾಯಿತು. ಅಂತು ಆ ಕೆಲಸಕ್ಕೆ ಸೇರಿಕೊಂಡೆನು. ಮೂರು ನಾಲ್ಕು ವಾರಗಳು ಕಳೆದವು. ಅಷ್ಟು ಹೊತ್ತಿಗೆ ನಾನು ನನ್ನ ಯಜಮಾನಿಯ ಗುಣವನ್ನೂ ಸ್ವಭಾವವನ್ನೂ ಚೆನ್ನಾಗಿ ನೋಡಿ ತಿಳಿದುಕೊಳ್ಳುತ ಬಂದೆನು. ಆಮೇಲೆ ಎಲ್ಲರೂ

ಅವಳನ್ನು ಏಕೆ ಕೆಟ್ಟವಳೆಂದು ಬಯ್ಯುತ್ತಿದ್ದರೆಂದೂ ಅವಳಲ್ಲಿ ಅಂತಹ ಕೆಟ್ಟತನವೇನಿತ್ತೆಂದೂ ವಿಚಾರಮಾಡತೊಡಗಿದೆನು. ಸ್ವಲ್ಪ ಕಾಲದಲ್ಲಿಯೇ ನಾನು ಹೇಗೆ ನಡೆದುಕೊಂಡರೆ ಅವಳ ಮನಸ್ಸಿಗೆ ತೃಪ್ತಿಯಾಗುವುದೆಂಬುದನ್ನು ತಿಳಿದುಕೊಂಡೆನು. ಅವಳ ಏರ್ಪಾಡುಗಳು ಹೇಗಿದ್ದವೆಂದರೆ:—"ಮನೆಯಲ್ಲಿರುವ ಪದಾರ್ಥಗಳೆಲ್ಲವೂ ಚೊಕ್ಕಟವಾಗಿಯೂ ಅಚ್ಚುಕಟ್ಟಾಗಿಯೂ ಇರಬೇಕು. ಅವಳು ಹೇಳಿದ ಕೆಲಸವನ್ನು ಹೊತ್ತಿಗೆ ಸರಿಯಾಗಿಯೂ ಚೆನ್ನಾಗಿಯೂ ಮಾಡಬೇಕು. ಯಾವ ವಿಷಯವಾಗಲಿ ಇದ್ದದ್ದು ಇದ್ದ ಹಾಗೆಯೇ ಹೇಳಬೇಕು. ಸುಳ್ಳುತಟವಟಗಳನ್ನು ಕಂಡರೆ ಅವಳು ಕಿಡಿಕಿಡಿಯಾಗುವಳು. ಕೆಲಸಗಳನ್ನು ಅರ್ಧವಾಗಿಯಾಗಲಿ ಅಜಾಗರೂಕತೆಯಿಂದಾಗಲಿ ಮಾಡಕೂಡದು." ಹೀಗೆ ನನ್ನ ಒಡತಿಯ ಮನೋಭಾವಗಳಿರುವುವೆಂದು ತಿಳಿದುಕೊಂಡು ಚೆನ್ನಾಗಿ ಕೆಲಸಮಾಡುತ ಬಂದೆನು. ಹಾಗೆ ನಡೆದುದರಿಂದ ನಾನು ಅವಳಿಗೆ ಅಚ್ಚುಮೆಚ್ಚಿನ ಸೇವಕನಾದೆನು. ಆಗ ಈ ಮನೆಯಲ್ಲಿ ಈ ಯಜಮಾನಿಯ ಕೈಕೆಳಗೆ ನಾನು ಕಲಿತ ವಿಷಯಗಳು, ಮುಂದೆ ದೊಡ್ಡದೊಡ್ಡ ಪಾಠಶಾಲೆಗಳಲ್ಲಿ ದೊಡ್ಡದೊಡ್ಡ ಪಂಡಿತರಲ್ಲಿ ತಿಳಿದುಕೊಂಡ ವಿಷಯಗಳಿಗಿಂತ ಯಾವ ಭಾಗದಲ್ಲಿಯೂ ಕಡಮೆಯಾಗಿರಲಿಲ್ಲ. ನನಗೆ ಈಗಲೂ ದಾರಿಯಲ್ಲಿ ಕಾಗದದ ಚೂರುಗಳನ್ನು ಕಂಡರೆ ಅವುಗಳನ್ನು ತೆಗೆದುಹಾಕಬೇಕೆನ್ನಿಸುತ್ತದೆ. ಮನೆಯೊಳಗೆ ಎಲ್ಲಿಯಾದರೂ ಕಸವು ಬಿದ್ದಿದ್ದರೆ, ಬಹು ಅಸಹ್ಯವಾಗುತ್ತದೆ. ಯಾರಾದರೂ ಅಂಗಿಯ ಗುಂಡಿಯನ್ನು ಹಾಕಿಕೊಳ್ಳದೆಯಾಗಲಿ ಕೊಳಕು ಬಟ್ಟೆಯನ್ನು ಹಾಕಿಕೊಂಡಾಗಲಿ ಹೋಗುತ್ತಿದ್ದರೆ, ಬೇಗ ಅವರನ್ನು ಕರೆದು ಅವರ ತಪ್ಪನ್ನು ತಿದ್ದಬೇಕೆನ್ನಿಸುತ್ತದೆ.

ಒಡತಿಯ ಸಹಾಯ.—ನನಗೆ ಓದುವುದರ ಮೇಲೆ ಇದ್ದ ಆಸೆಯನ್ನು ನೋಡಿ ನಮ್ಮ ಯಜಮಾನನಿಗೆ ಬಹಳ ಸಂತೋಷವಾಯಿತು. ನಾನು ಅವಳಲ್ಲಿ ಸೇವಕನಾಗಿದ್ದ ಸ್ವಲ್ಪ ದಿವಸ ನನ್ನನ್ನು ಒಂದೊಂದು ಗಳಿಗೆ ಪಾಠಶಾಲೆಗೆ ಕಳುಹಿಸುತಿದ್ದಳು. ಆದರೆ ನಾನು ಕಲಿತ ಪಾಠಗಳೆಲ್ಲವೂ ರಾತ್ರಿಯ ಹೊತ್ತು ಕಲಿತವುಗಳೇ. ಈ ಮನೆಯಲ್ಲಿ ಇದ್ದಾಗಲೇ, ಸಾಮಾನು ತುಂಬುವ ಒಂದು ಪೆಟ್ಟಿಗೆಯನ್ನು ತಂದು, ಅದರ ಒಂದು ಕಡೆಯ ಹಲಗೆಯನ್ನು ಕಿತ್ತುಹಾಕಿ ಎರಡು ಮೂರು ಖಾನಿಗಳನ್ನು ಮಾಡಿದೆನು. ಅದುವರೆಗೆ ನಾನು ಕೂಡಿಸಿಟ್ಟಿದ್ದ ಪುಸ್ತಕಗಳನ್ನೆಲ್ಲ ಅದರೊಳಗೆ ಸಾಲಾಗಿ ಇಟ್ಟುಕೊಂಡೆನು. ಅಷ್ಟು ಪುಸ್ತಕಗಳನ್ನು ಓದುವ ಮಟ್ಟಿಗಾದೆನಲ್ಲಾ ಎಂದು

ನನಗೆ ಪರಮಸಂತೋಷವಾಯಿತು. ಇದೇ ನಾನು ಸಂಪಾದಿಸಿದ ಮೊದಲನೆಯ ಪುಸ್ತಕಭಂಡಾರ !

ಹ್ಯಾಂಪ್ಟನ್‌ಗೆ ಹೋಗುವ ಪ್ರಯತ್ನ.—ಇಲ್ಲಿ ಇಷ್ಟು ಮಟ್ಟಿಗೆ ಅನುಕೂಲವಾದ ಮಾತ್ರದಿಂದಲೇ ನಾನು ಹಿಂದೆ ಮಾಡಿದ್ದ ಹ್ಯಾಂಪ್ಟನ್‌ಗೆ ಹೋಗುವ ಯೋಚನೆಯನ್ನೇ ಬಿಟ್ಟುಬಿಟ್ಟೆನೆಂದು ತಿಳಿಯಕೂಡದು. ಅದು ನನ್ನ ಮನಸ್ಸಿನಲ್ಲಿ ಇದ್ದೇ ಇದ್ದಿತು. ಆದರೆ ಆ ಪಟ್ಟಣವು ಯಾವ ದಿಕ್ಕಿನಲ್ಲಿರುವುದೋ-ಅಲ್ಲಿಗೆ ಹೋಗುವುದಕ್ಕೆ ಎಷ್ಟು ವೆಚ್ಚವಾಗುವುದೋ ಒಂದೂ ನನಗೆ ಗೊತ್ತಿರಲಿಲ್ಲ. ಯಾರನ್ನು ಕಂಡು ಕೇಳಿದರೂ, ಅಲ್ಲಿಗೆ ಹೋಗುವುದು ಶುದ್ಧ ಹುಚ್ಚುಕೆಲಸವೆಂದು ಹೇಳುತಿದ್ದರು. ನಮ್ಮ ತಾಯಿಯೂ ಸಂಪೂರ್ಣವಾಗಿ ಒಪ್ಪಲಿಲ್ಲ. ಆಮೇಲೆ ನನ್ನ ಹತ್ತಿರ ಎಷ್ಟು ದುಡ್ಡಿರಬಹುದೆಂದು ನೋಡಿಕೊಂಡೆನು. ನಾನು ಸಂಪಾದಿಸಿದ್ದ ಅಲ್ಪಸ್ವಲ್ಪ ಹಣದಲ್ಲಿ ನಮ್ಮಪ್ಪನು ಸ್ವಲ್ಪ ವೆಚ್ಚಮಾಡಿದ್ದನು. ಮನೆಯ ಸಂಸಾರಕ್ಕಾಗಿ ಸ್ವಲ್ಪ ವೆಚ್ಚವಾಗಿದ್ದಿತು. ಉಳಿದಿದ್ದ ಏಳೆಂಟು ರೂಪಾಯಿಗಳಲ್ಲಿ ಮಾಡುವುದೇನು ? ಅದರಲ್ಲಿ ಬಟ್ಟೆಯನ್ನು ಕೊಂಡುಕೊಳ್ಳಲೆ ? ಗಾಡಿಬಾಡಿಗೆಯನ್ನು ಕೊಡಲೆ ? ಊಟ ತಿಂಡಿಗಳಿಗೆ ಏರ್ಪಾಡುಮಾಡಿಕೊಳ್ಳಲೆ ? ಏನೂ ತೋರಲಿಲ್ಲ. ನಮ್ಮಣ್ಣನು ತನ್ನ ಕೈಲಾದಷ್ಟು ಸಹಾಯಮಾಡಿದನು. ಆದರೆ ಅದು ಬಹು ಸ್ವಲ್ಪ. ಅವನೂ ಗಣಿಯಲ್ಲಿ ಕೆಲಸಕ್ಕೆ ಸೇರಿದ್ದನು. ಅಲ್ಲಿ ಬಂದ ಸ್ವಲ್ಪ ಸಂಬಳದಲ್ಲಿ ಮುಕ್ಕಾಲುಪಾಲು ಸಂಸಾರಕ್ಕೇ ಆಗಿ ಹೋಗುತಿದ್ದಿತು. ಈ ನನ್ನ ಪ್ರಯತ್ನವನ್ನು ಕೇಳಿ, ನಮ್ಮಲ್ಲಿ ಮುದುಕರಾಗಿದ್ದವರಿಗೆ ಬಹಳ ಸಂತೋಷವಾಯಿತು. ಪಾಪ ! ಅವರು ತಮ್ಮ ಜೀವಮಾನವನ್ನೆಲ್ಲ ಜೀತಗಾರಿಕೆಯಲ್ಲಿಯೇ ಕಳೆದು, ಸ್ವಾತಂತ್ರ್ಯವೆಂಬುದನ್ನು ಕಂಡೇ ವೇ ಎನ್ನುತಿದ್ದರು. ಈಗ ತಮ್ಮವನಾದ ಹುಡುಗನೊಬ್ಬನು ಅಲ್ಪಸ್ವಲ್ಪ ವಿದ್ಯೆಯನ್ನು ಕಲಿಯುವುದಕ್ಕಾಗಿ ಪರಸ್ಥಳಕ್ಕೆ ಹೋಗುತ್ತಾನೆಂದು ಕೇಳಿದೊಡನೆಯೇ ಅವರ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಎಂತಹ ಬಡವರಾದರೂ, ನಾಲ್ಕಾಣೆಯಿಂದ ಮೂರುಕಾಸಿನವರೆಗೆ ತಮ್ಮ ಕೈಯ್ಯಲಿದ್ದಷ್ಟನ್ನು ನನಗೆ ಕೊಟ್ಟರು. ಏನೂ ಇಲ್ಲದವರು ಹೊದಿಯುವುದಕ್ಕೆ ಒಂದು ಬಟ್ಟೆಯನ್ನೋ ಒಂದು ಚೌಕವನ್ನೋ ಕೊಟ್ಟರು. ನಾನು ಹೊರಡಬೇಕೆಂದು ಗೊತ್ತುಮಾಡಿಕೊಂಡಿದ್ದ ದಿನವು ಬಂದಿತು. ಆಗ ನಮ್ಮ ತಾಯಿಗೆ ಮೈ ಸ್ವಸ್ಥವಾಗಿರಲಿಲ್ಲ. ಆಗ ನಾನು ಪುನಃ ಅವಳನ್ನು

ನೋಡುವೆನೋ ಇಲ್ಲವೋ ಎಂದುಕೊಂಡೆನು. ಅವಳೇನೋ ನನಗೆ ಧೈರ್ಯಹೇಳಿ ಕಳುಹಿಸಿ ತಾನೂ ಧೈರ್ಯವಾಗಿದ್ದಳು.

ಹ್ಯಾಂಪ್ಟನ್ ಪಟ್ಟಣದ ಮಾರ್ಗದಲ್ಲಿ ಪಟ್ಟ ಶ್ರಮ.—ನಾನಿದ್ದ ಮಾಲ್ಡನ್ ಪಟ್ಟಣದಿಂದ ಹ್ಯಾಂಪ್ಟನ್ ಪಟ್ಟಣಕ್ಕೆ ಸುಮಾರು 500 ಮೈಲಿಗಳ ದೂರವಿದ್ದಿತು. ಈಗ ಎಲ್ಲಿಯೂ ರೈಲಾಗಿರುವುದರಿಂದ ಅದೇನು ದೂರವಲ್ಲವೆಂದು ತೋರಬಹುದು. ಆದರೆ ನಾನು ಹೋದಾಗ ಎಲ್ಲಿಯೋ ಸ್ವಲ್ಪ ದೂರ ಮಾತ್ರ ರೈಲು ಇದ್ದಿತು. ಮಿಕ್ಕ ಮಾರ್ಗವನ್ನೆಲ್ಲ ಗಾಡಿಯಲ್ಲಿಯೇ ಕಳೆಯಬೇಕಾಗಿದ್ದಿತು. ಅಂತು ನಾನು ಮಾಲ್ಡನ್ ಪಟ್ಟಣವನ್ನು ಬಿಟ್ಟು ಹ್ಯಾಂಪ್ಟನ್ ಪಟ್ಟಣಕ್ಕೆ ಹೊರಟೆನು. ಮನೆಯನ್ನು ಬಿಟ್ಟು ಇನ್ನೂ ಒಂದೆರಡು ದಿವಸ ಕೂಡ ಆಗಿರಲಿಲ್ಲ. ಆಗಲೇ ನನ್ನಲ್ಲಿದ್ದ ಹಣವು ಸಾಲುವುದಿಲ್ಲವೆಂದೂ, ನಾನು ಹ್ಯಾಂಪ್ಟನ್ ಪಟ್ಟಣವನ್ನು ತಲಪಲಾರೆನೆಂದೂ ತಿಳಿದುಕೊಂಡೆನು. ಈ ಪ್ರಯಾಣದಲ್ಲಿ ನನಗೆ ದೊರೆತ ಒಂದು ಅನುಭವವನ್ನು ಎಂದಿಗೂ ಮರೆಯಲಾರೆನು. ಒಂದು ದಿನ ನಾನೂ ಇನ್ನು ಕೆಲವರೂ ಸೇರಿ ಹಗಲು ಹೊತ್ತು ಒಂದು ಬಂಡಿಯಲ್ಲಿ ಕುಳಿತುಕೊಂಡು ಹೋಗುತ್ತಿದ್ದೆವು. ಅದೂ ಹಳೆಯದು. ದಾರಿಯು ಬೆಟ್ಟದ ಮೇಲೆ ಇದ್ದಿತು. ಹೀಗೆ ಹೋಗುತ ಕತ್ತಲೆಯಾದರೂ ದಾರಿ ಸವೆಯದೆ ಮೈಕೈಯಲ್ಲಾ ಕುಲಕಿ ಬೇಸತ್ತು ಕೊನೆಗೆ ಎಷ್ಟೋ ಹೊತ್ತಿನಮೇಲೆ ಒಂದು ಮನೆಯ ಬಾಗಿಲಲ್ಲಿ ಇಳಿದೆವು. ಅದು ಒಂದು ಭೋಜನಶಾಲೆ (ಹೋಟಲ್) ಆಗಿತ್ತು. ಅದನ್ನು ಕೇಳಿ, ದಾರಿಯಲ್ಲಿ ಹೋಗತಕ್ಕವರಿಗೋಸ್ಕರ ಅದು ಏರ್ಪಡಿಸಲ್ಪಟ್ಟಿರುವುದೆಂದು ನಾನು ತಿಳಿದುಕೊಂಡಿದ್ದೆನು. ಆದರೆ, ಪ್ರಯಾಣಸ್ಥರಲ್ಲಿ ಬಿಳಿಯ ಜನರಿಗೂ ಕರಿಯ ಜನರಿಗೂ ಇರುವ ವ್ಯತ್ಯಾಸವೇ ಆಗ ನನ್ನ ಮನಸ್ಸಿಗೆ ಹೊಳೆಯಲಿಲ್ಲ. ಅಹಹ! ಬಣ್ಣವೇ! ನಿನ್ನಿಂದ ಏನೇನಾಗಬಹುದು ? ಕಪ್ಪು ಜನರು ಅವರು ಕಪ್ಪಾಗಿ ಹುಟ್ಟಿದ್ದಕ್ಕೋಸ್ಕರವೇ—ಏನೇನು ಕಷ್ಟಗಳನ್ನೂ ತೊಂದರೆಗಳನ್ನೂ ಅನುಭವಿಸಬೇಕು ? ಮಿಕ್ಕ ಪ್ರಯಾಣಸ್ಥರೆಲ್ಲರಿಗೂ ಆ ಭೋಜನಶಾಲೆಯವರು ಮಲಗುವುದಕ್ಕೂ ಬಟ್ಟೆಗಳನ್ನು ಇಟ್ಟುಕೊಳ್ಳುವುದಕ್ಕೂ ಸ್ಥಳಗಳನ್ನು ಗೊತ್ತುಮಾಡಿಕೊಟ್ಟರು. ಅವರದೆಲ್ಲವೂ ಮುಗಿದಮೇಲೆ ನಾನು ಅಲ್ಲಿ ಮೇಜಿನ ಮುಂದೆ ಕುಳಿತುಕೊಂಡು ಜನರ ಹೆಸರನ್ನು ಬರೆದುಕೊಳ್ಳುತ್ತಿದ್ದವನ ಮುಂದೆ ಮೆಲ್ಲಮೆಲ್ಲಗೆ ಹೋಗಿ ಮುಖ ತಗ್ಗಿಸಿ ನಿಂತುಕೊಂಡೆನು. ಆಗ ನನ್ನ

ಹತ್ತಿರ ಎಲ್ಲೋ ಸ್ವಲ್ಪ ದುಡ್ಡು ಇದ್ದಿತು. ಅದು ಊಟಕ್ಕಾಗಲಿ, ತಿಂಡಿಗಾಗಲಿ ಸಾಕಾಗುವಷ್ಟಿರಲಿಲ್ಲ. ಆದುದರಿಂದ, ಆ ಭೋಜನಶಾಲೆಯ ಅಧಿಕಾರಿಯನ್ನು ಆಶ್ರಯಿಸಿ ಅವನನ್ನು ಒಳ್ಳೆಯವನನ್ನಾಗಿ ಮಾಡಿಕೊಂಡು ಆ ದಿನ ಕಾಲಹಾಕಬೇಕೆಂದು ಯೋಚಿಸಿಕೊಂಡಿದ್ದೆನು. ಚಳಿಗಾಲವಾಗಿದ್ದಿತು. ಗುಡ್ಡದ ಮೇಲಿನಿಂದ ತಡೆಯಲಾರದಂತೆ ಗಾಳಿಯು ಹೊಡೆಯುತಿದ್ದಿತು. ಏನಾದರೂ ಮಾಡಿ ಒಳಗೆ ಸೇರಿಕೊಂಡರೆ ಸಾಕೆಂದಿದ್ದೆನು. ನನ್ನ ದುರದೃಷ್ಟವನ್ನು ಏನೆಂದು ಹೇಳಲಿ! ನನ್ನ ಮುಖವನ್ನು ಕಂಡಕೂಡಲೆ, ಆ ಮೇಜಿನ ಮುಂದಿದ್ದವನು ನನ್ನ ಹತ್ತಿರ ದುಡ್ಡಿದೆಯೇ ಇಲ್ಲವೇ ಎಂಬುದನ್ನು ಕೂಡ ವಿಚಾರಿಸದೆ, ನನಗೆ ಅಲ್ಲಿ ಖಂಡಿತವಾಗಿ ಒಂದು ತುತ್ತು ಅನ್ನವಾಗಲಿ, ಒಂದಿಷ್ಟು ಸ್ಥಳವಾಗಲಿ ಸಿಕ್ಕುವುದಿಲ್ಲವೆಂದು ಹೇಳಿ ನನ್ನನ್ನು ಆಚೆಗೆ ಕಳುಹಿಸಿಬಿಟ್ಟನು. ಕರಿಯಬಣ್ಣದ ದುರದೃಷ್ಟವೂ, ಬಿಳಿಯ ಬಣ್ಣದ ಪುಣ್ಯವೂ ನನ್ನ ಅನುಭವಕ್ಕೆ ಬರುವುದಕ್ಕೆ ಇದೇ ಮೊದಲು. ಆಮೇಲೆ ನಾನು ರಾತ್ರಿಯೆಲ್ಲವೂ ಓಡಾಡುತಲೇ ಇದ್ದು ಚಳಿಯ ಹೊಡೆತವನ್ನು ಸ್ವಲ್ಪ ಮಟ್ಟಿಗೆ ತಪ್ಪಿಸಿಕೊಂಡೆನು. ಆಗ ನನ್ನ ಮನಸ್ಸೆಲ್ಲವೂ ಹ್ಯಾಂಪ್ಟನ್ ಪಟ್ಟಣದ ಮೇಲೆ ಇದ್ದಿತು. ಆದಕಾರಣ, ಆ ಭೋಜನಶಾಲೆಯವನು ಮಾಡಿದ ಕೆಲಸದಿಂದ ನನಗೆ ಕೋಪವಾಗಲಿ, ಬೇಸರಿಕೆಯಾಗಲಿ ಬರುವದಕ್ಕೆ ಅವಕಾಶವಿರಲಿಲ್ಲ.

ಮುಂದಕ್ಕೆ ಪ್ರಯಾಣ ಮತ್ತು ರಿಚ್ಮಂಡ್ ಪಟ್ಟಣದಲ್ಲಿ ಪಟ್ಟ ಕಷ್ಟ—ಬೆಳಗಾದ ಮೇಲೆ ನಾನೂ ನನ್ನ ಜತೆಯವರೂ ಮುಂದಕ್ಕೆ ಹೊರಟೆವು. ಮುಂದೆ ಗಾಡಿಯ ಬಾಡಿಗೆ ಕೊಡುವುದಕ್ಕೆ ನನ್ನ ಕೈಲಿ ಒಂದು ಕಾಸೂ ಇರಲಿಲ್ಲ. ಆ ಮೇಲೆ ನಡೆದು ಹೋಗುವುದಕ್ಕೆ ಉಪಕ್ರಮಿಸಿದೆನು. ನಡೆದು ನಡೆದು ಕಾಲು ಸೋತ ಮೇಲೆ, ದಾರಿಯಲ್ಲಿ ಹೋಗುತಿದ್ದ ಪ್ರತಿಯೊಂದು ಗಾಡಿಯವನನ್ನೂ ಹಲ್ಲು ಗಿರಿದು ಕೇಳಿಕೊಳ್ಳುವುದಕ್ಕೆ ಉಪಕ್ರಮಿಸಿದೆನು. ಅವರಲ್ಲಿ ಯಾರಿಗಾದರೂ ದೇವರು ಒಳ್ಳೆಯ ಬುದ್ಧಿಯನ್ನು ಕೊಟ್ಟಿದ್ದರೆ ಅವರು ನನ್ನನ್ನು ತಮ್ಮ ಗಾಡಿಯ ಮೇಲೆ ಕುಳ್ಳಿರಿಸಿಕೊಳ್ಳುತಿದ್ದರು. ಮಿಕ್ಕದಾರಿಯೆಲ್ಲ ನಡೆದೇ ತೀರಬೇಕಾಯಿತು. ಹೇಗೆಲ್ಲಾ ಪಡಲಾರದಷ್ಟು ಕಷ್ಟಪಟ್ಟು, ಕೊನೆಗೆ ಹತ್ತು ಹನ್ನೆರಡು ದಿನಗಳಾದ ಮೇಲೆ, ಹ್ಯಾಂಪ್ಟನ್ ಪಟ್ಟಣಕ್ಕೆ ಸುಮಾರು ಎಂಭತ್ತೆರಡು ಮೈಲಿಯಷ್ಟು ದೂರದಲ್ಲಿರುವ ರಿಚ್ಮಂಡ್ ಪಟ್ಟಣಕ್ಕೆ ಹೋಗಿ ತಲಪಿದೆನು. ಅಲ್ಲಿಗೆ ನಾನು ಹೋಗಿ ಸೇರಿ

ದಾಗ ಅಸ್ತಮಯವಾಯಿತು. ಆಗ ನಾನು ಅನುಭವಿಸಿದ ಆಯಾಸವನ್ನೂ, ಹಸಿವನ್ನೂ ಹೇಳತೀರದು. ಮೈಯೆಲ್ಲಾ ಧೂಳು ತುಂಬಿಕೊಂಡು ಗುರುತೇ ಸಿಕ್ಕದ ಹಾಗೆ ಆಗಿದ್ದಿತು. ಇದುವರೆಗೂ ನಾನು ದೊಡ್ಡ ಪಟ್ಟಣವನ್ನು ಕಂಡಿರಲಿಲ್ಲ. ಆದುದರಿಂದ, ಎಲ್ಲಿ ಹೋದರೂ ನನಗೆ ಯಾವುದೂ ಗೊತ್ತಾಗುತಿರಲಿಲ್ಲ. ಇಂತಹ ಸ್ಥಳದಲ್ಲಿ ನಾನು ಎಲ್ಲಿಗೆ ಹೋಗಬೇಕು ? ನಾನು ಹೋದ ಹೊತ್ತಿಗೆ ಸರಿಯಾಗಿ ನನ್ನನ್ನು ಎದುರುಗೊಂಡು ಕರೆದುಕೊಂಡು ಹೋಗಿ ಆದರಿಸುವುದಕ್ಕೆ ಅಲ್ಲಿ ನನಗೆ ಯಾವ ಬಂಧುಗಳಿದ್ದರು ? ಕೈಯ್ಯಲ್ಲಿ ಬೇಕಾದಷ್ಟು ದುಡ್ಡಿದ್ದರೆ, ಮತ್ಯಾವುದಿಲ್ಲದಿದ್ದರೂ ಸೌಖ್ಯವಾಗಿರಬಹುದಾಗಿತ್ತು. ನನ್ನಲ್ಲಿ ಅದಕ್ಕೇ ಅಭಾವ ; ಆಗ ನನ್ನಲ್ಲಿ ಒಂದು ಕಾಸೂ ಉಳಿದಿರಲಿಲ್ಲ. ಆಮೇಲೆ ಅಲ್ಲಲ್ಲಿಯೇ ನಾಲ್ಕಾರು ಕಡೆಗಳಿಗೆ ಹೋಗಿ, ಮಲಗುವ ಮಟ್ಟಿಗೆ ಸ್ವಲ್ಪ ಅವಕಾಶವನ್ನು ಕೊಡಬೇಕೆಂದು ಕೇಳಿಕೊಂಡೆನು. ಆದರೆ ಅಲ್ಲಿ ದುಡ್ಡು ಕೊಟ್ಟರೆ ಸ್ಥಳಸಿಕ್ಕುತಿದ್ದಿತೇ ಹೊರತು, ನನ್ನ ಸ್ಥಿತಿಯನ್ನು ನೋಡಿ ಯಾರೂ ಕನಿಕರಪಡಲಿಲ್ಲ. ಇದನ್ನೆಲ್ಲ ನೋಡಿ ಏನು ಮಾಡುವುದಕ್ಕೂ ದಿಕ್ಕು ತೋರದೆ, ಆ ಪಟ್ಟಣದಲ್ಲಿ ಒಂದಾದ ಮೇಲೆ ಮತ್ತೊಂದರಂತೆ ರಸ್ತೆಗಳಲ್ಲಿಯೇ ತಿರುಗಾಡುತಿರಲು ಉಪಕ್ರಮಿಸಿದೆನು. ಹೀಗೆ ಅಲೆಯುತ್ತಿರುವಾಗ, ಅಲ್ಲಿ ಕೆಲವು ಮಿಠಾಯಿ ಅಂಗಡಿಗಳು ಇದ್ದವು. ಅಲ್ಲಿ ಮಾಡಿಟ್ಟಿರುವ ರುಚಿರುಚಿಯಾದ ತಿಂಡಿಗಳನ್ನು ನೋಡಿ ನನಗೆ ಬಾಯಿ ನೀರು ಕಡೆಯಿತು. ಆಗ ನಾನು ಯಾವುದು ಸಿಕ್ಕಿದರೂ ತಿನ್ನುವ ಸ್ಥಿತಿಗೆ ಬಂದಿರುವಲ್ಲಿ ಇನ್ನು ಅವುಗಳನ್ನು ನೋಡಿ ಆಸೆಪಟ್ಟದ್ದೇನಾಶ್ಚರ್ಯ ? ಆ ತಿಂಡಿಗಳಲ್ಲಿ ಯಾವುದಾದರೂ ಒಂದನ್ನು ನನ್ನಗೆ ಕೊಟ್ಟರೂ ಅಲ್ಲಿಂದ ಮುಂದಕ್ಕೆ ನನಗೆ ಸಿಕ್ಕುವ ಸಂಪಾದನೆಯನ್ನೆಲ್ಲಾ ಅದಕ್ಕೆ ಬದಲಾಗಿ ಕೊಟ್ಟುಬಿಡುವೆನೆಂದು ಸಂಕಲ್ಪಮಾಡಿಕೊಂಡೆನು. ಆದರೆ ಅಲ್ಲಿ ನನ್ನನ್ನು ಕೇಳತಕ್ಕವರು ಯಾರು ? ಹೀಗೆ ಏನೇನೋ ಯೋಚಿಸುತ್ತ ಬಹಳ ಹೊತ್ತಿನವರೆಗೂ ಅಲೆಯುತಿದ್ದೆನು. ಅರ್ಧರಾತ್ರಿಯ ಮೇಲಾಗಿದ್ದಿತು. ತಿರುಗಿ ತಿರುಗಿ ನನ್ನ ಕಾಲುಗಳು ಬಿದ್ದುಹೋದವು. ಆಯಾಸ ಹೆಚ್ಚಿ ಮುಂದಕ್ಕೆ ಕಾಲೇ ಬಾರದಂತಾಯಿತು. ಅಂತು ಆಗತಕ್ಕುದೆಲ್ಲವೂ ಆಗಿಹೋಯಿತು. ಆದರೆ ನನ್ನ ಮನಸ್ಸು ಮಾತ್ರ ವ್ಯತ್ಯಸ್ತವಾಗಲಿಲ್ಲ. ದೃಢತರವಾಗಿದ್ದ ಸಂಕಲ್ಪವು ಸಡಲಲಿಲ್ಲ. ಇನ್ನು ಸ್ವಲ್ಪ ದೂರ ನಾನು ಹಾಗೆಯೇ ಹೋಗಿದ್ದರೆ ನಿಂತ ಕಡೆಯೇ ಬಿದ್ದುಬಿಡಬೇಕಾಗಿದ್ದಿತು.

ಅಷ್ಟರಲ್ಲಿಯೇ ಆ ರಸ್ತೆಯ ಒಂದು ಪಕ್ಕದಲ್ಲಿ ಜನರು ತಿರುಗಾಡುವುದಕ್ಕಾಗಿಯೇ ಎತ್ತರವಾಗಿ ಮಾಡಿದ್ದ ದಾರಿಯು ನನ್ನ ಕಣ್ಣಿಗೆ ಬಿದ್ದಿತು. ಅಲ್ಲಿಗೆ ಹೋಗಿ ಒಂದೆರಡು ಘಳಿಗೆ ಕುಳಿತುಕೊಂಡು ನೋಡಿದೆನು. ಯಾರಾದರೂ ನನ್ನ ಕಡೆಗೆ ಬರುತ್ತಿರುವುದಾಗಲಿ, ನನ್ನನ್ನು ನೋಡುತ್ತಿರುವುದಾಗಲಿ ನನಗೆ ಗೋಚರವಾಗಲಿಲ್ಲ. ಕೊನೆಗೆ ಸ್ವಲ್ಪ ಧೈರ್ಯಮಾಡಿಕೊಂಡು, ನನ್ನ ಬಟ್ಟೆಗಳನ್ನು ಹಾಕಿದ್ದ ಚೀಲವನ್ನು ತಲೆಯ ಕೆಳಗೆ ಇಟ್ಟುಕೊಂಡು, ಅಲ್ಲಿಯೇ ಒಂದು ಮೂಲೆಯಲ್ಲಿ ಮಲಗಿಕೊಂಡುಬಿಟ್ಟೆನು. ಆಗ ನನಗೆ ನಿದ್ರೆ ಬಂದಿತೋ ಇಲ್ಲವೋ ಜ್ಞಾಪಕವಿಲ್ಲ. ರಾತ್ರಿಯೆಲ್ಲಾ ಜನಗಳು ತಿರುಗಾಡುವ ಸದ್ದು ಮಾತ್ರ ಕೇಳುತಿದ್ದಿತು. ಬೆಳಗಾದ ಮೇಲೆ ಬಹಳ ಮಟ್ಟಿಗೆ ನನ್ನ ಆಯಾಸವು ಕಡಮೆಯಾಯಿತು. ಆದರೆ ಹಸಿವು ಮಾತ್ರ ತಡೆಯಲಾರದಹಾಗಾಯಿತು. ಚೆನ್ನಾಗಿ ಬೆಳಗಾದ ಮೇಲೆ ನನ್ನ ಸುತ್ತುಮುತ್ತಲೂ ನೋಡಲಾಗಿ, ನಾನಿರುವ ಸ್ಥಳಕ್ಕೆ ಸ್ವಲ್ಪ ದೂರದಲ್ಲಿಯೇ ಒಂದು ದೊಡ್ಡ ಹಡಗು ಕಬ್ಬಿಣದ ಸಾಮಾನುಗಳನ್ನು ತುಂಬಿಕೊಂಡು ಬಂದು ನಿಂತಿತು. ಅದರಲ್ಲಿದ್ದ ಸಾಮಾನುಗಳನ್ನು ಜನರು ದಡಕ್ಕೆ ಸಾಗಿಸುತಿದ್ದರು. ಇದನ್ನು ನೋಡಿ ನಾನು ಆ ಹಡಗಿನ ಯಜಮಾನನನ್ನು ಕಂಡು "ನಾನು ಕೆಲಸಮಾಡುತ್ತೇನೆ. ನನಗೆ ಏನಾದರೂ ಕೂಲಿಯನ್ನು ಕೊಟ್ಟರೆ ಬಹಳ ಕೃತಜ್ಞನಾಗಿರುತ್ತೇನೆ" ಎಂದು ಕೇಳಿಕೊಂಡೆನು. ಆತನು ಬಹಳ ಒಳ್ಳೆಯವನು. ತಾನು ಬಿಳಿಯವನಾಗಿದ್ದರೂ ನನ್ನನ್ನು ಸ್ವಲ್ಪವೂ ತಿರಸ್ಕರಿಸಲಿಲ್ಲ. ನನಗೆ ಕೆಲಸವನ್ನು ಕೊಟ್ಟನು. ಒಂದೆರಡು ಘಂಟೆಗಳಾದಮೇಲೆ ನನ್ನಕೈಗೆ ಸ್ವಲ್ಪ ದುಡ್ಡು ಬಂದಿತು. ಕೂಡಲೆ ಹೋಗಿ ತಿಂಡಿಯನ್ನು ಕೊಂಡುಕೊಂಡು ತಿಂದೆನು. ಆ ತಿಂಡಿಯೇ ತಿಂಡಿ ! ಅದರ ರುಚಿಯೇ ರುಚಿ ! ಅಂಥಾ ತಿಂಡಿಯನ್ನು ನಾನು ಇದುವರೆಗೂ ತಿಂದಿಲ್ಲ. ನಾನು ಮಾಡಿದ ಕೆಲಸವು ಆ ಹಡಗಿನ ಯಜಮಾನನಿಗೆ ತೃಪ್ತಿಕರವಾಗಿದ್ದಂತೆ ತೋರಿತು. ಆದುದರಿಂದ ಆತನು ನನ್ನನ್ನು ಕರೆದು ತನ್ನಲ್ಲಿ ಕೆಲಸಮಾಡುವುದಕ್ಕೆ ಇಷ್ಟವಿದ್ದರೆ ದಿನಗಟ್ಟಲೆ ಕೂಲಿಯನ್ನು ಕೊಡುವುದಾಗಿ ಹೇಳಿದನು. ನಾನು ಅದಕ್ಕೆ ಒಪ್ಪಿ ಆ ಹಡಗಿನ ಮೇಲೆ ಕೆಲಸಮಾಡುತಿದ್ದೆನು. ಪ್ರತಿದಿನವೂ ಊಟದ ಖರ್ಚು ಹೋಗಲಾಗಿ ನನಗೆ ಹೆಚ್ಚು ದುಡ್ಡು ಉಳಿಯುತಿರಲಿಲ್ಲ. ಇದರಲ್ಲಿ ಆದಷ್ಟನ್ನು ಉಳಿಸಬೇಕೆಂದು ಯೋಚಿಸಿ, ರಾತ್ರೆಯಾದ ಮೇಲೆ ನಿತ್ಯವೂ ಮೊದಲು ದಿನ ಮಲಗಿದ್ದ ಕಡೆಯಲ್ಲಿಯೇ ಹೋಗಿ ಮಲಗಿಕೊಳ್ಳುತಿದ್ದೆನು.

ಹ್ಯಾಂಪ್ಟನ್ ಪಟ್ಟಣವನ್ನು ತಲುಪಿದ್ದು.—ನಾನು ಕೊಟ್ಟ ಹಣದಲ್ಲಿ ಹ್ಯಾಂಪ್ಟನ್ನಿಗೆ ಹೋಗಬಹುದೆಂದು ಕಂಡು ಬಂದ ಕೂಡಲೆ ಆ ಹಡಗಿನ ಯಜಮಾನನಿಗೆ ನನ್ನ ನಮಸ್ಕಾರಗಳನ್ನು ಹೇಳಿ ಮುಂದಕ್ಕೆ ಹೊರಟೆನು. ಹ್ಯಾಂಪ್ಟನ್ ಪಟ್ಟಣವು ಸಿಕ್ಕಿತು. ಆಗ ನಡುದಾರಿಯಲ್ಲಿ ವಿಶೇಷ ಸಂಗತಿಗಳೇನೂ ನಡೆಯಲಿಲ್ಲ. ಅಲ್ಲಿ ಇಳಿದ ಕೂಡಲೆ ನನ್ನಲ್ಲಿ ಎಷ್ಟು ದುಡ್ಡು ಮಿಕ್ಕಿರುವುದೆಂದು ಲೆಕ್ಕಾಚಾರಮಾಡಿದೆನು. ಸರಿಯಾಗಿ ಒಂದೂವರೆ ರೂಪಾಯಿ ಇದ್ದಿತು. ಇದರಲ್ಲಿ ನನ್ನ ಊಟ ಉಪಚಾರಗಳು ವಿದ್ಯಾಭ್ಯಾಸ ಇವೆಲ್ಲಾ ಆಗಬೇಕಾಗಿದ್ದಿತು. ನಾನು ದಾರಿಯುದ್ದಕ್ಕೂ ಪಟ್ಟ ಕಷ್ಟಗಳನ್ನು ನೆನೆದುಕೊಂಡು, ಕೊನೆಗೆ ಈ ಪಟ್ಟಣಕ್ಕೆ ಬಂದು ಸೇರಿದೆನಲ್ಲಾ ಎಂದು ಸಂತೋಷಪಡುತ್ತಾ ಬರುತಿದ್ದೆನು. ಅಷ್ಟರಲ್ಲಿಯೇ ನಾನು ಹೋಗಬೇಕಾಗಿದ್ದ ಪಾಠಶಾಲೆಯು ಸಿಕ್ಕಿತು. ಅದನ್ನು ನೋಡಿದೊಡನೆಯೇ ನನ್ನ ಆಯಾಸವೂ, ಶ್ರಮವೂ ನೀಗಿಹೋದವು. ನಾನು ಆ ಕಟ್ಟಡವನ್ನು ನೋಡಿದ ಕೂಡಲೆ ಬಹಳ ಸಂತೋಷಪಟ್ಟೆನು. ಅದು ಇಟ್ಟಿಗೆಯಿಂದ ಕಟ್ಟಲ್ಪಟ್ಟ ಮೂರು ಅಂತಸ್ತಿನ ಸೊಗಸಾದ ಕಟ್ಟಡ. ಅದರಂಥಾ ಸುಂದರವಾದ ಬೇರೊಂದು ಕಟ್ಟಡವು ಇರಲಾರದೆಂದು ತಿಳಿದುಕೊಂಡೆನು. ಅದನ್ನು ನೋಡಿದ ಕೂಡಲೆ ನನಗೆ ಹೋದ ಜೀವವು ಪುನಃ ಬಂದಂತಾಯಿತು. ಇಂಥಾ ಕಡೆಗೆ ಬಂದಮೇಲೆ ಎಷ್ಟು ವಿಘ್ನಗಳೇ ಬರಲಿ, ಅವೆಲ್ಲವನ್ನೂ ಜಯಿಸಿ ಅದರಿಂದ ಆದಷ್ಟು ಅನುಕೂಲವನ್ನು ಪಡೆಯದಿದ್ದರೆ ನಾನು ಹುಟ್ಟಿದುದೇ ವ್ಯರ್ಥವೆಂದು ಅಂದುಕೊಂಡೆನು.

ಪಾಠಶಾಲಾಪ್ರವೇಶ.—ಅನಂತರ ಆದಷ್ಟು ಬೇಗ ಹೋಗಿ ಮುಖ್ಯೋಪಾಧ್ಯಾಯಿಕಳನ್ನು ಕಂಡು ನನಗೆ ಪಾಠಶಾಲೆಗೆ ಸೇರಬೇಕೆಂಬ ಇಷ್ಟವಿರುವುದೆಂದೂ, ನನ್ನ ಯೋಗ್ಯತೆಯನ್ನು ಪರೀಕ್ಷೆಮಾಡಿ ತಕ್ಕ ತರಗತಿಗೆ ಸೇರಿಸಬೇಕೆಂದೂ ಹೇಳಿಕೊಂಡೆನು. ಅನ್ನವಿಲ್ಲದೆ, ನೀರಿಲ್ಲದೆ, ಒಳ್ಳೆಯ ಬಟ್ಟೆಕೂಡ ಇಲ್ಲದೆ ತಿರುಗಿಕೊಂಡಿದ್ದ ನನ್ನ ಮುಖವನ್ನು ನೋಡಿದ ಕೂಡಲೆ ಆಕೆಗೆ ನನ್ನ ವಿಷಯದಲ್ಲಿ ಅಷ್ಟು ಒಳ್ಳೆಯ ಅಭಿಪ್ರಾಯ ಬರಲಿಲ್ಲ. ನೋಡುತ ನೋಡುತ ನನ್ನನ್ನು ಸೇರಿಸೋಣವೇ, ಬೇಡವೇ ಎಂದು ಸಂದೇಹಪಡುತ್ತಿದ್ದಂತೆ ತೋರಿತು. ನನ್ನ ಅವಸ್ಥೆಯನ್ನು ನೋಡಿ ಆಕೆಯು ನಾನೂ ಒಬ್ಬ ಕೆಲಸಕ್ಕೆ ಬಾರದ ಪೋಲಿ ಹುಡುಗನೆಂದು ತಿಳಿದುಕೊಂಡಿದ್ದರೂ ಇರಬಹುದು. ಆಗ ನನ್ನ ದುರವಸ್ಥೆ ಅಷ್ಟರಮಟ್ಟಿಗಿದ್ದಿತು. ಬಹಳ ಹೊತ್ತಿನವರೆಗೂ

ನನ್ನನ್ನು ಸೇರಿಸುತ್ತೇನೆಯೆಂಪಾಗಲಿ, ಇಲ್ಲನೆಂಪಾಗಲಿ ಯಾವುದನ್ನೂ ಹೇಳಲಿಲ್ಲ. ಇದನ್ನು ನೋಡಿ ನಾನು ಆಕೆಯ ಹಿಂದು ಮುಂದೆ ಸುತ್ತುವುದಕ್ಕೆ ನೊದಲುಮಾಡಿ ಸಮಯಬಂದಾಗಲೆಲ್ಲ ಕೈಲಾದಮಟ್ಟಿಗೂ ನನ್ನ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯ ಬರುವಂತೆ ಮಾಡಿದೆನು. ಈ ಮಧ್ಯದಲ್ಲಿ ಇತರ ಹುಡುಗರು ಬರುತ್ತಿದ್ದರು. ಅವರನ್ನು ಕೂಡಲೆ ಸೇರಿಸಿಯೂ ಬಿಡುತಿದ್ದಳು. ಇದನ್ನು ನೋಡಿದ ಕೂಡಲೆ ನನಗೆ ಬಹಳ ದುಃಖವಾಯಿತು. ಏಕೆಂದರೆ, ಶ್ರದ್ಧಾಭಕ್ತಿಗಳಲ್ಲಿಯೂ, ಕೆಲಸ ಕಾರ್ಯಗಳಲ್ಲಿಯೂ ನಾನು ಅವರಲ್ಲಿ ಯಾರಿಗೂ ಕಡಮೆಯಾಗಿರಲಿಲ್ಲ.

ಪಾಠಶಾಲೆಗೆ ಸೇರಿದ್ದು.—ಇಷ್ಟು ಹೊತ್ತಿಗೆ ಎರಡು ಮೂರು ಘಂಟೆಗಳಾದವು. ಆಗ ಉಪಾಧ್ಯಾಯಕಳು "ಮಗ್ಗಲು ಕೊಠಡಿಯಲ್ಲಿ ಕಸ ತುಂಬಿಹೋಗಿದೆ. ಕಸಪೊರಿಕೆಯನ್ನು ತೆಗೆದುಕೊಂಡು ಸ್ವಲ್ಪ ಗುಡಿಸು" ಎಂದು ನನಗೆ ಹೇಳಿದಳು. ಇದನ್ನು ಕೇಳಿ ನನಗೆ ಪರಮಾನಂದವಾಯಿತು. ಈ ಕೆಲಸವನ್ನು ನಾನು ಚೆನ್ನಾಗಿ ಮಾಡಿದರೆ ನನ್ನ ಉದ್ದೇಶವು ನೆರವೇರುವುದೆಂದು ತಿಳಿದುಕೊಂಡೆನು. ಚೆನ್ನಾಗಿ ಗುಡಿಸಬಲ್ಲೆನೆಂಬ ಧೈರ್ಯವೂ ಸಂಪೂರ್ಣವಾಗಿದ್ದಿತು. ಇದನ್ನು ಕಲ್ಲಿದ್ದಲಿನ ಗಣಿಯ ಯಜಮಾನನ ಮನೆಯಲ್ಲಿಯೇ ಕಲಿತುಕೊಂಡಿದ್ದೆನು. ಆದುದರಿಂದ ಈ ಕೊಟ್ಟಡಿಯನ್ನು ಮೂರು ಸಾರಿ ಜನ್ನಾಗಿ ಗುಡಿಸಿದೆನು. ಆಮೇಲೆ ಒಂದು ಬಟ್ಟೆಯನ್ನು ತೆಗೆದುಕೊಂಡು ನಾಲ್ಕು ಸಾರಿ ಧೂಳು ಹೊಡೆದೆನು. ಕಿಟಕಿ, ಬಾಗಿಲು, ಕುರ್ಚಿ, ಬೆಂಚು, ಮುಂತಾದ ಮರದ ಸಾಮಾನುಗಳನ್ನೆಲ್ಲ ಬೇರೆ ಬಟ್ಟೆಯನ್ನು ತೆಗೆದು ನಾಲ್ಕು ನಾಲ್ಕುಸಾರಿ ಉಜ್ಜಿ ಒರಸಿದನು. ಇದಲ್ಲದೆ ಸಾಮಾನುಗಳನ್ನೆಲ್ಲಾ ಅವುಗಳಿದ್ದ ಸ್ಥಳದಿಂದ ತೆಗೆದಿಟ್ಟು ಆ ಸ್ಥಳದಲ್ಲೆಲ್ಲಾ ಗುಡಿಸಿದೆನು. ಈ ಕೆಲಸವನ್ನು ನಾನು ಎಷ್ಟು ಚೆನ್ನಾಗಿ ಮಾಡಿದರೆ ಮುಂದೆ ನನಗೆ ಅಷ್ಟು ಅನುಕೂಲವೆಂಬುದು ನನಗೆ ಮುಂದಟ್ಟಾಗಿದ್ದಿತು. ಕೊಠಡಿಯಲ್ಲಿ ಸ್ವಲ್ಪವೂ ಧೂಳು ಇರಲಿಲ್ಲವೆಂದು ನನಗೆ ಧೈರ್ಯವಾದ ಮೇಲೆ ಹೋಗಿ ತಿಳಿಸಿದೆನು. ಆಕೆಯು ಪಕ್ಕಾ ಹೆಂಗಸು. ಬಂದ ಕೂಡಲೆ ನೆಲವನ್ನು ನೋಡಿದಳು. ಆಮೇಲೆ ತನ್ನ ಕೈವಸ್ತ್ರವನ್ನು ತೆಗೆದುಕೊಂಡು ಮೇಜು ಬೆಂಚು ಮುಂತಾದವುಗಳನ್ನು ಉಜ್ಜಿದಳು. ಎಲ್ಲಿಯೂ ಒಂದು ರವೆಯಷ್ಟು ಕಸವೂ ಕಾಣಲಿಲ್ಲ. ಇದನ್ನು ನೋಡಿ ಮೆಲ್ಲಗೆ "ನೀನು ಈ ಪಾಠಶಾಲೆಗೆ ಸೇರಬಹುದು" ಎಂದು ಹೇಳಿದಳು. ಆಗ ನನ್ನ ಸಮಾನ ಸುಖಿಗಳು ಮತ್ತೊಬ್ಬರೂ ಇರಲಿಲ್ಲ. ಈ

ಗುಡಿಸುವ ಪರೀಕ್ಷೆಯೇ ನನ್ನ ಯೋಗ್ಯತಾಪರೀಕ್ಷೆಗೂ, ಕಾಲೇಜು ಪರೀಕ್ಷೆಗೂ, ಎಲ್ಲಕ್ಕೂ ವಿಾರಿದುದಾಯಿತು. ಎಷ್ಟೋ ದೊಡ್ಡ ದೊಡ್ಡ ಪಾಠಶಾಲೆಗಳು ಅನೇಕ ಸ್ಥಳಗಳಲ್ಲಿ ಇವೆ. ಇಂತಹ ಯಾವ ಪಾಠಶಾಲೆಗೂ ಯಾರೂ ಇದಕ್ಕಿಂತ ದೊಡ್ಡ ಪರೀಕ್ಷೆಯನ್ನು ಕೊಟ್ಟು ಸೇರಿರಲಾರರು ಆ ಪರೀಕ್ಷೆಯನ್ನು ಕೊಟ್ಟಾರಭ್ಯ ಇನ್ನೂ ಅನೇಕ ಪರೀಕ್ಷೆಗಳಲ್ಲಿ ಪ್ಯಾಸುಮಾಡಿದೆನು. ಆದರೆ ಯಾವುದರಲ್ಲಿಯೂ ಇಷ್ಟುಮ ಟ್ಟಿಗೆ ತೇರ್ಗಡೆಯಾಗಲಿಲ್ಲ. ಇದೇ ಕಾಲದಲ್ಲಿ ನಾನು ಪಟ್ಟಂಥಾ ಕಷ್ಟಗಳನ್ನೇ ಅನು ಭವಿಸಿಕೊಂಡು ನನ್ನಂತೆಯೇ ಸಾವಿರಾರು ಜನರು ವಿದ್ಯಾಕಾಂಕ್ಷಿಗಳಾಗಿ ಸ್ಕೂಲಿ ನಿಂದ ಸ್ಕೂಲಿಗೆ ತಿರುಗುತ್ತ ಇದ್ದರು. ಇವರೆಲ್ಲರಿಗೂ ಒಂದೇ ವಿಧವಾದ ಅಭಿಲಾ ಷೆಯೂ ಒಂದೇ ವಿಧವಾದ ಶ್ರದ್ಧೆಯೂ ಇರುತಿದ್ದವು. ನಾನು ಮಾಡಿದ ಪ್ಯಾಸಿಗೆ ತಕ್ಕಂಥಾ ಕೆಲಸವೇ ನನಗೆ ಸಿಕ್ಕಿತು. ಅಲ್ಲಿಂದ ಮುಂದಕ್ಕೂ ಆ ಸ್ಕೂಲಿನ ಕೆಲವು ಭಾಗಗಳನ್ನು ಗುಡಿಸಿ ಚೊಕ್ಕಟವಾಗಿಟ್ಟಿರುವುದು ನನ್ನ ಪಾಲಿಗೆ ಬಂದಿತು. ಇದಕ್ಕಾಗಿ ನಾನು ಮಲಗಿಕೊಳ್ಳುವುದಕ್ಕೆ ರಾತ್ರಿ ಬಹಳ ಹೊತ್ತಾಗುತಿದ್ದಿತು. ನನ್ನ ಪಾಠಗ ಳನ್ನು ಓದಿಕೊಳ್ಳುವುದಕ್ಕೂ ಬೆಂಕಿ ಹೊತ್ತಿಸುವುದಕ್ಕೂ ಬೆಳಗ್ಗೆ ನಾಲ್ಕು ಘಂಟೆಯ ಹೊತ್ತಿಗೆ ಏಳಬೇಕಾಗಿದ್ದಿತು. ಎಷ್ಟೇ ಶ್ರಮವಾಗಲಿ ಈ ಕೆಲಸವನ್ನು ಮಾಡಲು ಒಪ್ಪಿಕೊಂಡೆನು. ಏಕೆಂದರೆ, ಈ ಸಂಬಳದಿಂದ ಊಟದ ಖರ್ಚು ಕಳೆದು ಹೋಗು ತಿದ್ದಿತು.

ಆರಮ್‌ಸ್ಟ್ರಾಂಗರ ಪರಿಚಯ.—ಈ ಸ್ಕೂಲಿನಲ್ಲಿಯೇ ನಾನು ಜನರಲ್ ಆರಮುಸ್ಟ್ರಾಂಗರವರನ್ನು ಮೊದಲು ಕಂಡೆನು. ಯೂರೋಪಿನಲ್ಲಿಯೂ, ಅಮೆರಿಕಾ ದಲ್ಲಿಯೂ ಪ್ರಸಿದ್ಧಪುರುಷರೆನಿಸಿಕೊಂಡಿದ್ದ ಅನೇಕರನ್ನು ನೋಡಿದ್ದೇನೆ. ಆದರೆ ಆತನ ಮುಂದೆ ಯಾರೂ ಬರಲಾರರು. ಆತನ ಗುಣವು ಎಂತಹದೆಂದಾಗಲಿ, ನಾನು ಆತನನ್ನು ಏಕೆ ಅಷ್ಟು ಹೊಗಳುತ್ತೇನೆಂಬುದನ್ನಾಗಲಿ ಒಂದು ಮಾತಿನಲ್ಲಿ ಹೇಳಿ ಮುಗಿಸಲು ಸಾಧ್ಯವಿಲ್ಲ. ಜೀತಗಾರಿಕೆಯಲ್ಲಿ ಸಿಕ್ಕಿ ನರಳುತ್ತಿದ್ದು ಆಮೇಲೆ ಕಲ್ಲಿದ್ದ ಲಿನ ಗಣಿಯಲ್ಲಿ ಬಿದ್ದು ಒದ್ದಾಡುತಿದ್ದ ನನಗೆ ಇಂಥವರ ಆಶ್ರಯವು ಲಭಿಸಿದುದು ನನ್ನ ಭಾಗ್ಯೋದಯವೇ ಸರಿ. ಆತನನ್ನು ಕಾಣುತ್ತಿದ್ದ ಹಾಗೆಯೇ ಆತನ ಸಮಾನ ರಾದವರು ಬೇರೊಬ್ಬರಿರಲಾರರೆಂದು ನಿಶ್ಚಯಮಾಡಿಕೊಂಡೆನು. ಆತನಲ್ಲಿ ಏನೋ ಒಂದು ಅಮಾನುಷವಾದ ಶಕ್ತಿ ಇದ್ದಂತೆ ತೋರಿತು. ಅಲ್ಲಿಂದ ಮುಂದೆ ಆತನೊ

ಡನೆ ಪರಿಚಯ ಹೆಚ್ಚಿದ ಹಾಗೆಲ್ಲ ಆತನಲ್ಲಿ ನನಗೆ ಇದ್ದ ಸದಭಿಪ್ರಾಯವೂ ಗೌರವವೂ ಹೆಚ್ಚಿದವು. ಆತನೊಬ್ಬನಿದ್ದರೆ ಯಾವ ಸ್ಕೂಲೂ ಬೇಕಾಗಿರಲಿಲ್ಲ. ಬರಿಯ ಕಟ್ಟಡಗಳಿಂದಾಗುವುದೇನು ? ಅಂತಹ ಒಬ್ಬೊಬ್ಬರ ಜತೆಯಲ್ಲಿ ನಿತ್ಯವೂ ಇರುತಿದ್ದರೆ ಅದೇ ಒಂದೊಂದು ದೊಡ್ಡ ವಿದ್ಯಾಭ್ಯಾಸವಾಗುವುದು. ಒಂದೊಂದು ವೇಳೆ, ನಮ್ಮ ಸ್ಕೂಲುಗಳಲ್ಲಿ ಹುಡುಗರು ಮೂರು ಹೊತ್ತೂ ಪುಸ್ತಕಗಳಲ್ಲಿರುವುದನ್ನು ಹುಡುಕಿ ಹುಡುಕಿ ಓದುತ್ತಿರುವುದಕ್ಕಿಂತ ಇಂಥವರನ್ನು ನೋಡುತ್ತಿದ್ದು ಅವರ ಗುಣ, ಶೀಲ, ಸ್ವಭಾವ, ನಡೆ, ನುಡಿ, ಕೆಲಸ ಮುಂತಾದುವುಗಳನ್ನು ಏಕೆ ಕಲಿತುಕೊಳ್ಳಬಾರದೆಂದೆನಿಸಿತು. ಆತನು ತನ್ನ ಗುಣಗಳಿಂದ ಎಲ್ಲರನ್ನೂ ಮರುಳುಮಾಡಿದ್ದನು. ಹುಡುಗರಿಗೆ ಆತನನ್ನು ಕಂಡರೆ ಪ್ರಾಣ! ಆತನು ಆಡಿದ ಮಾತಿಗೆ ಯಾರೂ ಬದಲು ಹೇಳುತ್ತಿರಲಿಲ್ಲ. ಆತನನ್ನು ಎಲ್ಲರೂ ದೇವರಂತೆ ಪೂಜೆ ಮಾಡುತ್ತಿದ್ದರೆಂದು ಹೇಳಿದರೂ ಅದು ಅತಿಶಯೋಕ್ತಿಯಾಗಲಾರದು. ನಾನು ಇನ್ನೂ ಆ ಸ್ಕೂಲಿನಲ್ಲಿದ್ದಾಗಲೇ ಓದತಕ್ಕ ಜನಗಳು ದಿನದಿನಕ್ಕೆ ಹೆಚ್ಚಾದರು. ಕೊನೆಗೆ ಎಲ್ಲರಿಗೂ ಇರುವುದಕ್ಕೇ ಸ್ಥಳ ಸಾಲದೆ ಹೋಯಿತು. ಆರಮ್‌ಸ್ಟ್ರಾಂಗರವರು ಕೆಲವು ಡೇರೆಗಳನ್ನು ಹಾಕಿಸಿ, ಕೊಠಡಿಗಳಿಗೆ ಬದಲಾಗಿ ಅವುಗಳನ್ನು ಉಪಯೋಗಿಸಬೇಕೆಂದು ಹೇಳಿದರು. ಆಗ ಚಳಿಗಾಲ. ಒಂದೊಂದು ಸಲ ಗಾಳಿ ಬೀಸಿದರೆ ಡೇರೆಗಳೆಲ್ಲವೂ ಹಾರಿ ಹೋಗುತಿದ್ದವು. ಆ ಚಳಿಯಲ್ಲಿ ಮೈಯೆಲ್ಲವೂ ಮರದ ತುಂಡಿನಂತೆ ಆಗತಿದ್ದಿತು. ಆದರೂ ಅವರ ಬಾಯಿಂದ ಬಂದ ಮೇಲೆ ಅವರನ್ನು ತೃಪ್ತಿಪಡಿಸುವುದಕ್ಕೆ ಹುಡುಗರು ಏನು ಮಾಡುವುದಕ್ಕೂ ಸಿದ್ಧರಾಗಿದ್ದರು. ಆದ್ದರಿಂದ ಎಲ್ಲರೂ ನಾನು ಮುಂದು ತಾನು ಮುಂದು ಎಂದು ಹೊರಟರು. ಇದಕ್ಕೆ ಇನ್ನೂ ಒಂದು ಕಾರಣ. ನಮ್ಮಂತೆ ಓದುವುದಕ್ಕೆ ಬಂದು ತೊಂದರೆ ಪಡುತ್ತಿದ್ದ ಇತರರಿಗೆ ಅನುಕೂಲಪಡಿಸಿಕೊಟ್ಟೆವಲ್ಲಾ ಎಂಬುದೊಂದು ದೊಡ್ಡ ಸಂತೋಷವು ಎಲ್ಲರಿಗೂ ಇದ್ದಿತು. ರಾತ್ರಿಯೆಲ್ಲಾ ಚಳಿಯಲ್ಲಿ ನಡುಗಿ ಕೊರಗುತಿದ್ದರೂ ಬೆಳಗ್ಗೆ ಎದ್ದು ಆರಂಸ್ಟ್ರಾಂಗರವರ ಮುಖವನ್ನು ನೋಡಿದ ಕೂಡಲೇ ಮನಸ್ಸು ಉಲ್ಲಾಸಮಯವಾಗುತಿದ್ದಿತು.

ಮುಖ್ಯೋಪಾಧ್ಯಾಯರ ಸಹಾಯ.—ನನ್ನ ಊಟ ಉಪಚಾರಗಳಿಗೋಸ್ಕರ ತಿಂಗಳಿಗೆ ಸುಮಾರು ಮುಪ್ಪತ್ತು ರೂಪಾಯಿ ಕೊಡಬೇಕಾಗಿತ್ತು. ಇದರಲ್ಲಿ ಸ್ವಲ್ಪ ಭಾಗವನ್ನು ಕೈಮೇಲೆ ನಗದಾಗಿ ಕೊಟ್ಟು ಉಳಿದ ಭಾಗಕ್ಕೋಸ್ಕರ ಕೆಲಸಮಾಡಬೇ

ಕಾಗಿದ್ದಿತು. ನಗದು ಹಣವನ್ನು ಕೊಡುವುದು ಹೇಗೆ ? ನನ್ನ ಹತ್ತಿರ ಇದ್ದುದ್ದೆಲ್ಲಾ ಹಿಂದೆ ಹೇಳಿದಂತೆ ಒಂದೂವರೆ ರೂಪಾಯಿ. ನಮ್ಮಣ್ಣನು ಅನುಕೂಲವಾದಾಗ ಎಂಟು ಹತ್ತು ರೂಪಾಯಿಗಳನ್ನು ಕಳುಹಿಸುತಿದ್ದನು. ಅದನ್ನು ಬಿಟ್ಟರೆ ನನಗೆ ಬೇರೆ ಸಂಪಾದನೆಗೆ ಅವಕಾಶವಿರಲಿಲ್ಲ. ಆದುದರಿಂದ ನನಗೆ ಕೊಟ್ಟಿದ್ದ ಕೆಲಸವನ್ನು ಮತ್ತೆ ಯಾರೂ ಮಾಡಲಾರದಷ್ಟು ಚೆನ್ನಾಗಿ ಮಾಡುತ ಬಂದರೆ ನನ್ನನ್ನು ಬಿಟ್ಟುಬಿಡ ಲಾರರೆಂದು ತಿಳಿದುಕೊಂಡು ಹಾಗೆಯೇ ಮಾಡುತ ಬಂದೆನು. ನನ್ನ ಇಷ್ಟದಂತೆಯೇ ಎಲ್ಲವೂ ನೆರವೇರಿತು. ಕೊಂಚ ದಿವಸದಲ್ಲಿಯೇ ನನ್ನ ಊಟದ ಖರ್ಚಿಗಾಗಿ ನಾನು ಏನೂ ನಗದು ಹಣವನ್ನು ಕೊಡಬೇಕಾಗಿಲ್ಲವೆಂದೂ ನಾನು ಮಾಡುವ ಕೆಲಸವೇ ಸಾಕಾಗಿರುವುದೆಂದೂ ನಮ್ಮ ಉಪಾಧ್ಯಾಯಿಣಿಯರು ನನಗೆ ತಿಳಿಸಿದಳು.

ಆರಮ್‌ಸ್ಟ್ರಾಂಗರವರ ಸಹಾಯ.—ನಾನು ಓದುತ್ತಿದ್ದ ತರಗತಿಗೆ ವರು ಷಕ್ಕೆ ಎಲ್ಲಾ ಒಟ್ಟು ಸುಮಾರು ಇನ್ನೂರ ಇಪ್ಪತ್ತು ರೂಪಾಯಿ ಫೀಜು ಕೊಡಬೇ ಕಾಗಿದ್ದಿತು. ಇದು ಸುತರಾಂ ನನ್ನ ಶಕ್ತಿಗೆ ಮೀರಿದುದಾಗಿ ಹೋಯಿತು. ಇದನ್ನು ನಾನು ಕೊಡಲೇಬೇಕಾಗಿ ಬಂದಿದ್ದರೆ ಹ್ಯಾಂಪ್ಟನ್ ಸ್ಕೂಲಿಗೂ ನನಗೂ ಸಂಬಂಧವೇ ಇರುತ್ತಿರಲಿಲ್ಲ. ಆದರೆ ನನ್ನ ಅದೃಷ್ಟವಶಾತ್ ಜನರಲ್ ಆರಮ್‌ಸ್ಟ್ರಾಂಗರವರು ತಮ್ಮ ಸ್ನೇಹಿತರೊಬ್ಬರಿಗೆ ನನ್ನ ವಿಚಾರವನ್ನು ತಿಳಿಸಿ ನನ್ನ ಫೀಜನ್ನು ಅವರು ಕೊಡುವ ಹಾಗೆ ಮಾಡಿದರು. ನಾನು ಹ್ಯಾಂಪ್ಟನ್‌ನಲ್ಲಿ ಇರುವವರೆಗೂ ಆ ಪುಣ್ಯಾತ್ಮರೇ ನಾನು ಪ್ರತಿ ವರ್ಷವೂ ಕೊಡಬೇಕಾದ ಫೀಜನ್ನೆಲ್ಲಾ ಕೊಟ್ಟರು. ಇರುವುದಕ್ಕೆ ಸ್ಥಳವಾಯಿತು. ಊಟಕ್ಕೆ ಅನುಕೂಲವಾಯಿತು. ಓದುವುದಕ್ಕೂ ಅನುಕೂಲ ವಾದ ಹಾಗಾಯಿತು. ಆದರೆ ಓದುವುದೇನು ? ನನ್ನ ಹತ್ತಿರ ಒಂದು ಪುಸ್ತಕವೂ ಇರಲಿಲ್ಲ. ಇದಕ್ಕೋಸ್ಕರ ಮಿಕ್ಕ ಹುಡುಗರನ್ನು ಆಶ್ರಯ ಮಾಡಬೇಕಾಯಿತು. ಆದುದರಿಂದ ಪ್ರತಿನಿತ್ಯವೂ ಯಾರಿಂದಲಾದರೂ ಪುಸ್ತಕವನ್ನು ತಂದು ಓದುತ್ತಿದ್ದೆನು.

ಉಪಾಧ್ಯಾಯರ ಸಹಾಯ.—ಅಲ್ಲಿದ್ದ ಹುಡುಗರೆಲ್ಲರೂ ಚೊಕ್ಕಟವಾಗಿ ಹಲ್ಲುಮುಖಗಳನ್ನು ತೊಳೆದು, ಸ್ನಾನವಾಡಿ ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡು ಯಾವಾಗ ನೋಡಿದರೂ ಅಚ್ಚುಕಟ್ಟಾಗಿಯೂ ಶುಭ್ರವಾಗಿಯೂ ಇರಬೇಕೆಂದು ನಿರ್ಬಂಧವಿದ್ದಿತು. ನಾನು ಪ್ರತಿದಿನವೂ ಸ್ನಾನಮಾಡುವುದರ ಆವಶ್ಯಕತೆಯನ್ನೂ ಉಪಯೋಗಗಳನ್ನೂ ಅಲ್ಲಿ ತಿಳಿದ ಮೇಲೆ ಕೇವಲ ಅನಾನುಕೂಲವಾದ ಹೊರತು ಸ್ನಾನ

ವನ್ನು ಒಂದು ದಿನವೂ ಬಿಡಲಿಲ್ಲ. ಅಲ್ಲಿರುವವರೆಗೂ ಇದಕ್ಕೇನೂ ತೊಂದರೆಯೂ ಇರುತ್ತಿರಲಿಲ್ಲ. ಆದರೆ ಶುಚಿಯಾದ ಬಟ್ಟೆಗಳನ್ನು ಹಾಕಿಕೊಳ್ಳುವುದು ಹೇಗೆ? ನಾನು ಹಾಕಿಕೊಂಡು ಬಂದ ಬಟ್ಟೆಗಳಷ್ಟೇ ನನ್ನ ಹತ್ತಿರದಲ್ಲಿದ್ದ ಬಟ್ಟೆಗಳು. ಅವು ಗಳನ್ನು ಬಿಟ್ಟರೆ ಬೇರೆ ಯಾವುದೂ ಇರಲಿಲ್ಲ. ಅವನ್ನು ಹಾಕಿಕೊಂಡೇ ಕೆಲಸ ಮಾಡಬೇಕಾಗಿದ್ದಿತು. ಅವನ್ನು ಹಾಕಿಕೊಂಡೇ ಊಟಮಾಡಬೇಕಾಗಿದ್ದಿತು. ಅವನ್ನು ಹಾಕಿಕೊಂಡೇ ಸ್ಕೂಲಿಗೆ ಹೋಗಬೇಕಾಗಿದ್ದಿತು. ಹೀಗೆ ಇದ್ದುದರಿಂದ ಅವು ಎಷ್ಟು ಶುಭ್ರವಾಗಿದ್ದುವೆಂಬುದನ್ನು ನೀವೇ ಊಹಿಸಬಹುದು. ಕೆಲವು ಕಾಲ ಈ ಬಟ್ಟೆಗಳಲ್ಲಿಯೇ ಹೇಗೋ ತಳ್ಳಿಹೋಯಿತು. ಕೊನೆಗೆ ನಾನು ಕಷ್ಟಪಟ್ಟು ಓದತಕ್ಕ ಹುಡುಗನೆಂದು ತಿಳಿದ ಮೇಲೆ ನಮ್ಮ ಉಪಾಧ್ಯಾಯರಲ್ಲಿ ಕೆಲವರು ತಾವು ಸ್ವಲ್ಪ ದಿವಸ ಹಾಕಿಕೊಂಡು ಹಳೆಯದಾದ ಬಟ್ಟೆಗಳನ್ನು ತರಿಸಿಕೊಡುತ್ತಿದ್ದರು. ಈ ಏರ್ಪಾಡಿನಿಂದ ನನ್ನಂತೆ ಬಡವರಾಗಿದ್ದ ನೂರಾರು ಹುಡುಗರಿಗೆ ಸಹಾಯವಾಗು ತಿದ್ದಿತು.

ಇತರರ ವಿಚಾರ.—ಅಲ್ಲಿ ಓದುತಿದ್ದವರಲ್ಲಿ ನಾನೇ ವಯಸ್ಸಿನಲ್ಲಿ ಕಿರಿಯ ವನು. ನಾನು ಅಲ್ಲಿ ಇದ್ದ ಮೊದಲನೆಯ ವರುಷ ಸುಮಾರು ಮುನ್ನೂರು ನಾನೂರು ಜನರಿದ್ದರು. ಇವರಲ್ಲಿ ಹೆಂಗಸರು, ಗಂಡಸರು, ಮುದುಕರು, ಹುಡುಗರು ಎಲ್ಲರೂ ಇದ್ದರು. ಒಬ್ಬರೂ ಒಂದು ಗಳಿಗೆಯಾದರೂ ಕಾಲ ಕಳೆಯುತಿರಲಿಲ್ಲ. ಅಲ್ಲಿದ್ದ ಕೆಲವು ವಯಸ್ಸಾದವರ ಶ್ರಮವನ್ನು ಹೇಳತೀರದು. ಅವರಿಗೆ ಓದಬೇಕೆಂದು ತುಂಬಾ ಆಸೆ. ಆದರೆ ಓದಿದುದು ಬಾಯಿಗೆ ಹತ್ತದು. ಅದು ಬಾರದು, ಇವರು ಬಿಡರು. ಸಾಲದುದಕ್ಕೆ ಬಡತನ. ಸಂಸಾರದ ಯೋಚನೆ ಬೇರೆ. ಇಲ್ಲಿ ತಮ್ಮ ಯೋಗಕ್ಷೇಮ ವನ್ನು ನೋಡಿಕೊಳ್ಳುವುದೂ ಅಲ್ಲದೆ ತಮ್ಮ ಹೆಂಡಿರು ಮಕ್ಕಳು ಅಥವಾ ವೃದ್ಧರಾದ ತಾಯಿತಂದೆಗಳ ಯೋಗಕ್ಷೇಮವನ್ನು ನೋಡಬೇಕಾಗಿದ್ದಿತು.

ಉಪಾಧ್ಯಾಯರ ಕೆಲಸ.—ವಿದ್ಯಾರ್ಥಿಗಳಿಗೆ ಯಾವ ವಿಧವಾದ ಶ್ರದ್ಧೆಯು ಇರುತಿದ್ದಿತೋ ಅದೇ ವಿಧವಾದ ಶ್ರದ್ಧೆಯು ಅಲ್ಲಿ ಕೆಲಸಮಾಡುತ್ತಿದ್ದ ಉಪಾಧ್ಯಾ ಯರಿಗೂ ಇತರ ಅಧಿಕಾರಿಗಳಿಗೂ ಇರುತಿದ್ದಿತು. ಯಾರಿಗೂ ತಮ್ಮ ಯೋಚನೆ ಲೇಶವೂ ಇರಲಿಲ್ಲ. ಒಂದೊಂದಕ್ಷರವಾಗಿ ಕಲಿಯುತಿದ್ದ ಹುಡುಗನಿಗೂ ತನ್ನ ಜನರನ್ನು ಮುಂದಕ್ಕೆ ತರಬೇಕೆಂಬ ಯೋಚನೆಯು ಸರ್ವದಾ ಇರುತಿತ್ತು. ಉಪಾ

ಧ್ಯಾಯರು ನಮಗಾಗಿ ತಮ್ಮ ದೇಹವನ್ನು ತೆಯ್ದು ಬಿಡುತ್ತಿದ್ದರು. ಯಾವ ಕಾಲದಲ್ಲಿಯಾಗಲಿ ಯಾವ ಗಳಿಗೆಯಲ್ಲಾಗಲಿ ತಮ್ಮ ಕೈಲಾದ ಸಹಾಯವನ್ನು ಮಾಡುವುದಕ್ಕೆ ಸಿದ್ಧರಾಗಿರುತಿದ್ದರು. ತಮ್ಮಿಂದ ಮತ್ತೊಬ್ಬರಿಗೆ ಸ್ವಲ್ಪ ಸಹಾಯವಾಯಿತೆಂದು ತಿಳಿದರೆ ಅವರಿಗೆ ಅದೇ ಪರಮಸೌಖ್ಯ. ಇಂತಹ ದಯಾದ್ರ್ರಹೃದಯರೂ, ಸಹಾಯಪರರೂ, ಶ್ರದ್ಧಾಳುಗಳೂ ಅಲ್ಲಿ ಇದ್ದುದರಿಂದಲ್ಲವೆ ನನ್ನಂಥಾ ಅಧೋಗತಿಯನ್ನು ಸೇರಿ, ಎಲ್ಲಾ ಆಶೆಯನ್ನೂ ತೊರೆದು, ಮನುಷ್ಯರಲ್ಲಿ ಗಣನೆಗೆ ಬರದಿದ್ದ ಸಾವಿರಾರು ಮಂದಿ ನೀಗ್ರೊ ಜನರು ಮುಂದಕ್ಕೆ ಬಂದರು !

ಅಧ್ಯಾಯ ೭.

ಉಪಕಾರ.

ಊರಿಗೆ ಹೋಗಲು ಪ್ರಯತ್ನ.—ಒಂದು ವರುಷವಾಯಿತು. ಸ್ಕೂಲಿಗೆಲ್ಲಾ ರಜ ಬಂದಿತು. ಹುಡುಗರೆಲ್ಲರೂ ತಮ್ಮ ತಮ್ಮ ಊರುಗಳಿಗೆ ಹೊರಟರು. ನಾನೂ ಹೋಗಬೇಕಾಗಿದ್ದಿತು. ಆದರೆ ನಾನು ಹೋಗುವುದು ಹೇಗೆ ? ನನ್ನಲ್ಲಿ ಒಂದು ಕಾಸೂ ಇರಲಿಲ್ಲ. ಅದು ಹೇಗಾದರೂ ಇರಲಿ. ರಜಾ ಮುಗಿಯುವವರೆಗೆ ನಾನು ಆ ಸ್ಕೂಲನ್ನು ಬಿಟ್ಟು ಎಲ್ಲಿಯಾದರೂ ಹೋಗಿಯೇ ಹೋಗಬೇಕಾಗಿದ್ದಿತು. ಏಕೆಂದರೆ, ಆ ರಜದ ದಿವಸದಲ್ಲಿ ಯಾರನ್ನೂ ಸ್ಕೂಲಿನಲ್ಲಿ ಇರಗೊಡಿಸುತ್ತಿರಲಿಲ್ಲ. ಹುಡುಗರೆಲ್ಲರೂ ಗಂಟು ಮೂಟೆಗಳನ್ನು ಕಟ್ಟಿಕೊಂಡು ಆತುರರಾಗಿ ಅವರವರ ಊರಿಗೆ ಹೊರಡುತಿದ್ದುದನ್ನು ನೋಡಿ ನನಗೂ ಮನೆಯ ಮೇಲೆ ಜ್ಞಾನವು ಎಳೆಯುತ್ತ ಬಂದಿತು. ಮನೆಯ ವಿಷಯವಿರಲಿ; ಎಲ್ಲಿ ಹೊರಡುವುದಕ್ಕೂ ನನ್ನ ಹತ್ತಿರ ದುಡ್ಡು ಇರಲಿಲ್ಲ. ನನ್ನ ಹತ್ತಿನ ಒಂದು ಹಳೆಯ ಅಂಗಿ ಹೆಚ್ಚಾಗಿ ಒಂದು ಸೇರಿದ್ದಿತು. ಅದು ಬಲು ಚೆನ್ನಾಗಿದ್ದುದರಿಂದ ಅದನ್ನು ಹಾಗೆಯೇ ಇಟ್ಟುಕೊಂಡಿದ್ದೆನು. ಅದನ್ನು ಈಗ ಮಾರಿಬಿಟ್ಟು ಖರ್ಚಿಗೆ ದುಡ್ಡು ಮಾಡಿಕೊಳ್ಳೋಣವೆಂದು ಯೋಚಿಸಿ ನನ್ನಲ್ಲಿ ಅಂಗಿ ಇರುವ ವಿಷಯವನ್ನು ನಾಲ್ಕಾರು ಜನಗಳಿಗೆ ತಿಳಿಯಪಡಿಸಿದೆನು. ಆದರೆ ಇದನ್ನು ನನ್ನ

ಜತೆಯ ಹುಡುಗರಿಗೆ ಮಾತ್ರ ತಿಳಿಸಲಿಲ್ಲ. ಏಕೆಂದರೆ ನಾನು ಕಾಸಿಲ್ಲದ ಹುಡುಗನಾಗಿದ್ದರೂ, ನನ್ನ ನಿಜವಾದ ಸ್ಥಿತಿಯನ್ನು ಸಮಾನರಾದವರಲ್ಲಿ ತೋರ್ಪಡಿಸಿಕೊಳ್ಳುವುದಕ್ಕೆ ಮಾನವು ಬಾಧಿಸುತಿತ್ತು. ಯಾರುಯಾರಿಗೆ ಹೇಳಿದರೂ ಒಬ್ಬರಿಗೂ ನನ್ನ ಪರಮಾಷಿಯ ಅಂಗಿಯು ಬೇಕಾಗಲಿಲ್ಲ. ಕೊನೆಗೆ ಒಬ್ಬ ಕಪ್ಪು ಮನುಷ್ಯನು ತನಗೆ ಅದು ಬೇಕಾಗಿರುವುದಾಗಿಯೂ, ತಾನೇ ಮೂರನೆಯ ದಿನ ಬೆಳಗ್ಗೆ ನನ್ನ ಕೊಠಡಿಗೆ ಬಂದು ಅದನ್ನು ನೋಡಿ ಮಾತನಾಡುವುದಾಗಿಯೂ ಹೇಳಿದನು. ಇದನ್ನು ಕೇಳಿ ಮನಸ್ಸಿಗೆ ಸ್ವಲ್ಪ ಹರ್ಷವಾಯಿತು. ಅವನು ಹೇಳಿದಂತೆ ಮೂರನೆಯ ದಿನ ಬೆಳಗ್ಗೆ ಹೊತ್ತಿಗೆ ಸರಿಯಾಗಿ ಬಂದು ಪದಾರ್ಥವನ್ನು ಕೈಯಲ್ಲಿ ತೆಗೆದುಕೊಂಡು ಚೆನ್ನಾಗಿ ನೋಡಿ, ಅದರ ಬೆಲೆಯೇನೆಂದು ಕೇಳಿದನು. ನಾನು ಒಂಭತು ರೂಪಾಯಿ ಆಗುವುದೆಂದನು. ಆತನು ಅದರಲ್ಲೇನೂ ಚೌಕಸಿ ಮಾಡಲಿಲ್ಲ. ಆದರೆ " ಅಯ್ಯಾ, ನಾನು ಮಾಡುವುದನ್ನು ಕೇಳು, ನಾನು ನಿನ್ನ ಅಂಗಿಯನ್ನೇನೋ ಕೊಂಡುಕೊಳ್ಳುತ್ತೇನೆ; ಸದ್ಯಕ್ಕೆ ನನ್ನಲ್ಲಿ ಎರಡೂವರೆಯಾಣೆ ಇದೆ. ಅದನ್ನು ತೆಗೆದುಕೋ, ಮಿಕ್ಕ ದುಡ್ಡನ್ನು ನನಗೆ ಸಿಕ್ಕಿದ ಕೂಡಲೇ ನಿನಗೆ ತಲಪಿಸುತ್ತೇನೆ " ಎಂದು ಹೇಳಿದನು. ಇದನ್ನು ಕೇಳಿದ ಕೂಡಲೆ, ನನಗೆ ತುಂಬಾ ವ್ಯಸನವಾಯಿತು.

ಆ ಪ್ರಯತ್ನವನ್ನು ಬಿಟ್ಟದ್ದು.—ಇದಾದ ಮೇಲೆ ಹ್ಯಾಂಪ್ಟನ್ ಪಟ್ಟಣದಿಂದ ಹೋಗುವ ಯೋಚನೆಯನ್ನೇ ಬಿಟ್ಟು, ಎಲ್ಲಿಯಾದರೂ ಕೆಲಸ ಮಾಡಿ ನಾಲ್ಕು ಕಾಸು ಸಂಪಾದನೆ ಮಾಡಬೇಕೆಂದು ಪ್ರಯತ್ನಮಾಡಿದೆನು. ಬಹಳವಾಗಿ ಹುಡುಕಿದ ಮೇಲೆ ಒಂದು ಹೊಟೇಲಿನಲ್ಲಿ ಕೆಲಸ ಸಿಕ್ಕಿತು. ಆದರೆ ನನ್ನ ಊಟ ಕಳೆದು ಕೈಗೆ ಬರುತಿದ್ದ ದುಡ್ಡು ಬಹಳ ಸ್ವಲ್ಪವಾಗಿರುತಿದ್ದಿತು. ಇದರಿಂದ ನನ್ನ ಅಭಿಲಾಷೆಯೊಂದೂ ತೀರಿದ ಹಾಗಾಗಲಿಲ್ಲ. ಸ್ವಲ್ಪ ದುಡ್ಡು ಕೈ ಸೇರಿದರೆ ಅವಶ್ಯವಾಗಿ ಬೇಕಾಗಿದ್ದ ಕೆಲವು ಸಾಮಾನುಗಳನ್ನು ತೆಗೆದುಕೊಂಡು, ಇನ್ನೂ ಸ್ಕೂಲಿಗೆ ಕೊಡಬೇಕಾಗಿದ್ದ ಬಾಕಿಯನ್ನು ಕೊಡಬೇಕೆಂದಿದ್ದೆನು. ಎಷ್ಟೆಷ್ಟೋ ಕಷ್ಟಪಟ್ಟೆನು ; ಹೆಚ್ಚಾಗಿ ಒಂದು ಕಾಸೂ ಖರ್ಚು ಮಾಡುತ್ತಿರಲಿಲ್ಲ. ಆದರೂ ಸ್ಕೂಲು ಬಾಗಿಲು ತೆಗೆಯುವ ಹೊತ್ತಿಗೆ ಸಾಕಾದಷ್ಟು ದುಡ್ಡು ಸೇರಲಿಲ್ಲ.

ಭೋಜನಶಾಲೆಯಲ್ಲಿ ಕೆಲಸ.—ಒಂದು ದಿನ ಹೊಟೇಲಿನಲ್ಲಿ ಕೆಲಸ ಮಾಡುತ್ತಿರುವಾಗ ಒಂದು ಮೇಜಿನ ಕೆಳಗೆ ಮುವ್ವತ್ತು ರೂಪಾಯಿನ ಒಂದು ನೋಟು

ಬಿದ್ದಿದ್ದಿತು. ಆ ಕೊಠಡಿಯು ಕೆಲಸವು ನನಗೆ ಸೇರಲಿಲ್ಲ. ಆದರೂ ಅದನ್ನು ತೆಗೆದು ಕೊಂಡು ಹೋಗಿ ಆ ಹೊಟೇಲಿನ ಯಜಮಾನನಿಗೆ ತೋರಿಸುವುದು ಧರ್ಮವೆಂದು ತಿಳಿದು ಹಾಗೆ ಮಾಡಿದೆನು. ಅವನು ಅದನ್ನು ನೋಡಿ ಬಹಳ ಸಂತೋಷಪಟ್ಟು, ಅದು ತನಗೆ ಸೇರತಕ್ಕದೆಂದು ಹೇಳಿ, ಪೆಟ್ಟಿಗೆಯಲ್ಲಿ ಹಾಕಿಕೊಂಡನು. ಇದನು ನೋಡಿ ನನ್ನ ಮನಸ್ಸಿಗೆ ಸ್ವಲ್ಪ ಕೊರತೆಯುಂಟಾಯಿತು. ಆದರೆ ಇಂಥಾ ಕೊರತೆಗಳ ನ್ನೆಲ್ಲಾ ಮನಸ್ಸಿಗೆ ಹಚ್ಚಿಸಿಕೊಂಡು ಮಾಡುವ ಕೆಲಸವನ್ನು ಬಿಡುತ್ತಿರಲಿಲ್ಲ. ಈ ಹೊಟೇಲಿನಲ್ಲಿದ್ದಾಗ ಅವಕಾಶಮಾಡಿಕೊಂಡು ವ್ಯಾಸಂಗ ಮಾಡುತ್ತಲೇ ಇದ್ದೆನು. ಆಗಿನ ಕಾಲದಲ್ಲಿ ನಾನು ಯಾವ ಕೆಲಸಕ್ಕೆ ಕೈ ಹಾಕಿದರೂ ಅದನ್ನು ಮಾಡಿಯೇ ಮಾಡುವೆನೆಂಬ ಹಠದಿಂದಲೂ, ಭರವಸೆಯಿಂದಲೂ ಹೊರಡುತಿದ್ದೆನು. ಯಾರಾ ದರೂ ಬಂದು ನನಗೆ ಅದು ಅಸಾಧ್ಯವೆಂದೂ, ನಾನು ಮಾಡಲಾರೆನೆಂದೂ ಹೇಳಿದರೆ ನನಗೆ ಮೈಯೆಲ್ಲಾ ಉರಿಯುವಷ್ಟು ಕೋಪಬರುತಿದ್ದಿತು.

ಪಾಠಶಾಲೆಯಲ್ಲಿ ದ್ವಿತಿಯ ವರ್ಷಾರಂಭ.—ಸ್ಕೂಲಿಗೆ ಕೊಟ್ಟಿದ್ದ ರಜವು ಮುಗಿದು ಹೋಯಿತು. ಕೂಡಲೇ ಹೊಟೇಲನ್ನು ಬಿಟ್ಟು ಸ್ಕೂಲಿಗೆ ಹೋಗಿ ನಾನು ಇನ್ನು ಸ್ವಲ್ಪ ಹಣವನ್ನು ಕೊಡಬೇಕೆಂಬದಾಗಿಯೂ ಆದರೆ ಸಧ್ಯದಲ್ಲಿ ಅದು ಅಸಾ ಧ್ಯವೆಂಬದಾಗಿಯೂ ತಿಳಿಸಿದೆನು. ನಾನು ಹಾಗೆಯೇ ಸೇರಿಕೊಳ್ಳಬಹುದೆಂಬದಾಗಿ ಉಪಾಧ್ಯಾಯರು ಹೇಳಿದರು. ಮೊದಲನೆಯ ವರುಷಕ್ಕಿಂತಲೂ ಎರಡನೆಯ ವರುಷ ನಮ್ಮ ಉಪಾಧ್ಯಾಯರುಗಳನ್ನು ನೋಡಿ ನನಗೆ ಹೆಚ್ಚು ಆಶ್ಚರ್ಯವಾಯಿತು. ಇದನ್ನು ಸಾಕ್ಷಾತ್ತಾಗಿ ನೋಡಿದವರು ಹೊರತು ಮತ್ತೆ ಯಾರೂ ಇತರರಿಗಾಗಿ ಅವರು ಅಷ್ಟು ಕಷ್ಟಪಡುತ್ತಿದ್ದರೆಂದು ಹೇಳಿದರೆ ನಂಬಲಾರರು. ಕೊನೆಗೆ ನಾನೂ ಪರೋಪಕಾರದಲ್ಲಿರುವ ಸೌಖ್ಯವು ಮತ್ತೆ ಯಾತರಲ್ಲಿಯೂ ಬರಲಾರದೆಂದು ಮನಸ್ಸಿಗೆ ಮಂದಟ್ಟು ಮಾಡಿಕೊಂಡೆನು. ಅದನ್ನು ಇದುವರೆಗೂ ಮರೆತಿಲ್ಲ. ಮುಂದಕ್ಕೂ ಮರೆಯಲಾರೆನೆಂದು ತಿಳಿದುಕೊಂಡಿದ್ದೇನೆ.

ವಿರಾಮದಲ್ಲಿ ಮಾಲ್ಡನ್‌ಗೆ ಹೋದದ್ದು.—ಎರಡನೆಯ ವರುಷವೂ ಕಳೆಯಿತು. ಇಷ್ಟು ಹೊತ್ತಿಗೆ ನಮ್ಮ ತಾಯಿಯೂ, ಅಣ್ಣನೂ ಕಳುಹಿಸಿದ ಹಣವನ್ನು ಕೂಡಿಸಿ ಟ್ಟುಕೊಂಡಿದ್ದೆನು. ನಮ್ಮ ಉಪಾಧ್ಯಾಯರಲ್ಲಿ ಒಬ್ಬರು ಸ್ವಲ್ಪ ಸಹಾಯ ಮಾಡಿ ದರು. ಇದೆಲ್ಲವನ್ನೂ ಸೇರಿಸಿಕೊಂಡು ವರ್ಷದ ಕೊನೆಯಲ್ಲಿ ರಜಾ ಬಂದೊಡನೆಯೇ

ಮೊಲ್ಡ್ರ್ ಪಟ್ಟಣಕ್ಕೆ ಹೋದೆನು. ಆಗ ಉಪ್ಪಿನ ಗಣಿಯಲ್ಲಿ ಕೆಲಸ ನಿಂತುಹೋಗಿದ್ದಿತು. ಕಲ್ಲಿದ್ದಲಿನ ಗಣಿಯಲ್ಲಿ ಕೆಲಸಗಾರರೆಲ್ಲರೂ ಅಸಮಾಧಾನಪಟ್ಟುಕೊಂಡು ಕೆಲಸಕ್ಕೆ ಬಾರದೆ ನಿಂತುಬಿಟ್ಟಿದ್ದರು. ಇದು ಆಗಾಗ್ಗೆ ಆಗುತ್ತಿರುವುದುಂಟು. ಕೈಯ್ಯಲ್ಲಿ ಸ್ವಲ್ಪ ದುಡ್ಡು ಸೇರಿದ ಕೂಡಲೇ ಅವರು ಯಜಮಾನನೊಡನೆ ಏನಾದರೂ ಒಂದು ಜಗಳವನ್ನು ತೆಗೆದು ಕೆಲಸಕ್ಕೆ ಹೋಗದೆ ನಿಂತುಬಿಡುತ್ತಿದ್ದರು. ಇದ್ದದ್ದೆಲ್ಲಾ ಪೂರ್ತಿಯಾಗಿ ವೆಚ್ಚವಾದ ಮೇಲೆ ಮತ್ತೆ ಅವನನ್ನೇ ಹುಡುಕಿಕೊಂಡು ಹೋಗುತ್ತಿದ್ದರು. ಇಲ್ಲದಿದ್ದರೆ ಸಂಸಾರವನ್ನೆಲ್ಲಾ ಕಟ್ಟಿಕೊಂಡು, ಪಡಬಾರದ ಕಷ್ಟಗಳನ್ನು ಪಟ್ಟುಕೊಂಡು, ಕೆಲಸ ಸಿಕ್ಕುವ ಬೇರೆ ಕಡೆಗೆ ಹೋಗುತ್ತಿದ್ದರು.

ಮಾತೃವಿಯೋಗ.—ನಮ್ಮ ಮನೆಯವರಿಗೆ, ಅದರಲ್ಲಿಯೂ ಮುಖ್ಯವಾಗಿ ನಮ್ಮ ತಾಯಿಗೆ, ನನ್ನನ್ನು ನೋಡಿ ಬಹಳ ಸಂತೋಷವಾಯಿತು. ನಾನು ಎರಡು ವರುಷಗಳಿಂದ ಮಾಡಿದ ಕೆಲಸಗಳನ್ನೂ, ಕಲಿತ ವಿದ್ಯೆಯನ್ನೂ ಕೇಳಿ ಅವರೆಲ್ಲರಿಗೂ ಹಿಡಿಯಲಾರದಷ್ಟು ಆನಂದ ಉಂಟಾಯಿತು. ನಮ್ಮ ಮನೆಯವರು ಹಾಗಿರಲಿ; ನಮ್ಮ ಜನರೆಲ್ಲರಿಗೂ ನನ್ನಲ್ಲಿ ಒಂದು ವಿಧವಾದ ವಾತ್ಸಲ್ಯ ಹುಟ್ಟಿತು. ಅವರೆಲ್ಲರ ಮನೆಗೂ ಒಂದು ದಿನಕ್ಕೆ ಒಬ್ಬರ ಮನೆಯಂತೆ ಹೋಗಿ ಅವರ ಜತೆಯಲ್ಲಿ ಊಟ ಮಾಡಿ ನಾನು ಹ್ಯಾಂಪ್ಟನ್ ಪಟ್ಟಣದಲ್ಲಿ ಮಾಡಿದ ಕೆಲಸಗಳನ್ನೆಲ್ಲಾ ಸಾಂಗವಾಗಿ ಹೇಳಬೇಕೆಂದು ಹೇಳಿದರು. ಇದು ಯಾವುದೂ ನನಗೆ ಅಷ್ಟು ಅವಶ್ಯಕವಾಗಿ ಬೇಕಾದುದಾಗಿರಲಿಲ್ಲ. ನನಗೆ ಬೇಕಾಗಿದ್ದುದು ಮತ್ತೆ ರಜಾ ಮುಗಿದ ಕೂಡಲೆ ಹ್ಯಾಂಪ್ಟನ್ನಿಗೆ ಹೋಗುವುದಕ್ಕೆ ಸಾಕಾದಷ್ಟು ಹಣ. ಇದಕ್ಕಾಗಿ ಎಲ್ಲಿಯಾದರೂ ಕೆಲಸ ಸಿಕ್ಕೀತೇ ಎಂದು ನೋಡುತ್ತಿದ್ದೆನು. ಈ ಪ್ರಯತ್ನದಲ್ಲಿಯೇ ಒಂದು ತಿಂಗಳವರೆಗೂ ಕಳೆದು ಹೋಯಿತು. ಕೊನೆಗೆ ನಾವು ಇದ್ದ ಸ್ಥಳಕ್ಕೆ ಬಲು ದೂರದಲ್ಲಿದ್ದ ಒಂದು ಕಡೆಯಲ್ಲಿ ಕೆಲಸ ಸಿಕ್ಕಬಹುದೆಂಬ ಯೋಚನೆಯಿಂದ ಅಲ್ಲಿಗೆ ಹೋಗಿ ತಿರುಗಿ ಮನೆಗೆ ಬರುತ್ತಾ ಇದ್ದೆನು. ದಾರಿಯಲ್ಲಿಯೇ ಕತ್ತಲಾಯಿತು. ಬಹಳ ಆಯಾಸವಾಗಿ ನಡೆಯಲಾರದೆ ಹೋದೆನು. ಆದ್ದರಿಂದ ದಾರಿಯಲ್ಲಿ ಒಬ್ಬರ ಮನೆಯನ್ನು ಹೊಕ್ಕು ಅಲ್ಲಿಯೇ ಮಲಗಿಕೊಂಡಿದ್ದೆನು. ಸುಮಾರು ಬೆಳಗಿನ ಜಾವ ಮೂರು ಗಂಟೆಯ ಹೊತ್ತಿನಲ್ಲಿ ನಮ್ಮಣ್ಣನು ಅಲ್ಲಿಗೆ ಬಂದು ನನ್ನನ್ನು ಎಬ್ಬಿಸಿ ನಮ್ಮ ತಾಯಿಯು ಸ್ವರ್ಗಸ್ಥಳಾದಳೆಂದು ತಿಳಿಸಿದನು.

ಮಾತೃವಿಯೋಗ ಶೋಕ.—ಈ ವ್ಯಸನಕರವಾದ ವರ್ತಮಾನವನ್ನು ಕೇಳಿದ ಕೂಡಲೆ ನನಗೆ ದುಃಖವು ಉಕ್ಕಿಬಂದಿತು. ಬಹಳ ದಿವಸದಿಂದ ಆಕೆಗೆ ದೇಹದಲ್ಲಿ ಆಲಸ್ಯವಾಗಿಯೇ ಇದ್ದಿತು. ಆದರೆ ಅದರ ಹಿಂದಿನ ದಿವಸ ಮನೆಯನ್ನು ಬಿಟ್ಟು ಹೊರಟಾಗ ಮತ್ತೆ ಆಕೆಯ ಮುಖವೇ ಸಿಕ್ಕುವುದಿಲ್ಲವೆಂದು ನಾನು ಎಂದಿಗೂ ಭಾವಿಸಿಕೊಂಡಿರಲಿಲ್ಲ. ಅಲ್ಲದೆ ನಮ್ಮ ತಾಯಿಯ ಅಂತ್ಯಕಾಲದಲ್ಲಿ ಹತ್ತಿರವೇ ಇರಬೇಕೆಂಬುದಾಗಿ ನನಗೆ ಮೊದಲಿನಿಂದಲೂ ದೊಡ್ಡ ಆಸೆ ಇದ್ದಿತು. ಎಷ್ಟು ಕಷ್ಟವನ್ನಾದರೂ ಪಟ್ಟು ಮುಂದಕ್ಕೆ ಬರಬೇಕೆಂಬ ನನ್ನ ಪ್ರಯತ್ನಕ್ಕೆ, ನಮ್ಮ ತಾಯಿಯನ್ನು ಸುಖವಾಗಿ ಅನುಕೂಲ ಸ್ಥಿತಿಯಲ್ಲಿಟ್ಟುಕೊಂಡು ಆಕೆಯನ್ನು ಸಂತೋಷಪಡಿಸುತ್ತಿರಬೇಕೆಂಬ ಅಭಿಲಾಷೆಯೇ ಮುಖ್ಯಕಾರಣವಾಗಿದ್ದಿತು. ಆಕೆಗೂ ತನ್ನ ಮಕ್ಕಳು ಅಭಿವೃದ್ಧಿಗೆ ಬಂದು ಸ್ವತಂತ್ರರಾಗಿ ಸಂಸಾರ ಮಾಡಿಕೊಂಡು ಸುಖವಾಗಿರುವುದನ್ನು ನೋಡಬೇಕೆಂಬ ಕುತೂಹಲವು ಬಹಳವಾಗಿದ್ದಿತು. ಇವುಗಳಲ್ಲಿ ಒಂದೂ ನಡೆಯಲಿಲ್ಲವಲ್ಲಾ ಎಂದು ಬಿಕ್ಕಿಬಿಕ್ಕಿ ಅಳುವಷ್ಟು ದುಃಖವು ನನಗೆ ಬಂದಿತು.

ಸಾಂಸಾರಿಕ ಕ್ಲೇಶ—ನಮ್ಮ ತಾಯಿಯು ಕಾಲವಾದ ಮೇಲೆ ಮನೆಯ ಸಂಸಾರವೆಲ್ಲವೂ ಅವ್ಯವಸ್ಥೆಗಿಟ್ಟುಕೊಂಡಿತು. ನನ್ನ ತಂಗಿಯು ಇನ್ನೂ ಹುಡುಗಿ. ಯಾರನ್ನಾದರೂ ಪರಿಚಾರಕರನ್ನು ಇಟ್ಟುಕೊಳ್ಳುವುದಕ್ಕೆ ನಮಗೆ ಬಡತನ. ಈ ಸ್ಥಿತಿಯಲ್ಲಿ ಒಂದೊಂದು ದಿನ ಮನೆಯಲ್ಲಿ ಅಡಿಗೆಯನ್ನೇ ಮಾಡುತ್ತಿರಲಿಲ್ಲ. ಏನಾದರೂ ಸಿಕ್ಕಿದ ಹಣ್ಣು ಹಂಪಲುಗಳನ್ನು ತಿಂದು ನೀರು ಕುಡಿದು ಇರುತ್ತಿದ್ದೆವು. ಹೊಟ್ಟೆಗೇ ಈ ರೀತಿಯಾದ ಮೇಲೆ ಬಟ್ಟೆಗಳಿಗಂತು ಹೇಳಬೇಕೇ? ನಾನು ಯಾವಾಗಲೂ ಇಂತಹ ಕಷ್ಟದಲ್ಲಿಯೂ, ವ್ಯಸನದಲ್ಲಿಯೂ ಸಿಕ್ಕಿಕೊಂಡಿರಲಿಲ್ಲ.

ಪುನಃ ಹ್ಯಾಂಪ್ಟನ್‌ಗೆ ಪ್ರಯಾಣ.—ನಾನು ಮೊದಲು ಕೆಲಸಮಾಡುತ್ತಿದ್ದ ಕಲ್ಲಿದ್ದಲ ಗಣಿಯಲ್ಲಿಯೂ, ಆ ಗಣಿಯ ಯಜಮಾನನಲ್ಲಿಯೂ ಮತ್ತೆ ಕೆಲಸಮಾಡಿ ಸ್ವಲ್ಪ ದುಡ್ಡು ಮಾಡಿಕೊಂಡೆನು. ಬಟ್ಟೆಬರೆಗಳನ್ನು ಯಾವುದನ್ನೂ ಹೊಸದಾಗಿ ಹೊಲಿಸಿಕೊಳ್ಳುವುದಕ್ಕಾಗಲಿಲ್ಲ. ನಮ್ಮ ಅಣ್ಣನ ಹತ್ತಿರವಿದ್ದವುಗಳನ್ನೇ ಕೆಲವನ್ನು ತೆಗೆದುಕೊಂಡು, ಮತ್ತೆ ಹ್ಯಾಂಪ್ಟನ್‌ಗೆ ಹೋಗುವುದಕ್ಕೆ ಅನುಕೂಲವಾಯಿತಲ್ಲಾ ಎಂಬ ಸಂತೋಷದಿಂದ ಇದ್ದೆನು. ಅಷ್ಟು ಹೊತ್ತಿಗೆ ರಜವು ಇನ್ನೂ ಹದಿನೈದು,

ಇಪ್ಪತ್ತು ದಿನಗಳಿದ್ದವು. ಆಗ ನಮ್ಮ ಉಪಾಧ್ಯಾಯಿಕಳು ಸ್ಕೂಲು ಬಾಗಿಲು ಮತ್ತೆ ತೆಗೆಯುವ ಹೊತ್ತಿಗೆ ಅಲ್ಲಿ ಮಾಡಬೇಕಾದ ಕೆಲಸವು ಇನ್ನೂ ತುಂಬಾ ಇದ್ದಿತೆಂಬದಾಗಿಯೂ, ಆದುದರಿಂದ ಕೂಡಲೇ ಬರಬೇಕೆಂಬದಾಗಿಯೂ ಬರೆದಳು. ತತ್‌ಕ್ಷಣವೇ ನಾನೂ ಹೊರಟೆನು.

ಉಪಾಧ್ಯಾಯಿಕಳ ಗುಣ.—ನಾನು ಹೋದ ಮೇಲೆ ಆಕೆಯೂ ನನ್ನ ಜತೆಗೂ ಧೂಳು ಹೊಡೆಯುವುದು, ಗುಡಿಸುವುದು, ಸಾಮಾನು ಸಾಗಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದಳು. ಎಲ್ಲಿಯಾದರೂ ಒಂದು ಸ್ವಲ್ಪ ಕಸವನ್ನು ಕಂಡರೆ ಅದನ್ನು ತೆಗೆಯುವವರೆಗೂ ಬಿಡುತ್ತಿರಲಿಲ್ಲ. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಆಕೆಯೇನೂ ಬಡವಳಲ್ಲ; ಈ ಕೆಲಸವನ್ನು ಬಿಟ್ಟರೆ ಅವಳಿಗೆ ಬೇರೆ ದಾರಿಯಿಲ್ಲವೆಂದು ಹೇಳುವ ಹಾಗಿರಲಿಲ್ಲ; ಚೆನ್ನಾಗಿ ವಿದ್ಯೆಯನ್ನು ಕಲಿತವಳು ; ಒಳ್ಳೆಯ ದೊಡ್ಡ ಮನೆತನಕ್ಕೆ ಸೇರಿದವಳೂ ಹೌದು. ಇಂಥವಳು ಅಧಮಜಾತಿಯೆಂದು ಎಲ್ಲರೂ ಅಲಕ್ಷ್ಯ ಮಾಡುತ್ತಿದ್ದ ನಮ್ಮವರನ್ನು ಮುಂದಕ್ಕೆ ತರುವುದಕ್ಕಾಗಿ ಎಷ್ಟು ಪ್ರಯತ್ನಮಾಡುತ್ತಿದ್ದಳು ! ಎಷ್ಟು ಕೀಳು ಕೆಲಸಗಳನ್ನೆಲ್ಲಾ ಮಾಡುತ್ತಿದ್ದಳು ! ಮತ್ತೆ ಯಾರಿಗಾದರೂ ನಾಲ್ಕು ಅಕ್ಷರಗಳನ್ನು ಕಲಿತವರಿಗೆ ಇಂಥಾ ಕೆಲಸವನ್ನು ಮಾಡಬೇಕೆಂದು ಹೇಳಿದರೆ ಆ ಮಾತನ್ನು ಕೇಳಿದುದೇ ಒಂದು ದೊಡ್ಡ ಅವಮಾನವೆಂದು ಭಾವಿಸುವರು. ಇದನ್ನು ನೋಡಿ ಎಂತಹ ದೊಡ್ಡ ಮನುಷ್ಯನೇ ಆಗಲೀ ಕೆಲಸ ಮಾಡುವುದರಲ್ಲಿ ಯಾವ ಅವಮಾನವೂ ಇಲ್ಲವೆಂದು ನಾನು ತಿಳಿದುಕೊಂಡೆನು. ಅಂದಿನಿಂದ ಯಾವ ಸ್ಕೂಲೇ ಆಗಲಿ, ಕಪ್ಪು ಜನರದೇ ಆಗಲಿ, ಕೆಂಪು ಜನರದೇ ಆಗಲಿ ಹುಡುಗರಿಗೆ ಕೆಲಸ ಮಾಡುವುದರಲ್ಲಿರುವ ಗೌರವವನ್ನು ಬೋಧಿಸದೆ ಹೋದರೆ ನನ್ನ ಮನಸ್ಸಿಗೆ ಸಂತೋಷವಾಗಲೀ ಸಮಾಧಾನವಾಗಲೀ ಇರುತ್ತಿರಲಿಲ್ಲ.

ವಿದ್ಯಾಭ್ಯಾಸ ಮುಗಿದುದು.—1875 ನೆಯ ಇಸವಿ ಜೂನ್ ತಿಂಗಳಿಗೆ ನಾನು ಹ್ಯಾಂಪ್ಟನ್ ಸ್ಕೂಲಿನಲ್ಲಿ ಓದುಬೇಕಾದುದ್ದೆಲ್ಲವೂ ಮುಗಿಯಿತು. ಶ್ರಮಪಟ್ಟು ವ್ಯಾಸಂಗಮಾಡಿ ಮೊದಲನೆಯ ತರಗತಿಯಲ್ಲಿಯೇ ತೇರ್ಗಡೆ ಹೊಂದಿದೆನು. ಇನ್ನು ಅಲ್ಲಿಂದ ಹೊರಡಬೇಕಾಯಿತು. ನನಗೆ ಈ ಸ್ಕೂಲಿನಲ್ಲಿ ಆದ ಮಹಾಪ್ರಯೋಜನಗಳಲ್ಲಿ ಎರಡು ಮುಖ್ಯವಾದವುಗಳು, ಅವುಗಳಲ್ಲಿ ಮೊದಲನೆಯದು ಅಸಾಧಾರಣ

ವಾದ ಗುಣಗಣಗಳಿಂದ ತುಂಬಿದ ಜನರಲ್ ಆರಂಸ್ಟ್ರಾಂಗರವರ ಪರಿಚಯು. ಎರಡನೆಯದು ನನ್ನ ಅನೇಕ ಅಭಿಪ್ರಾಯುಗಳಲ್ಲಿ ಬದಲಾವಣೆ. ನಾನು ಹ್ಯಾಂಪ್ಟನ್ನಿಗೆ ಹೋಗುವುದಕ್ಕೆ ಮೊದಲು ವಿದ್ಯೆಯನ್ನು ಕಲಿತರೆ ಕೆಲಸ ಕಾರ್ಯಗಳೊಂದನ್ನೂ ಮಾಡದೆ ನಿರಾತಂಕವಾಗಿಯೂ ನಿಶ್ಚಿಂತೆಯಾಗಿಯೂ ಕಾಲವನ್ನು ಕಳೆಯಬಹುದೆಂದು ನಮ್ಮವರೆಲ್ಲರೂ ತಿಳಿದುಕೊಂಡಿದ್ದರು. ನಾನು ಸ್ಕೂಲಿಗೆ ಸೇರಿದ ಮೇಲೆ ನನಗೆ ಈ ಅಭಿಪ್ರಾಯುವು ಹೋಯಿತು. ದುಡಿಯುವುದೆಂದರೆ ಅವಮಾನವಿಲ್ಲದಿರುವುದು ಇರಲಿ. ನನಗೆ ಆದರ ಮೇಲೆ ತುಂಬಾ ಆಸೆ ಹುಟ್ಟಿತು. ಈ ಆಸೆಯು ಸಂಪಾದನೆ ಮಾಡಬಹುದೆಂಬ ಯೋಚನೆಯಿಂದ ಮಾತ್ರವೇ ಹುಟ್ಟಿದುದಲ್ಲ. ಯಾವುದಾದರೂ ಒಂದು ವಿಧವಾದ ಕೈಗಾರಿಯನ್ನಾಗಲೀ, ಕಸಬನ್ನಾಗಲೀ ಕಲಿತರೆ ಎಲ್ಲಿ ಹೋದರೂ ಸ್ವತಂತ್ರವಾಗಿ ಜೀವನ ಮಾಡಬಹುದು. ಮನಸ್ಸಿಗೆ ಒಂದು ವಿಧವಾದ ಧೈರ್ಯವುಂಟಾಗುವುದು. ಬುದ್ಧಿ, ಕೌಶಲ್ಯ ಹೆಚ್ಚುವುದು. ಈ ಸ್ಕೂಲಿನಲ್ಲಿ ನನಗೆ ಪರೋಪಕಾರವೆಂದರೇನು ಆದರ ಗುಣವು ಎಷ್ಟರಮಟ್ಟಿನದು ಎಂಬುದೂ ಗೊತ್ತಾಯಿತು. ಇತರರಿಗಾಗಿಯೇ ಯಾವಾಗಲೂ ದುಡಿಯುತ್ತಿದ್ದರೆ ನಮಗೆಲ್ಲಿಯ ಸುಖವೆಂದು ಕೇಳಬಹುದು. ಇದು ತಪ್ಪಾದ ಅಭಿಪ್ರಾಯುವು. ಮತ್ತೊಬ್ಬರಿಗೆ ಸಹಾಯ ಮಾಡಿದರೆ, ಅವರು ಸುಖಪಟ್ಟಷ್ಟೂ ಸಹಾಯಮಾಡಿದವನಿಗೂ ಸುಖವುಂಟು. ಅದನೇ ನಿಜವಾದ ಸುಖ.

ಮಾಲ್ಡನ್ ಪಟ್ಟಣದಲ್ಲಿ ಉಪಾಧ್ಯಾಯತನ.—ಮಾಲ್ಡನ್ ಪಟ್ಟಣಕ್ಕೆ ನಾನು ಬಂದೊಡನೆಯೇ ಅಲ್ಲಿ ನಮ್ಮ ಜನರಿಗಾಗಿ ಏರ್ಪಟ್ಟಿದ್ದ ಸ್ಕೂಲಿನಲ್ಲಿ ನಾನು ಉಪಾಧ್ಯಾಯನಾಗಬೇಕೆಂದು ಎಲ್ಲರೂ ಅಭಿಪ್ರಾಯುಪಟ್ಟು ನನ್ನನ್ನು ಚುನಾಯಿಸಿದರು. ನಮ್ಮವರನ್ನು ಉತ್ತಮಸ್ಥಿತಿಗೆ ತರುವುದಕ್ಕೆ ಈಗ ಅವಕಾಶವು ದೊರೆಯಿತೆಂದು ನಾನು ತಿಳಿದುಕೊಂಡೆನು. ಇದಕ್ಕಾಗಿ ನಿತ್ಯವೂ ಸಾಮಾನ್ಯವಾಗಿ ಬೆಳಗ್ಗೆ ಎಂಟು ಗಂಟೆಯಿಂದ ರಾತ್ರಿ ಹತ್ತುಗಂಟೆಯುವರೆಗೂ ಕೆಲಸಮಾಡುಮಾಡುತಿದ್ದೆನು. ಮೊದಲಿನಿಂದಲೂ ನಮ್ಮವರಿಗೆ ಬರಿಯ ಪುಸ್ತಕದ ಓದು ಅಷ್ಟು ಪ್ರಯೋಜನಕಾರಿಯಾಗುವುದಿಲ್ಲವೆಂದು ನನಗೆ ದೃಢವಾದ ನಂಬಿಕೆ ಇತ್ತು. ಇದಕ್ಕಾಗಿ ನಾನು ಹುಡುಗರಿಗೆ ಪಾಠ ಹೇಳಿಕೊಡುವುದರ ಜತೆಗೆ, ಮೈಕೈಗಳನ್ನೂ, ಬಟ್ಟೆಗಳನ್ನೂ ಚೊಕ್ಕಟವಾಗಿ ಇಟ್ಟುಕೊಂಡಿರುವುದು, ನೋಡುವುದಕ್ಕೆ ಲಕ್ಷಣವಾಗಿರುವಂತೆ ಉಡಿಗೆಗಳನ್ನು

ಹಾಕಿಕೊಂಡಿರುವುದು, ಹಲ್ಲುಗಳನ್ನು ನಿತ್ಯವೂ ಬೆಳಗ್ಗೆ ಉಜ್ಜಿಕೊಂಡು ತಪ್ಪದೆ ಸ್ನಾನ ಮಾಡುವುದು, ಇವೇ ಮುಂತಾದವುಗಳನ್ನೂ ಹೇಳಿಕೊಡುತ್ತಾ ಬಂದೆನು.

ಪಾಠಶಾಲೆಯ ಉತ್ತಮಸ್ಥಿತಿ.—ದಿನದಿನಕ್ಕೆ ಹುಡುಗರು ಹೆಚ್ಚಾದರು. ದೊಡ್ಡವರಲ್ಲಿಯೂ ಕೆಲವರು ಹಗಲೆಲ್ಲಾ ತಮಗೆ ಕೆಲಸದಲ್ಲೇ ಕಳೆದು ಹೋಗುವುದೆಂಬದಾಗಿಯೂ, ಹೇಗಾದರೂ ಮಾಡಿ ನಾಲ್ಕಕ್ಷರಗಳನ್ನು ಕಲಿಯೋಣವೆಂದರೂ ಅವಕಾಶವಿಲ್ಲವೆಂಬದಾಗಿಯೂ ಬಹಳವಾಗಿ ಹೇಳುತಿದ್ದರು. ಅವರ ಶ್ರದ್ಧೆಯನ್ನು ನೋಡಿ ಇಂಥವರಿಗೆ ರಾತ್ರಿಯ ಸ್ಕೂಲನ್ನು ಏರ್ಪಡಿಸಿದೆನು. ಹಗಲು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ದೊಡ್ಡದಾಗಿರುತ್ತಿದ್ದಿತೋ, ರಾತ್ರಿ ಅದಕ್ಕೇನೂ ಕಡಿಮೆಯಾಗುತ್ತಿರಲಿಲ್ಲ. ಅವರಲ್ಲಿ ಕೆಲವರಿಗೆ ನಾಲ್ವತ್ತು ಐವತ್ತು ವರುಷ ವಯಸ್ಸಾಗಿದ್ದಿತು. ಇಂಥಾ ತಲೆ ನರೆತವರೂ, ಹಲ್ಲು ಬಿದ್ದವರೂ ಬಂದು ಓನಾಮಗಳನ್ನು ಕಲಿಯುತ್ತಿದ್ದುದನ್ನು ನೋಡಿದರೆ ಅವರಿಗೆ ವಿದ್ಯೆಯ ಮೇಲೆ ಎಷ್ಟು ಆಸೆ ಇದ್ದಿತೆಂಬುದು ಚನ್ನಾಗಿ ವ್ಯಕ್ತವಾಗುತಿದ್ದಿತು.

ಇತರರಿಗೆ ಸಹಾಯ.—ಆಗ ಶಕ್ತರೆಂದು ತೋರಿದ ಹುಡುಗರನ್ನು ಹ್ಯಾಂಪ್ಟನ್ ಸ್ಕೂಲಿಗೆ ಕಳುಹಿಸಬೇಕೆಂದು ಅವರಿಗೆ ಮನೆಯಲ್ಲಿ ಪಾಠ ಹೇಳಿಕೊಡುತ್ತಿದ್ದೆನು. ನನಗೆ ಬರುತಿದ್ದುದರಲ್ಲಿ ಯಾರು ಏನನ್ನು ಯಾವಾಗ ಕೇಳಿದರೂ ಅದನ್ನು ಹೇಳಿಕೊಡುವುದಕ್ಕೆ ಹಿಂಜರಿಯುತ್ತಿರಲಿಲ್ಲ. ಮತ್ತೊಬ್ಬರಿಗೆ ಸಹಾಯ ಮಾಡುವ ಶಕ್ತಿಯೂ, ಸಮಯವೂ ದೊರೆಕಿತಲ್ಲಾ ಎಂಬುದೊಂದೇ ನನಗೆ ದೊಡ್ಡ ಸಂತೋಷವಾಗಿದ್ದಿತು. ಇದೆಲ್ಲಕ್ಕೂ ಸರ್ಕಾರದವರು ಕೊಡುತ್ತಿದ್ದ ಸಂಬಳವನ್ನು ಬಿಟ್ಟರೆ ನನಗೆ ಮತ್ತೆ ಯಾವ ವಿಧವಾದ ಪ್ರತಿಫಲವೂ ದೊರೆಯುತ್ತಿರಲಿಲ್ಲ.

ಅಣ್ಣತಮ್ಮಂದರಿಗೆ ಸಹಾಯ.—ನಾನು ಹ್ಯಾಂಪ್ಟನ್‌ನಲ್ಲಿ ಓದುತಿದ್ದಾಗ ನಮ್ಮ ಅಣ್ಣನು ನನಗೆ ಸಹಾಯಮಾಡುತ್ತಿದ್ದನೆಂದು ಹಿಂದೆಯೇ ತಿಳಿಸಿದ್ದೆನಷ್ಟೆ. ಅವನು ನನಗೋಸ್ಕರವೇ ತನ್ನ ವಿದ್ಯಾಭ್ಯಾಸ ಹೋದರೂ ಹೋಗಲೆಂದು ಹಗಲೂ ರಾತ್ರಿಯೂ ಕಲ್ಲಿದ್ದಲಿನ ಗಣಿಯಲ್ಲಿ ಕೆಲಸ ಮಾಡಿ ಸಿಕ್ಕಿದಷ್ಟು ಹಣವನ್ನು ಕಳುಹಿಸುತಿದ್ದನು. ಈಗ ನನ್ನ ಸರದಿ ಒದಗಿ ಬಂದಿತು. ನನ್ನ ಕೈಲಾದ ಸಹಾಯವನ್ನು ನಾನು ಮಾಡುವೆನೆಂದೂ ಹ್ಯಾಂಪ್ಟನ್‌ಗೆ ಹೋಗಿ ಓದಬೇಕೆಂದೂ ಅವನನ್ನು ಬಲವಂತಪಡಿಸಿದೆನು. ಅವನೂ ಅದೇ ಮೇರೆಗೆ ಹೋಗಿ ಅಲ್ಲಿ ಮೂರು ವರುಷವಿದ್ದು ಕಲಿಯಬೇಕಾದುದೆಲ್ಲ

ವನ್ನೂ ಕಲಿತುಕೊಂಡು ಬಂದನು. ಅವನು ನಮ್ಮ ಸ್ಕೂಲಿನಲ್ಲಿ ಕಸಬು ಕೈಗಾರಿಕೆಗಳ ಮೇಲ್ವಿಚಾರಣೆಗೆ ನಿಯಮಿಸಲ್ಪಟ್ಟನು. ನಮ್ಮಣ್ಣನು ನನ್ನೊಡನೆ ಕೆಲಸಮಾಡುವ ಹಾಗಾದ ಮೇಲೆ ನಾವಿಬ್ಬರೂ ಸೇರಿ ನಮ್ಮ ಸಾಕುತಮ್ಮನಾದ ಜೇಮ್ಸ್ ವಾಷಿಂಗ್ಟನ್ ಎಂಬುವನನ್ನು ಓದುವುದಕ್ಕೆ ಕಳುಹಿಸಿಕೊಟ್ಟೆವು. ಅವನೂ ಹೋಗಿ ಬಂದನು. ಹೀಗೆ ನಾವು ಮೂರು ಜನರೂ ಒಂದೇ ಮನಸ್ಸಿನಿಂದ ನಮ್ಮ ಜನರನ್ನು ಮೇಲಕ್ಕೆತ್ತಬೇಕೆಂದು ಬದ್ಧಕಂಕಣರಾಗಿ ಕೆಲಸ ಮಾಡುವುದಕ್ಕೆ ನಿಂತೆವು.

ಅಧ್ಯಾಯ ೪.

"ಕಪ್ಪು ಕೆಂಪು"

ವಾಷಿಂಗ್ಟನ್ ಸ್ಕೂಲಿಗೆ ಹೋದದ್ದು.—ಮಾಲ್ಡನ್ ಪಟ್ಟಣದ ನೀಗ್ರೊ ಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದ ಎರಡು ವರುಷಗಳಲ್ಲಿ ಎಷ್ಟೋ ಹುಡುಗರೂ,ಹುಡುಗಿಯರೂ ಓದಿ ಹ್ಯಾಂಪ್ಟನ್ ಸ್ಕೂಲಿಗೆ ಹೋದರು. ಆ ಮೇಲೆ ನಾನೂ ವಾಷಿಂಗ್ಟನ್ ಪಟ್ಟಣದ ಸ್ಕೂಲಿನಲ್ಲಿ ಓದಿ ಬರಬೇಕೆಂದು ಹೋಗಿ ಅಲ್ಲಿ ಎಂಟು ತಿಂಗಳಿದ್ದು ಬಂದೆನು. ಕಾಲವು ಸ್ವಲ್ಪವಾದರೂ ಇಲ್ಲಿ ತುಂಬಾ ಅನುಭವವೂ, ಅನೇಕ ದೊಡ್ಡ ಮನುಷ್ಯರ ಪರಿಚಯವೂ ಉಂಟಾದವು. ಈ ಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಯಾವ ಕಸಬು ಕೈಗಾರಿಕೆಗಳನ್ನೂ ಹೇಳಿಕೊಡುತ್ತಿರಲಿಲ್ಲ. ಹ್ಯಾಂಪ್ಟನ್ ಸ್ಕೂಲಿನಲ್ಲಿ ಅದೇ ಮುಖ್ಯವಾದುದರಿಂದ ಈ ಎರಡು ವಿಧವಾದ ವಿದ್ಯಾಭ್ಯಾಸಗಳನ್ನೂ ಹೋಲಿಸಿ ಅವುಗಳ ಪರಸ್ಪರ ಗುಣಾವಗುಣಗಳನ್ನು ನೋಡುವುದಕ್ಕೆ ಅನುಕೂಲವಾಯಿತು. ಇಲ್ಲಿ ಸ್ವಲ್ಪ ಹೆಚ್ಚು ಕಡಮೆ ಹುಡುಗರೆಲ್ಲರೂ ಹಣವಂತರಾಗಿದ್ದರು. ಒಳ್ಳೆಒಳ್ಳೆಯ ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದರು. ಇವೆಲ್ಲಕ್ಕೂ ಇವರಿಗೆ ಹಣವು ಹೊರಗಿನಿಂದ ಬರುತ್ತಿದ್ದಿತು. ಹ್ಯಾಂಪ್ಟನ್ ಸ್ಕೂಲಿನಲ್ಲಿ ಸಾಮಾನ್ಯವಾಗಿ ಎಲ್ಲಾ ಹುಡುಗರಿಗೂ ಯಾರಾದರೂ ಸ್ಕೂಲು ಫೀಜನ್ನು ಕೊಡುತ್ತಿದ್ದರು. ಮಿಕ್ಕಾದ ಖರ್ಚೆಲ್ಲವೂ ಆಯಾ ವಿದ್ಯಾರ್ಥಿಗಳ ತಲೆಯ ಮೇಲೆಯೇ ಬೀಳುತ್ತಿದ್ದಿತು. ಫೀಜಿನಲ್ಲಿ ಒಂದು ಭಾಗಕ್ಕೋಸ್ಕರ ಕೆಲಸ

ಮಾಡಿ ಮತ್ತೊಂದು ಭಾಗವನ್ನು ನಾವು ತಯಾರು ಮಾಡಿದ ಸಾಮಾನುಗಳನ್ನು ಮಾರಿ ಸಂಪಾದಿಸಿ ತೀರಿಸಬೇಕಾಗಿದ್ದಿತು. ಈ ಏರ್ಪಾಟಿನಿಂದ ಹುಡುಗರ ಗುಣ ಶೀಲ ಸ್ವಭಾವಾದಿಗಳಲ್ಲಿ ಎರಡು ಕಡೆಗಳಲ್ಲಿಯೂ ಎಷ್ಟೋ ವ್ಯತ್ಯಾಸವು ಕಾಣುತಿದ್ದಿತು. ವಾಷಿಂಗ್ಟನ್ ಸ್ಕೂಲಿನ ಹುಡುಗರಿಗೆ ಗ್ರೀಕ್, ಲ್ಯಾಟಿನ್, ಮುಂತಾದ ಭಾಷೆಗಳು ಹೆಚ್ಚಾಗಿ ಬರುತ್ತಿದ್ದುದು ನಿಜ. ಆದರೆ, ಅವರಿಗೆ ಪ್ರಪಂಚದ ಅನುಭವವೇ ಇರುತ್ತಿರಲಿಲ್ಲ. ನಾಲ್ಕಾರು ವರ್ಷಗಳು ಸುಖವಾಗಿ ಮೈ ಬೆಳೆಸಿಕೊಂಡು ದೊಡ್ಡ ಪಟ್ಟಣದಲ್ಲಿಯೇ ವಾಸಮಾಡುವುದರಿಂದ ಅವರಿಗೆ ಮತ್ತೆ ಹಳ್ಳಿಗಳಿಗೆ ಬಂದು ಕಷ್ಟಪಟ್ಟು ಕೆಲಸ ಮಾಡಿ ಇತರರಿಗೆ ಸಹಾಯ ಮಾಡುವುದಕ್ಕೆ ಮನಸ್ಸು ಬರುತ್ತಿರಲಿಲ್ಲ. ಇವರಿಗೆ ಯಾವುದಾದರೂ ಸರ್ಕಾರದ ನೌಕರಿಯ ಮೇಲೆ ಗಮನವಿರುವುದೇ ಹೊರತು, ಎಲ್ಲಿದ್ದರೂ ಹೇಗಾದರೂ ಜೀವನ ಮಾಡಬಲ್ಲೆನೆಂಬ ಧೈರ್ಯವಿರುವುದಿಲ್ಲ. ಹ್ಯಾಂಪ್ಟನ್ ಸ್ಕೂಲಿನಲ್ಲಿದ್ದವರು ಶ್ರಮ ಪಡುತ್ತಿದ್ದರೆಂಬುದೂ ನಿಜ. ಆದರೆ ಅವರಿಗೆ ಅದರಿಂದ ಎಷ್ಟೋ ವಿಚಾರಗಳು ತಿಳಿಯ ಬರುತಿದ್ದವು. ಅವರು ಪಡುತ್ತಿದ್ದ ಒಂದೊಂದು ಕಷ್ಟವೂ ಮುಂದೆ ಶತಗುಣಿತವಾದ ಸುಖವನ್ನು ಕಲ್ಪಿಸಿ ಕೊಡಬಲ್ಲದುದಾಗಿದ್ದಿತು.

ಲಾಭ—ಇದೇ ಕಾಲದಲ್ಲಿ ನನ್ನ ಹೆಸರು ಮುಂದಕ್ಕೆ ಬರಲು ಸ್ವಲ್ಪ ಕಾರಣ ಸಿಕ್ಕಿತು. ಪಶ್ಚಿಮ ವರ್ಜಿನಿಯ ದೇಶದ ಹಳೆಯ ರಾಜಧಾನಿಯನ್ನು ಬಿಟ್ಟು ಅನುಕೂಲವಾದ ಯಾವುದಾದರೂ ಬೇರೊಂದು ಪಟ್ಟಣವನ್ನು ರಾಜಧಾನಿಯಾಗಿ ಮಾಡಬೇಕಾಗಿದ್ದಿತು. ಇದಕ್ಕಾಗಿ ಸರ್ಕಾರದವರು ಮೂರು ಪಟ್ಟಣಗಳನ್ನು ಆರಿಸಿ ಅದರಲ್ಲಿ ಯಾವುದು ಆಗಬೇಕೆಂದು ಜನಗಳ ಅಭಿಪ್ರಾಯವನ್ನು ಕೇಳಿದರು. ಯಾವ ಪಟ್ಟಣವನ್ನು ಹೆಚ್ಚು ಜನರು ಅಪೇಕ್ಷಿಸುವರೋ ಅದೇ ರಾಜಧಾನಿಯಾಗಬೇಕಾಗಿದ್ದಿತು. ಮಾಲ್ಡನ್ ಪಟ್ಟಣದ ಹತ್ತಿರದಲ್ಲಿಯೇ ಇದ್ದ "ಚಾರ್ಲ್‌ಸ್ಟನ್" ಪಟ್ಟಣದವರು ಸಭೆ ಸೇರಿಸಿ ಜನಗಳು ಚಾರ್ಲ್‌ಸ್ಟನ್ ಪಟ್ಟಣದ ಪರವಾಗಿ ಹೇಳುವಂತೆ ಉಪನ್ಯಾಸ ಮಾಡಬೇಕೆಂದು ನನ್ನನ್ನು ಕೇಳಿದರು. ಈ ಕೆಲಸವನ್ನು ಒಪ್ಪಿ ಊರಿಂದೂರಿಗೆ ತಿರುಗುತ್ತಾ ಮೂರು ತಿಂಗಳನ್ನು ಕಳೆದೆನು. ಆಗ ಅಲ್ಲಲ್ಲಿ ಕೊಟ್ಟ ಉಪನ್ಯಾಸಗಳನ್ನು ಕೇಳಿ ನಮ್ಮವರು ಕೆಲವರು ನಾನು ಸರ್ಕಾರದ ಕೆಲಸಕ್ಕೆ ಸೇರಿದರೆ ಬಲುಬೇಗ ಮುಂದಕ್ಕೆ ಬರಬಹುದೆಂಬದಾಗಿಯೂ, ಅದಕ್ಕಾಗಿ ನಾನು ಹಾಗೆ

ಮಾಡುವುದು ಒಳ್ಳೆಯದೆಂಬದಾಗಿಯೂ ಹೇಳಿದರು. ಇಷ್ಟು ಹೊತ್ತಿಗೆ ಸರ್ಕಾರದ ವರಿಗೂ ನನ್ನ ವಿಷಯ ಸ್ವಲ್ಪ ತಿಳಿದು ಒಂದು ತಕ್ಕ ಹುದ್ದೆಯನ್ನು ಕೊಡಲು ಸಿದ್ಧರಾಗಿದ್ದರು. ನನಗೆ ಯಾವ ಕೆಲಸವನ್ನು ಕೊಟ್ಟರೂ ತೃಪ್ತಿಕರವಾಗಿ ಮಾಡಬಲ್ಲೆನೆಂಬ ಧೈರ್ಯವಿದ್ದಿತು. ಆದರೆ ಸರ್ಕಾರದ ನೌಕರನಾಗುವುದರಿಂದ ನನ್ನ ಸ್ವಂತ ಪುರೋಭಿವೃದ್ಧಿಯನ್ನು ನೋಡಿಕೊಂಡ ಹಾಗಾಗುತ್ತಿತ್ತೇ ಹೊರತು, ಅದರಿಂದ ನಮ್ಮ ಜನರಿಗೆ ಸ್ವಲ್ಪ ಪ್ರಯೋಜನವೂ ಆಗುವುದಾಗಿ ತೋರಲಿಲ್ಲ.

ಪುರಸ್ಕಾರ.—ಇದಾದ ಸ್ವಲ್ಪ ಕಾಲಕ್ಕೆ ಜನರಲ್ ಆರಂಸ್ಟ್ರಾಂಗರವರಿಂದ ಒಂದು ಕಾಗದವು ಬಂದಿತು. ಅದರಲ್ಲಿ ಹ್ಯಾಂಪ್ಟನ್ ಸ್ಕೂಲು ಆ ವರ್ಷ ಆರಂಭವಾದಾಗ ನಾನು ಒಂದು ಉಪನ್ಯಾಸವನ್ನು ಕೊಡಬೇಕೆಂದು ಬರೆದಿದ್ದರು. ನನಗೆ ಇದಕ್ಕಿಂತಲೂ ಹೆಚ್ಚು ಗೌರವಕರವಾದ ಕೆಲಸ ಬೇಕಾಗಿರಲಿಲ್ಲ. ಆದುದರಿಂದ ವಿಶೇಷವಾಗಿ ಶ್ರಮವನ್ನು ತೆಗೆದುಕೊಂಡು ಒಂದು ಉಪನ್ಯಾಸವನ್ನು ಸಿದ್ಧಪಡಿಕೊಂಡೆನು. ಹ್ಯಾಂಪ್ಟನ್‌ಗೆ ಹೋಗುವಾಗ ನಾನು ಅಲ್ಲಿಗೆ ವಿದ್ಯಾರ್ಥಿಯಾಗಿ ಯಾವ ಯಾವ ಊರಿನ ಮೇಲೆ ಹೋದೆನೋ ಈಗಲೂ ಅಲ್ಲಿಯೇ ಹೋದೆನು. ಆದರೆ ಅಲ್ಲೆಲ್ಲಾ ರೈಲು ರಸ್ತೆಗಳನ್ನು ಹಾಕಿದ್ದರು. ನಾನು ಉದ್ದಕ್ಕೂ ರೈಲಿನಲ್ಲಿಯೇ ಪ್ರಯಾಣಮಾಡುತ್ತಾ "ಮನುಷ್ಯನಿಗೆ ಬಲವಾದ ಆಸೆ ಇದ್ದು ಅದಕ್ಕೋಸ್ಕರ ನಿಜವಾಗಿ ಶ್ರಮಪಡುತ್ತಿದ್ದರೆ ಐದಾರು ವರ್ಷಗಳಲ್ಲಿಯೇ ಎಷ್ಟು ಮುಂದಕ್ಕೆ ಬರಬಹುದು" ಎಂದುಕೊಂಡೆನು. ಹ್ಯಾಂಪ್ಟನ್‌ಗೆ ಹೋಗಿ ಇಳಿದ ಕೂಡಲೆ ಅಲ್ಲಿನ ಉಪಾಧ್ಯಾಯರೂ ವಿದ್ಯಾರ್ಥಿಗಳೂ ನನ್ನನ್ನು ಬಹು ವಿಶ್ವಾಸದಿಂದ ಕಂಡು ಆದರಣೆ ಮಾಡಿದರು. ನಾನು ಅಲ್ಲಿಂದ ಹೋದ ಮೇಲೆ ಆ ಸ್ಕೂಲು ದಿನದಿನಕ್ಕೆ ಅಭಿವೃದ್ಧಿ ಸ್ಥಿತಿಗೆ ಬಂದಿತು. ಅಲ್ಲಿ ಮಾಡುತ್ತಿದ್ದ ಏರ್ಪಾಡುಗಳೂ, ಬದಲಾವಣೆಗಳೂ ಮತ್ತೆ ಯಾವ ಸ್ಕೂಲನ್ನೂ ನೋಡಿ ಮಾಡಿದವುಗಳಲ್ಲ. ಕಾಲ ದೇಶ ವರ್ತಮಾನಗಳನ್ನು ನೋಡಿಕೊಂಡು ನಮ್ಮ ಜನರಿಗೆ ಯಾವುದು ಲಾಭಕರವೆಂದು ತೋರುತಿದ್ದಿತೋ ಅದನ್ನು ಮಾಡುತಿದ್ದರು. ಇವೆಲ್ಲಕ್ಕೂ ಜನರಲ್ ಆರಂಸ್ಟ್ರಾಂಗರವರೇ ಮೂಲಕಾರಣರು. ಅವರ ಬುದ್ಧಿಕೌಶಲ್ಯದಿಂದಲೇ ಎಲ್ಲವೂ ನಡೆಯುತಿದ್ದಿತು.

ಹ್ಯಾಂಪ್ಟನ್‌ಗೆ ಪುನಃ ಬಂದದ್ದು—ನನ್ನ ಉಪನ್ಯಾಸವನ್ನು ಕೇಳಿ ಎಲ್ಲರಿಗೂ ಮನಸ್ಸಿಗೆ ಹರ್ಷವಾದಂತೆ ತೋರಿತು. ಅಲ್ಲಿಂದ ನಮ್ಮೂರಿಗೆ ಹಿಂತಿರುಗಿ ಬಂದು

ಮತ್ತೆ ನನ್ನ ಕೆಲಸವನ್ನು ಮೊದಲು ಮಾಡಿದೊಡನೆಯೇ ಮತ್ತೊಂದು ಕಾಗದವು ಬಂದಿತು. ಆರಂಸ್ಟ್ರಾಂಗರವರು ನಾನು ಮತ್ತೆ ಹ್ಯಾಂಪ್ಟನ್ ಸ್ಕೂಲಿಗೆ ಬಂದು ಉಪಾಧ್ಯಾಯನಾಗಿ ಕೆಲವು ಪಾಠಗಳನ್ನು ಹೇಳಬೇಕೆಂತಲೂ, ವಿದ್ಯಾರ್ಥಿಯಾಗಿ ಇನ್ನೂ ಸ್ವಲ್ಪ ಓದಬೇಕೆಂತಲೂ ಬರೆದಿದ್ದರು. ಮಾಲ್ಡನ್ ಪಟ್ಟಣದಲ್ಲಿದ್ದಾಗ ನಾನು ಕೆಲವು ಹುಡುಗರನ್ನು ಹ್ಯಾಂಪ್ಟನ್ ಸ್ಕೂಲಿಗೆ ಕಳುಹಿಸುವುದಕ್ಕಾಗಿಯೇ ಹೆಚ್ಚು ಗಮನಕೊಟ್ಟು ತಯಾರು ಮಾಡುತ್ತಿದ್ದೆನೆಂದು ಹೇಳಿದ್ದೆನಷ್ಟೆ. ಈ ಹುಡುಗರು ಅಲ್ಲಿಗೆ ಹೋದ ಕೂಡಲೇ ಬಹಳ ಬುದ್ಧಿವಂತರಾಗಿ, ಚಟುವಟಿಕೆಯಿಂದ ಚೆನ್ನಾಗಿ ಕೆಲಸಮಾಡಿದರು. ಇದನ್ನು ನೋಡಿ ಆರಂಸ್ಟ್ರಾಂಗರವರು ನನ್ನನ್ನು ಕರೆಯಿಸಿಕೊಂಡರೆಂದು ಆಮೇಲೆ ತಿಳಿಯಬಂದಿತು.

ಕೆಂಪು ಜನಗಳ ಸ್ವಭಾವ.—ಆರಂಸ್ಟ್ರಾಂಗರವರು ಕಪ್ಪು ಜನಗಳನ್ನು ವಿದ್ಯೆ ಕಲಿಸಿ ಮುಂದಕ್ಕೆ ತಂದಂತೆ ಕೆಂಪು ಜನಗಳನ್ನೂ ಏಕೆ ತರಬಾರದೆಂದು ಯೋಚಿಸಿದರು. ಈ ಕೆಂಪು ಜನಗಳಿಗೆ "ಕೆಂಪು ಇಂಡಿಯನ್ ಜನರು" (Red Indians) ಎಂದು ಹೆಸರು. ಇವರು ಅಮೆರಿಕದ ಪೂರ್ವನಿವಾಸಿಗಳು. ಇವರು ಒರಟುತನದಲ್ಲಿಯೂ, ಸ್ವಭಾವದಲ್ಲಿಯೂ, ತಿಳಿವಳಿಕೆಯಲ್ಲಿಯೂ ಪಶುಗಳಿಗಿಂತಲೂ ಉತ್ತಮರಾಗಿರಲಿಲ್ಲ. ಇಂಥವರಿಗೆ ವಿದ್ಯೆ ಕಲಿಸಿ ಅವರನ್ನು ಉತ್ತಮ ಸ್ಥಿತಿಗೆ ತರಬಹುದೆಂದು ಯಾರೂ ಸ್ವಪ್ನದಲ್ಲಿಯೂ ನಂಬಿರಲಿಲ್ಲ. ಆದರೂ ಆರಂಸ್ಟ್ರಾಂಗರವರು ಈ ಪ್ರಯತ್ನ ಮಾಡಬೇಕೆಂದು ನಿಶ್ಚಯಿಸಿದರು. ಇದಕ್ಕಾಗಿ ಸುಮಾರು ನೂರು ಜನ ಕೆಂಪು ಜನರನ್ನು ಹಿಡಿದುಕೊಂಡು ಬಂದು ಅವರನ್ನು ನನ್ನ ವಶಕ್ಕೆ ಕೊಟ್ಟು, ಅವರ ಮೇಲ್ವಿಚಾರಣೆಯನ್ನು ಮಾಡಬೇಕೆಂದು ಹೇಳಿದರು. ನಾನೂ ಅವರ ಜತೆಯಲ್ಲಿಯೇ ಇದ್ದುಕೊಂಡು ಅವರ ಊಟ, ಉಪಚಾರ ಮುಂತಾದವುಗಳನ್ನು ನೋಡಿಕೊಂಡಿರಬೇಕಾಗಿದ್ದಿತು. ಇದ್ದ ನನಗೆ ತಕ್ಕ ಕೆಲಸವೇ ಸರಿ. ಆದರೆ ನಾನು ಇದ್ದ ಸ್ಕೂಲನ್ನು ಅರ್ಧದಲ್ಲಿ ಬಿಟ್ಟು ಹೋಗಲು ಬಹಳವಾಗಿ ಹಿಂತೆಗೆದೆನು. ಆದರೆ ಮಾಡುವುದೇನು? ಆರಂಸ್ಟ್ರಾಂಗರವರಿಗೆ ಪ್ರತಿ ಹೇಳುವುದು ಹೇಗೆ?

ಕೆಂಪು ಜನರ ಶಿಕ್ಷಣ.—ಆದುದರಿಂದ ಹ್ಯಾಂಪ್ಟನ್ನಿಗೆ ಹೋಗಲೇ ಹೋಗಬೇಕಾಯಿತು. ನನ್ನ ವಶದಲ್ಲಿ ಎಪ್ಪತ್ತೈದು ಕೆಂಪು ಇಂಡಿಯನರು ಇದ್ದರು. ಇವರ ಜತೆಯಲ್ಲಿಯೇ ನಾನು ಸದಾ ಇರುತ್ತಿದ್ದೆನು. ಮೊದಲು ಅಲ್ಲಿ ಇದ್ದ ಸ್ಥಿತಿಗತಿ

ಗಳನ್ನು ನೋಡಿ ನಾನು ಕೈಗೊಂಡ ಕೆಲಸವನ್ನು ನಿಜವಾಗಿ ಮಾಡಬಲ್ಲೆನೇ ಎಂದು ಸಂದೇಹ ಬಂದಿತು. ಈ ಕೆಂಪು ಜನರು ಬಿಳಿಯ ಜನರನ್ನೇ ತುಚ್ಛವಾಗಿ ಎಣಿಸುತ್ತಿದ್ದರು. ಇನ್ನು ಕರಿಯ ಜನರನ್ನು ಕೇಳಬೇಕೇ ? ಸಾಲದುದಕ್ಕೆ ನಾವು ಗುಲಾಮರಾಗಿದ್ದವರು. ಕೆಲವರು ಕೆಂಪು ಜನರ ಹತ್ತಿರದಲ್ಲಿಯೇ ಇದ್ದೆವು. ಇಂಥವರನ್ನು ತುಚ್ಛವಾಗಿ ಕಾಣುತ್ತಿದ್ದರೆಂದರೆ ಆಶ್ಚರ್ಯವೇನು ! ಇದಲ್ಲದೆ ಈ ಕೆಂಪು ಜನರಿಗೆ ಓದುಬರಹವನ್ನೂ, ನಾಗರಿಕತೆಯನ್ನೂ ಹೇಳಿಕೊಡುವುದು ಮರಳಿನಲ್ಲಿ ಎಣ್ಣೆ ತೆಗೆದ ಹಾಗೆಂದು ಎಲ್ಲರಿಗೂ ಸಾಮಾನ್ಯವಾದ ಅಭಿಪ್ರಾಯವಿದ್ದಿತು. ಇದೆಲ್ಲವನ್ನೂ ನೋಡಿ ನಾನು ಜಾಗರೂಕನಾಗಿಯೂ, ಒಂದೇ ಮನಸ್ಸಿನಿಂದಲೂ ಕೆಲಸ ಮಾಡುವುದಕ್ಕೆ ಮೊದಲು ಮಾಡಿದೆನು. ಸ್ವಲ್ಪ ಕಾಲದಲ್ಲಿಯೇ ಅವರಿಗೆ ನನ್ನಲ್ಲಿ ನಂಬಿಕೆಯೂ, ವಿಶ್ವಾಸವೂ, ಗೌರವವೂ ಉಂಟಾದವು. ಅವರು ಇತರರ ಹಾಗೆ ಮನುಷ್ಯಮಾತ್ರದವರಲ್ಲವೇ ? ಅವರನ್ನು ಯಾರು ವಿಶ್ವಾಸವಾಗಿ ಕಾಣುವರೋ ಅವರಿಗೆ ಪ್ರತಿಯಾಗಿ ವಿಶ್ವಾಸವನ್ನು ತೋರಿಸುವುದೂ, ಕಿರುಕುಳಗುಟ್ಟಿಸಿದವರನ್ನು ಪೀಡಿಸುವುದೂ ಸ್ವಭಾವವಲ್ಲವೇ ? ಅವರು ನನಗೆ ಯಾವಾಗಲೂ ಅಸಮಾಧಾನಕರವಾದ ಒಂದು ಕೆಲಸವನ್ನೂ ಮಾಡುತ್ತಿರಲಿಲ್ಲ. ನಾನು ಹೇಳಿದುದನ್ನು ಮೀರುತ್ತಲೂ ಇರಲಿಲ್ಲ. ಎರಡು ಮೂರು ವಿಷಯಗಳಲ್ಲಿ ಮಾತ್ರ ಅವರ ದಾರಿಗೇ ನಾನು ಹೋಗಬೇಕಾಯಿತು. ಉದ್ದವಾಗಿ ಬಿಟ್ಟುಕೊಂಡಿದ್ದ ತಮ್ಮ ಕೂದಲನ್ನು ಕತ್ತರಿಸುವುದು, ಕಂಬಳಿ ಹೊದ್ದುಕೊಳ್ಳುವುದನ್ನು ಬಿಡುವುದು, ಹೊಗೆಯಬತ್ತಿಯನ್ನು ಸೇದದಿರುವುದು, ಈ ಸುದ್ದಿಯೇ ಅವರಿಗಾಗುತ್ತಿರಲಿಲ್ಲ. ಆ ವಿಷಯಗಳಲ್ಲಿ ಅಸಮಾಧಾನಪಟ್ಟುಕೊಳ್ಳುತಿದ್ದರೇ ಹೊರತು, ತಮ್ಮ ಅಭ್ಯಾಸವನ್ನು ಬೇರೆ ಬಿಡುತ್ತಿರಲಿಲ್ಲ. ಅವರ ಈ ಅಭ್ಯಾಸಗಳಿಂದ ನಮಗೆ ಆಗುವ ತೊಂದರೆ ತಾನೆ ಏನು ? ಇವು ಸರಿಯೇ ? ಬಿಳಿಯ ಜನರಿಗೆ ಮಾತ್ರ ಇವುಗಳಿಂದಲೇ ಕೆಂಪು ಇಂಡಿಯರ್ನರು ಕಾಡು ಜನರೆಂಬದಾಗಿಯೂ, ನಾಗರಿಕತೆ ಇಲ್ಲದವರೆಂಬದಾಗಿಯೂ ಹೇಳಬಹುದೆ ? ಬಿಳಿಯ ಜನರು ತಮ್ಮನ್ನು ಬಿಟ್ಟು ಮತ್ತೆ ಯಾರನ್ನು ತಾನೇ ನಾಗರಿಕರೆಂದು ಹೇಳುತ್ತಾರೆ ? ಅವರು ತಮ್ಮ ಉಡುಪನ್ನೇ ಉಟ್ಟು, ತಾವು ತಿನ್ನುವ ಆಹಾರವನ್ನೇ ತಿಂದು, ತಾವು ಆಡುವ ಮಾತನ್ನೇ ಆಡುತ್ತ, ತಮ್ಮ ಆಚಾರದ ವ್ಯವಹಾರಗಳನ್ನೇ ಇಟ್ಟುಕೊಂಡು, ತಮ್ಮ ಮತವನ್ನೇ ಅವಲಂಬಿಸಿದರೂ ನಾಗರಿಕರೆಂದು ಎಂದಿಗೂ ಹೇಳುವುದಿಲ್ಲ. ನಾಗರಿಕತೆ ಇಲ್ಲದವರಿಗೆ ನಾಗರಿಕತೆ

ಯನ್ನು ಹೇಳಿಕೊಟ್ಟರಲ್ಲವೇ ನಮ್ಮ ನಾಗರಿಕತೆ ಗೊತ್ತಾಗುವುದು. ಕೀಳುಸ್ಥಿತಿಯಲ್ಲಿರುವವರನ್ನು ಮೇಲಕ್ಕೆ ತಂದರೆ ಅಲ್ಲವೇ ನಮ್ಮ ಉತ್ತಮ ಸ್ಥಿತಿಯು ಗೊತ್ತಾಗುವುದು. ನಾವು ಮತ್ತೊಬ್ಬರ ವಿಷಯದಲ್ಲಿ ಗೌರವದಿಂದಲೂ ಮರ್ಯಾದೆಯಿಂದಲೂ ನಡೆದುಕೊಂಡರೆ ಅಲ್ಲವೇ ನಮ್ಮ ದೊಡ್ಡತನವು ಗೊತ್ತಾಗುವುದು. ಒಂದು ಸಲ ಜಾರ್ಜ್ ವಾಷಿಂಗ್ಟನ್‌ರವರು ದಾರಿಯಲ್ಲಿ ಹೋಗುತ್ತಿದ್ದಾಗ ಒಬ್ಬ ನಿಗ್ರೋವು ತನ್ನ ಟೋಪಿಯನ್ನು ಎತ್ತಿ ಸಲಾಮು ಮಾಡಿದನಷ್ಟೆ. ಅದಕ್ಕೆ ಪ್ರತಿಯಾಗಿ ಅವರೂ ಮರ್ಯಾದೆ ಮಾಡಿದರು. ಇದು ಅವರ ಜತೆಯಲ್ಲಿದ್ದವರಿಗೆ ಸರಿಬೀಳಲಿಲ್ಲ. ಅದಕ್ಕೆ ವಾಷಿಂಗ್ಟನ್‌ರವರು "ಇವನು ಕೀಳುಜಾತಿಯವನೇನೋ ಅಹುದು. ಒಳ್ಳೆಯ ನಡತೆಯಲ್ಲಿಯೂ, ಮರ್ಯಾದೆಯಲ್ಲಿಯೂ ನಾವು ಅವನಿಗಿಂತ ಕಡೆಯಾಗಬಹುದೇ ?" ಎಂದು ಹೇಳಿದರು. ಅದೇ ದೊಡ್ಡ ಮನುಷ್ಯತನ. ಐಶ್ವರ್ಯವೂ, ವಂಶವೂ, ನಮ್ಮ ಚರ್ಮದ ಬಣ್ಣವೂ ಎಷ್ಟು ಮಾತ್ರಕ್ಕೂ ಹಿರಿಯತನವನ್ನಾಗಲಿ, ಕಿರಿಯತನವನ್ನಾಗಲಿ ಕೊಡಲಾರವು.

ಕಪ್ಪು ಜನರ ವಿದ್ಯಾಭ್ಯಾಸಕ್ಕೆ ಅನುಕೂಲ್ಯಕಲ್ಪನೆ.—ಈ ಹೊಸ ಕೆಲಸದಲ್ಲಿ ಒಂದು ವರ್ಷವಾಯಿತು. ಅಷ್ಟು ಹೊತ್ತಿಗೆ ಮತ್ತೊಂದು ವಿಶೇಷ ಸಂಗತಿಯು ನಡೆಯಿತು. ಅದನ್ನು ನೋಡಿದರೆ ದೈವವೇ ಮುಂದೆ ನಾನು ಟಸ್ಕೆಗಿಯಲ್ಲಿ ಕೆಲಸ ಮಾಡುವುದಕ್ಕೆ ದಾರಿ ತೋರಿಸಿಕೊಟ್ಟಂತೆ ತೋರಿತು. ಇದರಿಂದ ನಮ್ಮ ಜನರಲ್ಲಿ ಇನ್ನೂ ಕೆಲವರು ಅಭಿವೃದ್ಧಿಗೆ ಬರಲು ಕಾರಣವಾಯಿತು. ಕಪ್ಪು ಜನರನೇಕರಿಗೆ ವಿದ್ಯಾಭ್ಯಾಸದ ಮೇಲೆ ತುಂಬಾ ಆಸೆ ಇದ್ದಿತು. ಆದರೆ ಅವರಿಗೆ ತಮ್ಮ ಊಟಕ್ಕಾಗಲಿ, ಪುಸ್ತಕಗಳಿಗಾಗಲಿ ಒಂದು ಕಾಸನ್ನು ಕೊಡುವುದಕ್ಕೂ ಗತಿ ಇರಲಿಲ್ಲ. ಇಂಥವರ ಅನುಕೂಲಕ್ಕಾಗಿ ಆರಂಸ್ಟ್ರಾಂಗರವರು ಇನ್ನೊಂದು ಏರ್ಪಾಟನ್ನು ಮಾಡಿದರು. ರಾತ್ರಿಯ ಸ್ಕೂಲು ಒಂದು ಏರ್ಪಟ್ಟಿತು. ಹಗಲು ಹೊತ್ತು ಹತ್ತು ಗಂಟೆ ಯಾವುದಾದರೂ ಕೆಲಸಮಾಡಬೇಕು. ಇದರಿಂದ ಬಂದ ಸಂಪಾದನೆಯಲ್ಲಿ ಊಟದ ಖರ್ಚು ಕಳೆದು ಮಿಕ್ಕುದನ್ನು ಸ್ಕೂಲಿನಲ್ಲಿ ಕೂಡಿಸಿ ಇಡಬೇಕು. ಈ ರೀತಿಯಲ್ಲಿ ನಿಷ್ಕರ್ಷೆಮಾಡಿದರು. ಇದರಿಂದ ಜೀವನಕ್ಕೆ ದಾರಿಯಿಲ್ಲದೆ ಪೇಚಾಡುತ್ತಾ ನಿಜವಾಗಿ ವಿದ್ಯೆಯ ಮೇಲೆ ಆಸೆ ಇದ್ದವರಿಗೆ ಜೀವನವೂ ಆಯಿತು ; ಕೆಲಸ ಕಾರ್ಯಗಳ ಜತೆಯಲ್ಲಿ ವಿದ್ಯೆಯು ಬರುವುದಕ್ಕೂ ಅವಕಾಶವಾಯಿತು. ಹೀಗೆ ಎರಡು

ಮೂರು ವರ್ಷಗಳಾದ ಮೇಲೆ ಕೂಡಿಟ್ಟ ದುಡ್ಡು ಸಾಕೆಂದು ತೋರಿತು. ರಾತ್ರಿಯ ಸ್ಕೂಲನ್ನು ಬಿಟ್ಟು ಅವರು ಹಗಲಿನ ಸ್ಕೂಲಿಗೆ ಬರುವುದಕ್ಕೆ ಉಪಕ್ರಮಿಸಿದರು. ಆಮೇಲೆ ಇತರರಿಗೂ ಅವರಿಗೂ ಯಾವ ಭೇದವೂ ತೋರಲಿಲ್ಲ.

ಈ ರಾತ್ರಿಯ ಸ್ಕೂಲನ್ನು ನಾನೇ ನೋಡಿಕೊಳ್ಳಬೇಕೆಂದು ಆರಂಸ್ಟ್ರಾಂಗ್ ರವರು ಹೇಳಿದರು. ನಾನು ಬದಲು ಹೇಳಲಿಲ್ಲ. ಈ ಸ್ಕೂಲಿಗೆ ಪ್ರಾರಂಭದಲ್ಲಿ ಹೆಂಗಸರು, ಗಂಡಸರು, ಎಲ್ಲರೂ ಒಟ್ಟು ಹತ್ತು ಹನ್ನೆರಡು ಜನರು ಬಂದು ಸೇರಿದರು. ಹಗಲು ಹೊತ್ತು ಗಂಡಸರು ಮರಗೆಲಸ ಮಾಡುತ್ತಿದ್ದರು. ಹೆಂಗಸರು ಬಟ್ಟೆಗಳನ್ನು ಒಗೆಯುತ್ತಿದ್ದರು. ಈ ಕೆಲಸವು ಸುಲಭವಾಗಿರಲಿಲ್ಲ. ಆದರೂ ಹಗಲಾಗಲಿ, ರಾತ್ರಿಯಾಗಲಿ ಸರಿಯಾದ ವೇಳೆಯು ಬರುವವರೆಗೂ ಅವರು ಇದ ಕಡೆಯನ್ನು ಕದಲುತ್ತಿರಲಿಲ್ಲ. ಒಂದೊಂದು ದಿವಸ ಮಿಕ್ಕವರೆಲ್ಲರೂ ಮಲಗಿಕೊಂಡರೂ, ಇವರು ಓದುತ್ತಲೇ ಇರುತ್ತಿದ್ದರು. ಕೆಲವು ದಿವಸಗಳಲ್ಲಿಯೇ ವಿದ್ಯಾರ್ಥಿಗಳ ಸಂಖ್ಯೆಯು ಇಪ್ಪತ್ತಾಯಿತು. ಈಗ ಮುನ್ನೂರು ನಾನೂರರವರೆಗೆ ಇವರು ಇದ್ದಾರೆ. ಇವರಲ್ಲಿ ಅನೇಕರು ಅತ್ಯಂತ ಉಪಯುಕ್ತವಾದ ಉದ್ಯೋಗಗಳಲ್ಲಿದ್ದಾರೆ. ಅವರು ಹಿಂದೆ ವಹಿಸಿದ ಶ್ರದ್ಧೆಗೂ ಪಟ್ಟ ಶ್ರಮಕ್ಕೂ ಈಗ ಫಲವು ದೊರೆಯಿತು.

ಅಧ್ಯಾಯ ೫

ಟಸ್ಕೆಗಿಯ ಸ್ಕೂಲಿನ ವಿಚಾರ.—ಕೆಂಪು ಇಂಡಿಯನ್ ಜನರ ಜತೆಯಲ್ಲಿ ಕೆಲ ಮಾಡುತ್ತ ನನಗೆ ಇನ್ನೊಂದು ವರ್ಷ ಕಳೆಯಿತು. ಆಗ ನಾನು ಮಾಡುತ್ತಿದ್ದ ಕೆ ಸಕ್ಕೆ ನನ್ನ ಜೀವವನ್ನೇ ಧಾರೆ ಎರೆದೆನು. ಒಂದು ದಿವಸ ಸಾಯಂಕಾಲ ಆರಂಸ್ಟ್ರಾಂ ಗರವರು ಅಲಬಾಮಾ ಡಿಸ್ಟ್ರಿಕ್ಟಿನಿಂದ ಬಂದ ಒಂದು ಕಾಗದವನ್ನು ತೋರಿಸಿದರು. ಅದರಲ್ಲಿ ಒಬ್ಬ ದೊಡ್ಡ ಮನುಷ್ಯರು ಆ ಪ್ರಾಂತ್ಯಕ್ಕೆ ಸೇರಿದ "ಟಸ್ಕೆಗಿ" ಎಂ ಊರಿನಲ್ಲಿರುವ ನೀಗ್ರೋ ಜನರ ಸ್ಕೂಲಿಗೆ ತಕ್ಕ ಅಧ್ಯಕ್ಷರನ್ನು ಕಳುಹಿಸಿಕೊಡಬೇಕೆಂ ಕೇಳಿಕೊಂಡಿದ್ದರು. ಅವರು ಈ ಕೆಲಸಕ್ಕೆ ಕಪ್ಪು ಜನರಲ್ಲಿ ಯಾರೂ ಶಕ್ತರಾ ವರು ಇರಲಾರರೆಂದು ಮೊದಲೇ ನಿರ್ಧರಮಾಡಿಕೊಂಡು ಬಿಳಿಯ ಜನರಲ್ಲಿ ಯಾರನ್

ದರೂ ಕಳುಹಿಸಿಕೊಡಬೇಕೆಂದು ಬರೆದಿದ್ದರು. ಮಾರನೆಯ ದಿವಸ ಆರಂಸ್ಟ್ರಾಂಗರವರು ನನಗೆ ಆ ಕೆಲಸಕ್ಕೆ ಹೋಗಲು ಇಷ್ಟವುಂಟೇ ಎಂದು ಕೇಳಿದರು. ನಾನು ಹೋಗಿನೋಡುವೆನೆಂದು ಹೇಳಿದೆನು. ಕೂಡಲೆ ಬಿಳಿಯ ಜನರು ಯಾರೂ ಸಿಕ್ಕಲಿಲ್ಲವೆಂಬದಾಗಿಯೂ, ಕಪ್ಪು ಜನರು ಆಗಬಹುದೆಂದು ಹೇಳಿದರೆ ನನ್ನನ್ನು ಕಳುಹಿಸುವುದಾಗಿಯೂ ಆರಂಸ್ಟ್ರಾಂಗರವರು ಉತ್ತರವನ್ನು ಬರೆದು ಕಳುಹಿಸಿದರು. ತರುವಾಯ ಸುಮಾರು ಒಂದು ತಿಂಗಳು ಕಳೆದು ಹೋಯಿತು. ಮತ್ತೆ ಅದರ ಸುದ್ದಿಯೇ ಇರಲಿಲ್ಲ. ಕೊನೆಗೆ ಒಂದು ದಿವಸ ಸಾಯಂಕಾಲ ನಾವೆಲ್ಲರೂ ದೇವಸ್ಥಾನದಲ್ಲಿದ್ದಾಗ ಒಂದು ತಂತಿಯ ವರ್ತಮಾನವು ಬಂದಿತು. ಅದರಲ್ಲಿ 'ಬೂಕರ್ ಟಿ ವಾಷಿಂಗ್ಟನ್‌ರವರೇ ನಮಗೆ ಸಾಕು. ಅವರನ್ನು ಕೂಡಲೇ ಕಳುಹಿಕೊಡಿ' ಎಂದು ಬರೆದಿದ್ದಿತು. ಆರ್ಂಸ್ಟ್ರಾಂಗರವರು ಇದನ್ನು ಎಲ್ಲರೆದುರಿಗೂ ಗಟ್ಟಿಯಾಗಿ ಓದಿ ಹೇಳಿದರು.

ಟಿಸ್ಕೆಗಿ ಸ್ಕೂಲಿಗೆ ಪ್ರಯಾಣ.—ನಾನು ಟಿಸ್ಕೆಗಿಗೆ ಮೊದಲು ಹೋದಾಗ ಅಲ್ಲಿ ಸುಮಾರು ಎರಡು ಸಾವಿರ ಜನರಿದ್ದರು. ಅದರಲ್ಲಿ ಅರ್ಧಪಾಲಿಗಿಂತಲೂ ಸ್ವಲ್ಪ ಹೆಚ್ಚಾಗಿಯೇ ಕಪ್ಪು ಜನರಿದ್ದರು. ಅಲ್ಲಿಗೆ ಹೋಗುವುದಕ್ಕೆ ಮುಂಚೆ ಆ ಊರಿನಲ್ಲಿ ಸ್ಕೂಲಿಗೆ ಬೇಕಾದ ಕಟ್ಟಡವೂ, ಸಾಮಾನುಗಳೂ ಇರುವುವೆಂಬದಾಗಿಯೂ, ನಾನು ಹೋಗಿ ಪಾಠಹೇಳುವುದು ಮಾತ್ರವೇ ಉಳಿದಿರುವುದೆಂಬದಾಗಿಯೂ ತಿಳಿದುಕೊಂಡಿದ್ದೆನು. ಹೋಗಿ ನೋಡಿದಾಗ ಅವುಗಳಲ್ಲಿ ಒಂದೂ ಇರಲಿಲ್ಲ. ಆದರೆ ಇವೆಲ್ಲಕ್ಕೂ ಮೇಲಾಗಿ ಇದ್ದ ಮತ್ತೊಂದು ಅನುಕೂಲವಿದ್ದಿತು. ಅಲ್ಲಿ ನೂರಾರು ಜನರು ಯಾರಾದರೂ ವಿದ್ಯೆಯನ್ನು ಹೇಳಿಕೊಟ್ಟರೆ ಸಾಕೆಂದು ಕಾದಿದ್ದರು.

ಸರ್ಕಾರದ ಸಹಾಯ.—ನಾನು ಇಲ್ಲಿಗೆ ಬರುವುದಕ್ಕೆ ಹಿಂದಿನ ವರುಷ ಕೆಲವು ಕಪ್ಪು ಜನರು ನಾವು ಹ್ಯಾಂಪ್ಟನ್‌ನಲ್ಲಿ ನಡಿಸುತ್ತಿದ್ದ ಸ್ಕೂಲಿನ ವಿಚಾರವನ್ನು ಕೇಳಿ ಟಿಸ್ಕೆಗಿಯಲ್ಲಿಯೂ ಅಂಥ ಏರ್ಪಾಡನ್ನು ಮಾಡುವುದಕ್ಕೆ ಸಹಾಯಬೇಕೆಂದು ಸರ್ಕಾರದವರನ್ನು ಕೇಳಿದ್ದರು. ಅದಕ್ಕೆ ಅವರು ವರುಷಕ್ಕೆ ಸುಮಾರು ಆರು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿದ್ದರು. ಆದರೆ ಇದನ್ನು ಪಾಠಹೇಳುವ ಉಪಾಧ್ಯಾಯರ ಸಂಬಳಕ್ಕಾಗಿಯೇ ಖರ್ಚುಮಾಡಬೇಕೆಂಬ ಒಂದು ನಿರ್ಬಂಧ

ಏದ್ದಿತು. ಇನ್ನೂ ಓದುವ ಹುಡುಗರೂ ಗೊತ್ತಾಗಿರಲಿಲ್ಲ. ಪಾಠ ನಡೆಯುವುದಕ್ಕೆ ಸ್ವಲ್ಪ ಸ್ಥಳವೂ ಇರಲಿಲ್ಲ. ಆಗಲೇ ಉಪಾಧ್ಯಾಯರ ಸಂಬಳವು ಸಿದ್ಧವಾಗಿದ್ದಿತು.

ಪಾಠಶಾಲೆಗೆ ಕಟ್ಟಡ.—ಆದುದರಿಂದ ಸ್ಕೂಲನ್ನು ಪ್ರಾರಂಭಿಸುವುದಕ್ಕೆ ಯಾವುದಾದರೂ ಒಂದು ಸ್ಥಳವನ್ನು ಹುಡುಕುವುದು ಮೊದಲನೆಯ ಕೆಲಸವೆಂದು ನಿಶ್ಚಯಮಾಡಿಕೊಂಡು ಆ ಊರಲ್ಲೆಲ್ಲಾ ಹುಡುಕುವುದಕ್ಕೆ ಹೊರಟೆನು. ಇದ್ದದ್ದರಲ್ಲಿ ಅನುಕೂಲವಾಗಿದ್ದ ಒಂದು ಸ್ಥಳವು ಒಂದು ದೇವಸ್ಥಾನದ ಮಗ್ಗುಲಲ್ಲಿ ಇದ್ದಿತು. ಅದೂ ಒಂದು ಹಳೆಯ ಮನೆ. ನಾಲ್ಕು ಜನಗಳು ಹೆಚ್ಚಾಗಿ ಸೇರಿದರೆ ಒಂದೇ ಕಡೆ ನಿಂತುಕೊಳ್ಳುವುದಕ್ಕೂ ಅವಕಾಶವಿರಲಿಲ್ಲ. ಅಂಥಾ ಸಂದರ್ಭದಲ್ಲಿ ಆ ದೇವಸ್ಥಾನವನ್ನೇ ನನ್ನ ಕೆಲಸಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಏರ್ಪಾಟು ಮಾಡಿದೆನು. ಆ ಸಣ್ಣ ಮನೆಯೂ ಗಟ್ಟಿಯಾಗಿರಲಿಲ್ಲ. ಹೆಂಚು ಕೈಯ್ಯಾಡಿಸಿ ಬಹಳ ದಿನವಾಗಿದ್ದಿತು. ಅಲ್ಲಿಗೆ ಹೋದ ಒಂದೆರಡು ತಿಂಗಳುಗಳಲ್ಲಿ ಮಳೆಯು ಬಂದಿತು. ಎಲ್ಲೆಲ್ಲಿಯೂ ಸೋರುತಿದ್ದಿತು. ಒಂದೊಂದು ವೇಳೆ ಪಾಠ ನಿಂತುಹೋಗುವುದೆಂದು ಹುಡುಗರು ನನ್ನ ಮೇಲೆ ಒಂದು ಕೊಡೆಯನ್ನು ಹಿಡಿದುಕೊಂಡು ನಿಂತುಕೊಳ್ಳುತಿದ್ದರು. ಊಟಮಾಡುತ್ತಿದ್ದಾಗ ಮಳೆ ಬಂದರೆ ಪರಿಚಾರಕನೇ ಕೊಡೆಯನ್ನು ಹಿಡಿದುಕೊಂಡು ನಿಂತುಕೊಳ್ಳುತಿದ್ದನು. ನಾನು 1881ನೇ ಇಸವಿಯ ಜೂನ್ ತಿಂಗಳ ಮೊದಲಿನಲ್ಲಿ ಟಸ್ಕೆಗಿಗೆ ಹೋದೆನು. ಆ ತಿಂಗಳೆಲ್ಲವೂ ಸರಿಯಾದ ಸ್ಥಳವನ್ನು ಹವಣಿಸುವುದರಲ್ಲಿಯೇ ಸರಿಹೋಯಿತು. ಆಮೇಲೆ ಆ ಪ್ರಾಂತ್ಯದಲ್ಲೆಲ್ಲಾ ಸಂಚಾರಮಾಡಿ, ಜನರ ಸ್ಥಿತಿಗತಿಗಳನ್ನು ತಿಳಿದುಕೊಂಡು, ನಮ್ಮ ಸ್ಕೂಲಿನ ವಿಚಾರವನ್ನು ಚನ್ನಾಗಿ ತಿಳಿಯಪಡಿಸಿ ಸಾಧ್ಯವಾದಷ್ಟು ಹುಡುಗರನ್ನು ಕೂಡಿಹಾಕಬೇಕೆಂದು ಹೊರಟೆನು.

ಇತರ ಪಾಠಶಾಲೆಗಳ ಸ್ಥಿತಿ.—ಆ ಊರಿನ ಸುತ್ತುಮುತ್ತಲಿನ ಪ್ರದೇಶದಲ್ಲಿ ಅದುವರೆಗೆ ಸರ್ಕಾರದವರು ಸ್ಕೂಲುಗಳನ್ನು ಕಟ್ಟಿಸಿರಲಿಲ್ಲ. ಸ್ಕೂಲುಗಳು ದೇವಸ್ಥಾನಗಳಲ್ಲಿಯೂ, ಜನರು ಬಿಟ್ಟುಕೊಟ್ಟ ಗುಡಿಸಲುಗಳಲ್ಲಿಯೂ ನಡೆಯುತ್ತಿದ್ದವು. ಅಲ್ಲಿ ಪಾಠಹೇಳುವಂಥಾ ಉಪಾಧ್ಯಾಯರು ಆ ಕೆಲಸಕ್ಕೆ ಯಾವ ವಿಧದಲ್ಲಿಯೂ ಯೋಗ್ಯತೆ ಉಳ್ಳವರಾಗಿರಲಿಲ್ಲ. ಇದಕ್ಕೆ ತಕ್ಕ ಹಾಗೆ ಪುಸ್ತಕಗಳೂ, ಬೋಧನಾಸಾಮಗ್ರಿಗಳೂ ಇರಲಿಲ್ಲ. ಎಲ್ಲೋ ಒಂದೊಂದು ಕಡೆಯಲ್ಲಿ ಮಾತ್ರ ಒಂದು ಕರಿಯ ಹಲಿಗೆ (ಬೋರ್ಡು) ಇರುತಿದ್ದಿತು. ಮಿಕ್ಕ ಕಡೆಗಳಲ್ಲಿ ಅದೂ ಇರುತ್ತಿರಲಿಲ್ಲ.

ಒಂದು ದಿವಸ ಇಂಥಾ ಒಂದು ಮಠಕ್ಕೆ ಹೋಗಿ ಬಗ್ಗಿನೋಡಿದೆನು. ಅಲ್ಲಿ ಐದು ಜನ ಹುಡುಗರು ಒಂದು ಪುಸ್ತಕವನ್ನಿಟ್ಟುಕೊಂಡು ಓದುತ್ತಿದ್ದರು. ಮುಂದೆ ಇಬ್ಬರು ಪುಸ್ತಕವನ್ನು ಒಂದೊಂದು ಕಡೆ ಹಿಡಿದುಕೊಂಡಿದ್ದರು. ಹಿಂದೆ ಅವರ ಭುಜದಮೇಲೆ ಇನ್ನಿಬ್ಬರು ನೋಡುತ ಕುಳಿತುಕೊಂಡಿದ್ದರು. ಈ ನಾಲ್ಕು ಜನಗಳ ಮಧ್ಯೆ ಇಣಿಕಿ ನೋಡುತ್ತ ಮತ್ತೊಬ್ಬ ಹುಡುಗನು ಎಲ್ಲರಿಗೂ ಹಿಂದೆ ಕುಳಿತು ಕೊಂಡಿದ್ದನು.

ಅಲ್ಲಿನ ಜನರ ಸ್ಥಿತಿ.—ಅಲ್ಲಿನ ಜನರು ಇಂಥಾ ವಿದ್ಯಾಭ್ಯಾಸವನ್ನು ಅಕ್ಷೇಪಿಸುವ ಸ್ಥಿತಿಯಲ್ಲಿರಲಿಲ್ಲ. ಅವರು ಇದ್ದ ಮನೆಗಳು ಮತ್ತು ಗುಡಿಸಲುಗಳು ಶಿಥಿಲವಾಗಿದ್ದವು. ಅವುಗಳಲ್ಲಿ ಕೊಠಡಿಗಳು ಒಂದಕ್ಕಿಂತಲೂ ಹೆಚ್ಚಾಗಿ ಇರಲಿಲ್ಲ. ಅಡಿಗೆಯ ಮನೆ, ಊಟದ ಮನೆ, ಮಲಗುವ ಮನೆ, ಎಲ್ಲವೂ ಒಂದರಲ್ಲಿಯೇ ಆಗಬೇಕಾಗಿದ್ದಿತು. ಯಾವ ಮನೆಯೊಳಗೂ ಸ್ನಾನಮಾಡುವುದಕ್ಕೂ, ಕೈಕಾಲು ತೊಳೆದುಕೊಳ್ಳುವುದಕ್ಕೂ, ಮುಖ ತೊಳೆದುಕೊಳ್ಳುವುದಕ್ಕೂ ಸರಿಯಾದ ಅವಕಾಶವಿರಲಿಲ್ಲ. ಅವರು ಊಟಮಾಡುತ್ತಿದ್ದ ರೀತಿಯನ್ನು ಏನೆಂದು ಹೇಳಲಿ! ಮನೆಯ ಯಜಮಾನನು ದಾರಿಯಲ್ಲಿ ಆಹಾರವನ್ನು ತಿನ್ನುತ್ತಾ ಕೆಲಸಕ್ಕೆ ಹೋಗುತ್ತಿದ್ದನು. ಹುಡುಗರು ಹಾಗೆಯೇ ಮಾಡುತ್ತಿದ್ದರು. ಯಜಮಾನಿಯು ಮಾತ್ರ ಮನೆಯ ಒಳಗೆ ಯಾವುದೋ ಒಂದು ಮೂಲೆಯಲ್ಲಿ ಕುಳಿತು ಊಟಮಾಡುತ್ತಿದ್ದಳು. ಇವೆಲ್ಲವನ್ನೂ ನೋಡಿ ನನ್ನ ಮನಸ್ಸು ಪೂರ್ತಿಯಾಗಿ ಕುಗ್ಗಿಹೋಯಿತು. ಇಂಥಾ ಜನರು ಮುಂದಕ್ಕೆ ಬರುವುದು ಅಸಾಧ್ಯವಾಗಿ ತೋರಿತು. " ನಾನಾದರೆ ಒಬ್ಬೊಂಟಿಗನು. ನಾನೇನು ಮಾಡಬಲ್ಲೆನು ? ಇಂಥಾ ಜನರನ್ನು ದಾರಿಗೆ ತರುವುದು ಹೇಗೆ ? ಕೊನೆಗೆ ಏನಾದರೂ ಆಗಲಿ. ಇವರನ್ನು ಉದ್ಧರಿಸುವುದಕ್ಕೆ ಪ್ರಯತ್ನಮಾಡಿಯೇ ನೋಡಿಬಿಡಬೇಕು " ಎಂದು ಪರ್ಯಾಲೋಚಿಸಿ ನಿಶ್ಚಯಿಸಿದೆನು. ಇಂಥಾ ಜನರಿಗೆ ನಿತ್ಯವೂ ಎರಡೆರಡು ಗಂಟೆಗಳ ಹೊತ್ತು ಯಾವುದಾದರೂ ಪುಸ್ತಕಗಳಲ್ಲಿ ಪಾಠಹೇಳಿದ ಮಾತ್ರದಿಂದಲೇ ವಿಶೇಷ ಉಪಯೋಗವು ಆಗಲಾರದೆಂದು ನಿರ್ಧರ ಮಾಡಿಕೊಂಡೆನು.

ಬಿಳಿಯ ಜನರ ಮಾತು.—1881 ನೇ ಇಸವಿ ಜುಲೈ ನಾಲ್ಕನೇ ತಾರೀಖಿನ ದಿವಸ ಮೇಲೆ ಹೇಳಿದ ಕಟ್ಟಡದಲ್ಲಿ ನಮ್ಮ ಪಾಠಶಾಲೆಯು ಮೊದಲಾಯಿತು. ಇದನ್ನು

7

ನೋಡಿ ಸುತ್ತುಮುತ್ತಲೂ ಇದ್ದ ಬಿಳಿಯ ಜನರಲ್ಲಿ ಕೆಲವರು ಓದುವುದನ್ನು ಕಲಿಯುವುದರಿಂದ ಈ ಕಪ್ಪು ಜನರಿಗೆ ಆಗುವ ಪ್ರಯೋಜನವೇನು ಎನ್ನುವುದಕ್ಕೆ ಉಪಕ್ರಮಿಸಿದರು. ಇನ್ನು ಕೆಲವರು ಇವರು ವಿದ್ಯಾಬುದ್ಧಿಗಳನ್ನು ಕಲಿತು ಪ್ರಪಂಚಜ್ಞಾನವನ್ನೂ ಪಡೆದರೆ, ಬಿಳಿಯ ಜನರಿಗೂ ಇವರಿಗೂ ಒಂದು ದಿವಸವಲ್ಲದಿದ್ದರೆ ಇನ್ನೊಂದು ದಿವಸ ಖಂಡಿತವಾಗಿ ವೈಮನಸ್ಯವು ಉಂಟಾಗಿಯೇ ಆಗುವುದು ಎಂದರು. ಮತ್ತೆ ಕೆಲವರು "ಎಲ್ಲರೂ ವಿದ್ಯೆಯನ್ನು ಕಲಿಯುವುದಕ್ಕೆ ಪ್ರಾರಂಭಿಸಿದರೆ, ಕೆಲಸ ಮಾಡುವವರ್ಯಾರು ? ಆಮೇಲೆ ನೇಗಿಲು ಹಿಡಿದು ವ್ಯವಸಾಯ ಮಾಡುವುದಕ್ಕೂ, ಮನೆಯ ಚಾಕರಿ ಮಾಡುವುದಕ್ಕೂ ಆಳುಗಳನ್ನೆಲ್ಲಿಂದ ತರಬೇಕು ?" ಎಂದು ತಮತಮಗೆ ತೋರಿದಂತೆ ಹೇಳುವುದಕ್ಕೆ ಉಪಕ್ರಮಿಸಿದರು. ಅವರು ಹಾಗೆ ಹೇಳುವುದಕ್ಕೆ ಕಾರಣವಿದ್ದಿತು. ಆಗ ನೀಗ್ರೊ ಜನರಲ್ಲಿ ಯಾರಾದರೂ ನಾಲ್ಕಕ್ಷರಗಳನ್ನು ಕಲಿತರೆ, ಅಂಥವರು ಕಷ್ಟಪಟ್ಟು ಒಂದು ಕೆಲಸವನ್ನೂ ಮಾಡದೆ ನಾಜೂಕಾಗಿ ಬಟ್ಟೆಗಳನ್ನು ತೊಟ್ಟು ಚಿನ್ನದ ಕನ್ನಡಕವನ್ನು ಧರಿಸಿಕೊಂಡು, ಕೈಚೀಲ ಕಾಲುಚೀಲಗಳನ್ನು ಹಾಕಿಕೊಂಡು, ಕೈಯಲ್ಲಿ ಕೋಲನ್ನು ಹಿಡಿದು, ಎತ್ತಿದ ಕತ್ತನ್ನು ತಗ್ಗಿಸದೆ, ತಮ್ಮ ಜಾಣತನದ ಮಾತಿನಿಂದಲೇ ಜೀವನ ಮಾಡುವವರಂತೆ ತಿರುಗುತ್ತಿದ್ದರು. ಇದನ್ನು ನೋಡಿದವರು ನೀಗ್ರೊ ಜನರು ವಿದ್ಯೆಯನ್ನು ಕಲಿತರೆ ಅದರಿಂದ ಕೆಡಕೆಂದು ಹೇಳುತ್ತಿದ್ದುದು ಆಶ್ಚರ್ಯವಲ್ಲ.

ಪಾಠಪ್ರವಚನಗಳು.—ಆರಂಭವಾದ ದಿವಸ ಸ್ಕೂಲಿಗೆ ಮುವ್ವತ್ತು ಜನ ಹುಡುಗರು ಸೇರಿದರು. ಇನ್ನೂ ಅನೇಕರು ಸೇರುವುದಕ್ಕಾಗಿ ಬಂದಿದ್ದರು. ಆದರೆ ಹದಿನೈದು ವರ್ಷಕ್ಕೆ ಮೇಲ್ಪಟ್ಟ ವಯಸ್ಸುಳ್ಳವರಾಗಿ ಅಲ್ಪ ಸ್ವಲ್ಪವಾದ ಹಿಂದೆ ಓದಿದ್ದವರನ್ನೇ ಸೇರಿಸಬೇಕೆಂದು ಗೊತ್ತಾಗಿದ್ದ ಕಾರಣ ಅವರೆಲ್ಲರನ್ನೂ ಹಿಂದಕ್ಕೆ ಕಳುಹಿಸಬೇಕಾಯಿತು. ಅಲ್ಲದೆ ಅವರೆಲ್ಲರಿಗೂ ಪಾಠಹೇಳಿಕೊಡುವುದಕ್ಕೆ ನನ್ನನ್ನು ಬಿಟ್ಟರೆ ಮತ್ತೊಬ್ಬರೂ ಇರಲಿಲ್ಲ. ಈ ಮುವ್ವತ್ತು ಜನರಲ್ಲಿ ಅನೇಕರು ಅಲ್ಲಲ್ಲೇ ಸಣ್ಣ ಸ್ಕೂಲುಗಳಲ್ಲಿ ಪಾಠಹೇಳುತ್ತಿದ್ದ ಉಪಾಧ್ಯಾಯರು. ಮಿಕ್ಕವರಲ್ಲಿ ಕೆಲವರು ಅವರ ಕೈಕೆಳಗೆ ಓದಿದ ಹುಡುಗರು. ಇವರೆಲ್ಲರನ್ನೂ ಪರೀಕ್ಷೆ ಮಾಡಿದಾಗ ಎಷ್ಟೋ ಹುಡುಗರು ತಮ್ಮ ಉಪಾಧ್ಯಾಯರಿಗಿಂತಲೂ ಬುದ್ಧಿವಂತರಾಗಿಯೂ, ಹೆಚ್ಚು ತಿಳುವಳಿಕೆಯುಳ್ಳವರಾಗಿಯೂ ಇದ್ದರು. ಇಂಥವರು ತಮಗೆ ಪಾಠಕಲಿಸಿಕೊಟ್ಟವರಿಗಿಂ

ತಲೂ ಮೇಲಿನ ತರಗತಿಯಲ್ಲಿ ಓದುತ್ತಾ ಇದ್ದುದನ್ನು ನೋಡಿ ಜನಗಳು ಆಶ್ಚರ್ಯ ಪಡುತ್ತಿದ್ದರು. ಇವರೆಲ್ಲರೂ ತಾವು ಎಷ್ಟು ದೊಡ್ಡ ಪುಸ್ತಕಗಳನ್ನು ಓದಿ ಎಷ್ಟು ದೊಡ್ಡ ಮಾತುಗಳನ್ನು ಕಲಿತುಕೊಂಡರೆ ಅಷ್ಟು ಬುದ್ಧಿವಂತರೆಂದು ತಿಳಿದುಕೊಳ್ಳುತ್ತಿದ್ದರು. ಆದರಿಂದ ಎಷ್ಟು ಉಪಯೋಗವಾದೀತೆಂದು ಒಬ್ಬರಾದರೂ ನೋಡುತ್ತಿರಲಿಲ್ಲ. ಆದರಂತೆಯೇ ದೊಡ್ಡ ದೊಡ್ಡ ಗ್ರಂಥಗಳನ್ನೂ, ವ್ಯಾಕರಣ ಸೂತ್ರಗಳನ್ನೂ ಕಲಿಯಬೇಕೆಂದು ಅವರಿಗೆ ತುಂಬಾ ಆಸೆಯು ಇದ್ದಿತು ಆದರೆ ಶ್ರದ್ಧೆಯಿಟ್ಟು ಕೆಲಸಮಾಡುವುದರಲ್ಲಿ ಏನೂ ಕಡಮೆಯಾಗಿರಲಿಲ್ಲ. ಸರಿಯಾದ ದಾರಿಯನ್ನು ತೋರಿಸಿಕೊಟ್ಟು, ಹಾಗೆ ಮಾಡಬೇಕೆಂದು ಹೇಳಿದ ಕೂಡಲೇ, ಅವರು ಅದನ್ನು ಸಂತೋಷವಾಗಿ ಮಾಡುತಿದ್ದರು.

ಹೆಂಡತಿಯ ಸಹಾಯ.—ದಿನದಿನಕ್ಕೆ ಹುಡುಗರು ಹೆಚ್ಚಾದರು. ಕೊನೆಗೆ ಒಂದು ತಿಂಗಳ ಹೊತ್ತಿಗೆ 50 ಹುಡುಗರ ಮೇಲೆ ಬಂದು ಸೇರಿದರು. ಅಷ್ಟು ಹೊತ್ತಿಗೆ ನಮ್ಮ ಸ್ಕೂಲಿಗೆ ಮಿಸ್ ಆಲಿವಿಯಾ ಎ. ಡೇವಿಡ್‌ಸನ್ ಎಂಬಾಕೆಯು ಉಪಾಧ್ಯಾಯಿನಿಯಾಗಿ ನಿಯಮಿಸಲ್ಪಟ್ಟಳು. ಈಕೆಯು ಮುಂದೆ ಬಹಳ ದಿವಸಗಳು ನನ್ನ ಜತೆಯಲ್ಲಿ ಸ್ಕೂಲಿನಲ್ಲಿ ಕೆಲಸಮಾಡುತ್ತಿದ್ದು ಕೊನೆಗೆ ನನ್ನ ಹೆಂಡತಿಯಾದಳು. ಈಕೆಯು ತನಗೆ ಬುದ್ಧಿತಿಳಿದಂದಿನಿಂದಲೂ ತನ್ನ ತನು ಮನ ಧನಗಳನ್ನು ಪರೋಪಕಾರಕ್ಕಾಗಿ ಧಾರೆ ಎರೆದಿದ್ದಳು. ತನ್ನ ವಿದ್ಯಾಭ್ಯಾಸವು ಮುಗಿದ ಮೇಲೆ ಇನ್ನೂ ಚಿಕ್ಕ ವಯಸ್ಸಿನಲ್ಲಿಯೇ ಉಪಾಧ್ಯಾಯಿನಿಯಾಗಿ ಬಂದು ಸ್ಕೂಲಿಗೆ ಸೇರಿದಳು. ಹೀಗೆ ಒಂದಾನೊಂದು ಸ್ಕೂಲಿನಲ್ಲಿದ್ದಾಗ ಅಲ್ಲಿ ಓದುತ್ತಿದ್ದ ಒಬ್ಬ ಹುಡುಗನಿಗೆ ಸಿಡುಬು ಎದ್ದಿತು. ಇದನ್ನು ನೋಡಿದವರೆಲ್ಲರೂ ನಿಂತ ಕಡೆಯಲ್ಲಿ ನಿಲ್ಲದೆ ಆ ಹುಡುಗನನ್ನು ಬಿಟ್ಟು ಓಡಿಹೋದರು. ಆದರೆ ಈಕೆ ಮಾತ್ರ ಹೋಗದೆ ಅವನಿಗೆ ವಾಸಿಯಾಗುವವರೆಗೂ ಅವನನ್ನು ನೋಡಿಕೊಳ್ಳುತ್ತಿದ್ದಳು. ಇನ್ನೊಂದು ಸಾರಿ ಓಹಿಯೊ ದೇಶದಲ್ಲಿದ್ದಾಗ ಅಲ್ಲಿ ಹಳದಿಯ ಜ್ವರವೆಂಬ ಒಂದು ವಿಧವಾದ ಸಾಂಕ್ರಾಮಿಕ ಜಾಡ್ಯವು ಹರಡಿಕೊಂಡಿತು. ಕೂಡಲೆ ಅದರಿಂದ ನರಳುತ್ತಿದ್ದ ರೋಗಿಗಳಿಗೆ ತಾನು ಶಿಶ್ರೂಷೆ ಮಾಡುವುದಾಗಿ ತಾನು ಇದ್ದ ಊರಿನ ಅಧಿಕಾರಿಗೆ ಬರೆದು, ಅಪ್ಪಣೆಯನ್ನು ತೆಗೆದುಕೊಂಡು, ಬಹಳವಾಗಿ ಸಹಾಯಮಾಡಿದಳು. ಹ್ಯಾಂಪ್ಟನ್ ಸ್ಕೂಲಿನ ಏರ್ಪಾಡನ್ನು ನೋಡಿ ಅದನ್ನು ಬಹಳವಾಗಿ ಶ್ಲಾಘಿಸಿ ತಾನೂ ಅಲ್ಲಿ ಹೋಗಿ ಕೆಲವು

ವರುಷಗಳು ಓದಿ ತೇರ್ಗಡೆ ಹೊಂದಿ ಕೊನೆಗೆ ಟಸ್ಕೆಗಿ ಸ್ಕೂಲಿಗೆ ಬಂದು ಸೇರಿದಳು. ಹೀಗೆ ಈಕೆಯು ತನ್ನ ಪರೋಪಕಾರ ಬುದ್ಧಿಯ ಜತೆಗೆ ದೊಡ್ಡ ಅನುಭವವನ್ನೂ ಸಂಪಾದಿಸಿ ಸ್ಕೂಲಿನ ಆರಂಭದಲ್ಲಿಯೂ, ಬೆಳವಳಿಕೆಯಲ್ಲಿಯೂ, ನನ್ನ ಕಷ್ಟ ಸುಖಗಳಿಗೆ ಭಾಗಿನಿಯಾಗಿ ಬಹಳವಾಗಿ ಸಹಾಯಮಾಡಿದಳು.

ಪ್ರವಚನ ಕ್ರಮ.—ನಾವಿಬ್ಬರೂ ಸೇರಿ ಸ್ಕೂಲಿನಲ್ಲಿ ಕಲಿಸಿಕೊಡಬೇಕಾದುದೇನೆಂದು ವಿಚಾರಮಾಡಿದೆವು. ನಾನು ಹಿಂದೆಯೇ ಮಾಡಿಕೊಂಡಿದ್ದಂತೆ ಬರಿಯ ಪುಸ್ತಕದ ಓದಿನಿಂದ ಹೆಚ್ಚು ಉಪಯೋಗವಿಲ್ಲವೆಂದು ಖಂಡಿತವಾಯಿತು. ಇದರ ಜತೆಗೆ ಹುಡುಗರಿಗೆ ಶುಚಿ, ನೈರ್ಮಲ್ಯ, ಸ್ನಾನ ಮಾಡುವ ರೀತಿ, ಉಡಿಗೆಗಳನ್ನು ಹಾಕಿಕೊಳ್ಳುವುದು, ಮತ್ತು ಮನೆ ಮಠ ಮೊದಲಾದವುಗಳನ್ನು ಚೊಕ್ಕಟವಾಗಿಡುವ ರೀತಿ, ಒಳ್ಳೆಯ ನಡತೆ, ಕಷ್ಟಪಟ್ಟು ಕೆಲಸಮಾಡುವ ಅಭ್ಯಾಸ, ಮಿತವ್ಯಯ ಮಾಡುವುದು, ಯಾವುದಾದರೂ ಒಂದು ಕೈಗಾರಿಕೆಯನ್ನು ಚನ್ನಾಗಿ ಕಲಿಸುವುದು, ಇವೆಲ್ಲವೂ ಆವಶ್ಯಕವೆಂದು ತೋರಿತು. ಪುಸ್ತಕ ಪಾಠಕ್ಕಿಂತಲೂ ಪ್ರಪಂಚದ ವಿದ್ಯಮಾನಗಳನ್ನು ನೋಡಿ ಅವುಗಳನ್ನು ಅನುಭವಕ್ಕೆ ತಂದುಕೊಳ್ಳುವುದು ಉತ್ತಮವೆಂದು ಗೊತ್ತುಮಾಡಿದೆವು. ಕ್ರಮೇಣ ಹುಡುಗರು ಹೆಚ್ಚುತ್ತಾ ಬಂದರು. ಪಾಠಶಾಲೆಗೆ ಸರಿಯಾದ ಕಟ್ಟಡವಿರಲಿಲ್ಲ. ಅಲ್ಲಿ ಒಂದು ದೇವಸ್ಥಾನವು ಇದ್ದಿತು. ಅಲ್ಲಿಯೇ ಪಾಠಶಾಲೆಯನ್ನು ಮಾಡಬೇಕಾಗಿದ್ದಿತು. ವಿದ್ಯೆಯನ್ನು ಕಲಿತು ಅದರ ಸಹಾಯದಿಂದ ಒಳ್ಳೆಯ ಸ್ಥಿತಿಗೆ ಬರಬೇಕೆಂದು ಅಭಿಲಾಷೆಯು ವಿದ್ಯಾರ್ಥಿಗಳಿಗೆ ಉಂಟಾಗಿತ್ತು. ಹೇಗಾದರೂ ಇವರ ಇಷ್ಟಾರ್ಥವನ್ನು ಸಲ್ಲಿಸಬೇಕೆಂಬ ಅಭಿಲಾಷೆಯು ನಮಗೆ ವಿಶೇಷವಾಗಿದ್ದಿತು.

ಕಟ್ಟಡ—ಸ್ಕೂಲು ಉಪಕ್ರಮವಾಗಿ 3 ತಿಂಗಳಾದವು. ನಮ್ಮ ಪಾಠಶಾಲೆಗೆ ಒಂದು ಮೈಲಿ ದೂರದಲ್ಲಿ ಒಂದು ತೋಟವು ಖರೀದಿಗೆ ಬಂದಿತು. ಪೂರ್ವದಲ್ಲಿ ಈ ತೋಟದಲ್ಲಿ ಹತ್ತಿಯ ವ್ಯವಸಾಯವು ನಡೆಯುತ್ತಿದ್ದಿತು. ಈಗ ಅದು ನಮ್ಮ ಪಾಠಶಾಲೆಗೆ ಕೇವಲ ಅನುಕೂಲವಾಗಿರುವಂತೆ ತೋರಿತು. ಅದಕ್ಕೆ 1,700 ರೂಪಾಯಿ ಬೆಲೆಯನ್ನು ಕಟ್ಟಿದ್ದರು. ಸದರಿ ತೋಟದ ಯಜಮಾನನು ಅರ್ಧಹಣವನ್ನು ನಗದಾಗಿ ಕೊಟ್ಟರೆ ಉಳಿದ ಅರ್ಧ ಹಣವನ್ನು ಕೊಡುವುದಕ್ಕೆ ಒಂದು ವರ್ಷ ವಾಯಿದೆಯನ್ನು ಕೊಡುವುದಾಗಿ ಹೇಳಿದನು. ಅದನ್ನು ಕೊಂಡುಕೊಳ್ಳಬೇಕೆಂದು

ಮನಸ್ಸುಮಾಡಿ, ಹ್ಯಾಂಪ್ಟನ್ ಪಾಠಶಾಲೆಯ ಕೋಶಾಧ್ಯಕ್ಷರಿಗೆ ನನ್ನ ಜವಾಬ್ದಾರಿಯ ಮೇಲೆ 750 ರೂಪಾಯಿಗಳನ್ನು ಸಾಲ ಕೊಡಿಸಬೇಕೆಂದು ಬರೆದುಕೊಂಡೆನು. ಅವರು ಪಾಠಶಾಲೆಯ ಹಣವನ್ನು ಕೊಡುವುದಕ್ಕೆ ತಮಗೆ ಅಧಿಕಾರವಿಲ್ಲವೆಂದು ಹೇಳಿ, ತಮ್ಮ ಸ್ವಂತ ಹಣದಿಂದ 750 ರೂಪಾಯಿಗಳನ್ನು ಕೊಟ್ಟರು. ಆ ತೋಟವನ್ನು ಖರೀದಿಗೆ ತೆಗೆದುಕೊಂಡೆನು. ಅಲ್ಲಿ ಶಿಥಿಲವಾಗಿದ್ದ ಭಾರೀ ಕಟ್ಟಡವು ಇದ್ದಿತು. ಅವುಗಳನ್ನು ದುರಸ್ತು ಮಾಡಿಸಿ ಪಾಠಶಾಲೆಗೆ ಉಪಯೋಗವಾಗುವಂತೆ ಮಾಡಿದೆನು. ಆ ತೋಟದಲ್ಲಿ ಗಿಡಗಳು ಬೆಳೆದುಕೊಂಡು ವಿದ್ಯಾರ್ಥಿಗಳು ಆಡುವುದಕ್ಕೂ, ಪಾಠಕರೇ ಮೊದಲಾದವರ ವಿಹಾರಕ್ಕೂ ಅನುಕೂಲವಾಗಿರಲಿಲ್ಲ. ಗಿಡಗಳನ್ನು ಕತ್ತರಿಸಿ ಪಾಠಶಾಲೆಯ ಸುತ್ತಲೂ ಆಟಗಳಿಗೂ, ವಿಹಾರಕ್ಕೂ ಅನುಕೂಲ ಮಾಡಬೇಕೆಂಬದಾಗಿಯೂ, ಮಿಕ್ಕ ಜಮೀನಿನಲ್ಲಿ ವ್ಯವಸಾಯ ಮಾಡಬೇಕೆಂಬದಾಗಿಯೂ ಉದ್ದೇಶ ಮಾಡಿದೆನು. ಇಷ್ಟವಿದ್ದವರು ನನ್ನ ಜತೆಯಲ್ಲಿ ಕೆಲಸಕ್ಕೆ ಬರಬಹುದೆಂದು ಹೇಳಿ, ನಾನು ಗಿಡಗಳನ್ನು ಕಡಿಯುವುದಕ್ಕೆ ಉಪಕ್ರಮಿಸಲು, ನನ್ನ ಸಹಾಯೋಪಾಧ್ಯಾಯರೂ ಮತ್ತು ವಿದ್ಯಾರ್ಥಿಗಳೂ ಕೆಲಸ ಮಾಡುವುದಕ್ಕೆ ಬಂದರು. ದೊಡ್ಡ ಕಟ್ಟಡ ಮಾತ್ರವೇ ಅಲ್ಲದೆ ವಿಸ್ತಾರವಾದ ವಿಹಾರಸ್ಥಾನವೂ ಕಲ್ಪಿಸಲ್ಪಟ್ಟಿತು. ವ್ಯವಸಾಯಕ್ಕೆ 80 ಎಕರೆ ಜಮೀನು ದೊರೆಯಿತು. ಅದರಲ್ಲಿ ದವಸ, ಹೂವು, ಹಣ್ಣುಗಳನ್ನು ಬೆಳೆಯುವುದಕ್ಕೆ ಏರ್ಪಾಡು ಮಾಡಲ್ಪಟ್ಟಿತು.

ಮಿಸ್ ಡೇವಿಡ್‌ಸನ್‌ರವರು.—ಮಿಸ್ ಡೇವಿಡ್‌ಸನ್‌ರವರು ಈ ಕಟ್ಟಡದ ಸಾಲವನ್ನು ತೀರಿಸುವುದಕ್ಕೆ ಉಪಾಯಗಳನ್ನು ಮಾಡಿದರು. ಟಸ್ಕೆಗಿ ಪಟ್ಟಣದಲ್ಲಿದ್ದ ಬಿಳೀ ಜನಗಳನ್ನೂ ಕರೀ ಜನಗಳನ್ನೂ ಕರೆದು, ಅವರಿಗೆ ರೊಟ್ಟಿ, ಹಣ್ಣು, ಕಾಫಿ ಮೊದಲಾದವುಗಳನ್ನು ಸರಪರಾಜು ಮಾಡುವುದಕ್ಕೆ ಉಪಕ್ರಮಿಸಿದರು. ಈ ಫಲಾಹಾರಕ್ಕೆ ಬಂದವರನ್ನು ಈ ಸ್ಕೂಲು ಕಟ್ಟಡಕ್ಕೆ ಏನಾದರೂ ಸಹಾಯಮಾಡಬೇಕೆಂದು ಕೇಳುತ್ತಾ ಬಂದರು. ಅವರ ಪೈಕಿ ಅನೇಕರು ತಮ್ಮ ಶಕ್ತಿಗೆ ಅನುಸಾರವಾಗಿ ಸಹಾಯವನ್ನು ಮಾಡುವುದಕ್ಕೆ ಉಪಕ್ರಮಿಸಿದರು. ಕರೀ ಜನಗಳಲ್ಲಿ ಅನೇಕರು ತಮ್ಮ ಶಕ್ತಿಗೆ ಮೀರಿ ಸಹಾಯಮಾಡುತ್ತಾ ಬಂದರು. ಒಂದು ದಿವಸ ನಾನು ಈ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ 70 ವರ್ಷ ವಯಸುಳ್ಳ ಒಬ್ಬ ನೀಗ್ರೊ ಹೆಂಗಸು ಅಲ್ಲಿಗೆ ಬಂದಳು. ಅವಳು ಚಿಂದೀ ಬಟ್ಟೆಯನ್ನು ಹಾಕಿಕೊಂಡಿ

ದ್ದಳು. ಬಟ್ಟೆಗಳು ಚಿಂದಿಯಾಗಿದ್ದಾಗ್ಯೂ ಶುಭ್ರವಾಗಿದ್ದವು. ಅವಳು ನನ್ನನ್ನು ನೋಡಿ ಹೇಳಿದ್ದೇನೆಂದರೆ;—ಅಯ್ಯಾ ವಾಷಿಂಗ್ಟರ್ನನ್ನನೇ! ನಾನು ಹುಟ್ಟಿದ್ದು ಮೊದಲುಗೊಂಡು ಸೇವಾವೃತ್ತಿಯಲ್ಲಿದ್ದೆನು. ನಾನು ಅತ್ಯಂತ ದರಿದ್ರಳು. ಇದಲ್ಲದೆ ವಿದ್ಯಾವಿಹೀನಳು. ನೀನೂ ಮತ್ತು ಮಿಸ್ ಡೇವಿಡ್‌ಸರ್ ಎಂಬುವಳೂ ನಮ್ಮ ಜನಗಳನ್ನು ಉದ್ಧರಿಸುವುದಕ್ಕೆ ಮಾಡುವ ಪ್ರಯತ್ನವನ್ನು ನಾನು ನೋಡಿದೆನು. ನಿಮ್ಮ ಪ್ರಯತ್ನದಿಂದ ನಮ್ಮ ಪಂಗಡಕ್ಕೆ ಸೇರಿದ ಹೆಂಗಸರೂ ಮತ್ತು ಗಂಡಸರೂ ಉತ್ತಮ ಸ್ಥಿತಿಗೆ ಬರುವರು. ಈ ವಿಷಯದಲ್ಲಿ ನನಗೆ ಸಂದೇಹವಿಲ್ಲ. ನಿಮಗೇನಾದರೂ ಸಹಾಯಮಾಡಬೇಕೆಂದು ನನಗೆ ಇಷ್ಟವಿರುವುದು. ಆದರೆ ಗತಿಯಿಲ್ಲ. ನಾನು ಕಷ್ಟಪಟ್ಟು ಈ ಆರು ಕೋಳಿಯ ಮೊಟ್ಟೆಗಳನ್ನು ಸಂಪಾದಿಸಿದ್ದೇನೆ. ಇವನ್ನು ಮಾರಿ ಬಂದದ್ದನ್ನು ಈ ಕಟ್ಟಡಕ್ಕೋಸ್ಕರ ಉಪಯೋಗಿಸಿಕೊಂಡರೆ, ನನಗೆ ತುಂಬಾ ಸಂತೋಷವಾಗುವುದು ಎಂದು ಹೇಳಿದರು. ಅದನ್ನು ಇವಳ ಇಷ್ಟದಂತೆ ನಡೆಸಿದೆನು. ಈ ಟಸ್ಕೆಗಿ ಪಾಠಶಾಲೆಗೆ ಬಂದ ಮೇಲೆ ಈ ದೊಡ್ಡ ಕಟ್ಟಡಕ್ಕೋಸ್ಕರ ಎಷ್ಟೋ ಜನಗಳು ನನಗೆ ಸಹಾಯವನ್ನು ಮಾಡಿದರು. ಆದರೆ ನಿರ್ಗತಿಕಳಾದ ಈ ಮುದುಕಿಯು ಮಾಡಿದ ಸಹಾಯವು ಬಹಳ ಅಲ್ಪವಾದಾಗ್ಯೂ, ಈ ಪಾಠಶಾಲೆಯ ಅಭಿವೃದ್ಧಿಗೆ ಅದು ಅತ್ಯಂತ ಶ್ರೇಯಸ್ಕರವಾಯಿತೆಂದು ನಾನು ಭಾವಿಸಿರುವೆನು.

ಅಧ್ಯಾಯ ೭.

ಕ್ರಿಸ್‌ಮಸ್ ಹಬ್ಬವು ಬಂದಿತು. ಅಲಬಾಮಕ್ಕೆ ಬಂದ ಮೇಲೆ, ನಾನು ನೋಡಿದ್ದು ಇದೇ ಮೊದಲನೆಯ ಕ್ರಿಸ್‌ಮಸ್ ಹಬ್ಬವು ಈ ಹಬ್ಬದಲ್ಲಿ ಜನಗಳು ಹೇಗೆ ನಡೆದುಕೊಳ್ಳುತ್ತಾರೋ ಅದನ್ನು ನೋಡುವುದಕ್ಕೆ ಈಗ ಅವಕಾಶವು ದೊರೆಯಿತು. ಎರಡು ಘಂಟೆಯ ವೇಳೆಯಲ್ಲಿ, " ಕ್ರಿಸ್‌ಮಸ್ ಇನಾಮುಗಳು! ಕ್ರಿಸ್‌ಮಸ್ ಇನಾಮುಗಳು!" ಎಂದು ನನ್ನ ಮನೆಯ ಬಾಗಿಲನ್ನು ಅನೇಕ ಮಕ್ಕಳು ತಟ್ಟಿದರು. ರಾತ್ರಿ 2 ಗಂಟೆಯಿಂದ ಬೆಳಿಗ್ಗೆ 5 ಗಂಟೆಯವರೆಗೂ, ಈ ಇನಾಮು

ಗಳನ್ನು ಕೇಳುವುದಕ್ಕೆ 50 ಗುಂಪುಗಳು ಬಂದವು. ಇದು ಆ ದೇಶದ ಪದ್ಧತಿ. ಕ್ರಿಸ್‌ಮಸ್ ಹಬ್ಬದಲ್ಲಿ ಜನಗಳಿಗೆ ಒಂದು ವಾರದ ವರೆಗೂ ರಜಾ ಕೊಡಲ್ಪಡುತ್ತಿದ್ದಿತು. ಅದು ವಿಶ್ರಾಂತಿಗೂ, ವಿಹಾರಕ್ಕೂ ವಿನಿಯೋಗಿಸಲ್ಪಡುತ್ತಿದ್ದಿತು. ಆ ಕಾಲದಲ್ಲಿ ಹೆಂಗಸರೂ, ಗಂಡಸರೂ, ಎಲ್ಲಾ ಕೆಲಸವನ್ನೂ ಬಿಟ್ಟು, ನಿರುದ್ಯೋಗಿಗಗಳಾಗಿ ಇರುತ್ತಿದ್ದರು. ಅನೇಕರು ಪಾನಮಾಡಿ ಪ್ರಜ್ಞೆ ಇಲ್ಲದೆ ಬಿದ್ದಿರುತ್ತಿದ್ದರು. ನಿಷಾದ್ರವ್ಯದಲ್ಲಿ ಪರಾಙ್ಮುಖರಾದವರೂ ಕೂಡ, ಕ್ರಿಸ್‌ಮಸ್ ವಾರದಲ್ಲಿ ಕುಡಿಯುತ್ತಾ, ಭೂಮಿಯ ಮೇಲೆ ಬೀಳುವವರೆಗೂ ಕುಡಿಯುತ್ತಾ, ಬಿದ್ದ ಮೇಲೂ ಪುನಃ ಎದ್ದು ಕುಡಿಯುತ್ತಾ ಪ್ರಜ್ಞೆ ಇಲ್ಲದೆ ಬಿದ್ದಿರುವುದೇ ಸ್ವರ್ಗಸುಖವೆಂದು ತಿಳಿದುಕೊಂಡಿದ್ದರು. ಆ ಕಾಲದಲ್ಲಿ ಪಾನದಿಂದ ಉಂಟಾಗುವ ವಿಹಾರದ ಜತೆಗೆ ಮದ್ದು, ಗುಂಡು, ಪಿಸ್ತೂಲುಗಳು, ಬಂದೂಕಗಳು ಇವುಗಳನ್ನು ಸ್ವೇಚ್ಛೆಯಿಂದ ಉಪಯೋಗಿಸುವುದೂ ಕೂಡ ವಿಹಾರವೆಂದು ಗಣಿಸಲ್ಪಟ್ಟಿತ್ತು. ಈ ವಾರದ ಪಾರಿಶುದ್ಧತೆಯು ಇಂಥಾ ವಿಹಾರಗಳಲ್ಲಿ ಮರೆಯಲ್ಪಟ್ಟಿದ್ದಿತು.

ಪಟ್ಟಣದ ಸ್ಥಿತಿ.—ಕ್ರಿಸ್‌ಮಸ್ ಹಬ್ಬದಲ್ಲಿ ಹೇಗೆ ಇರುತ್ತಿತ್ತೋ ಅದು ಗೊತ್ತಾಯಿತು. ಪ್ಲಾಂಟೇಷರ್‌ಗಳಲ್ಲಿ ಎಂದರೆ ತೋಟಗಳಲ್ಲಿ ಜನಗಳ ಸ್ಥಿತಿಯು ಹೇಗಿರುವುದೋ ಅದನ್ನು ನೋಡಬೇಕೆಂಬ ಕುತೂಹಲವು ನನಗೆ ಉಂಟಾಯಿತು. ಕೆಲವು ದೊಡ್ಡ ಪ್ಲಾಂಟೇಷರ್‌ಗಳಿಗೆ ಹೋದೆನು. ಅಲ್ಲಿಯೂ ಕೂಡ ಜನಗಳಿಗೆ ನಿರುದ್ಯೋಗಿಗಳಾಗಿ ಇರುವುದರಲ್ಲಿ ಆಸಕ್ತಿಯು ಇದ್ದಿತು. ಅಲ್ಲಿನ ಜನಗಳು ಬಹಳ ದರಿದ್ರರಾಗಿಯೂ, ಅಜ್ಞಾನಿಗಳಾಗಿಯೂ ಇದ್ದರು. ಈ ಹಬ್ಬದಲ್ಲಿ ಧರ್ಮಾನುಷ್ಠಾನದಲ್ಲಿಯೂ, ಪರೋಪಕಾರದಲ್ಲಿಯೂ ಸಂತೋಷ ಪಡುವುದು ಅವರಿಗೆ ತಿಳಿದಿರಲಿಲ್ಲ. ಒಂದು ಮನೆಯಲ್ಲಿ 5–6 ಜನ ಮಕ್ಕಳು ಒಂದು ದಸ್ತು ಪಟಾಕಿಯನ್ನು ಹಂಚಿಕೊಂಡು ಹತ್ತಿಸುತ್ತಿದ್ದರು. ಇನ್ನೊಂದು ಮನೆಯಲ್ಲಿ 6 ಜನಗಳು 12 ಆಣೆಗೆ ಕೊಂಡುಕೊಳ್ಳಲ್ಪಟ್ಟಿದ್ದ "ಕ್ರಿಸ್‌ಮಸ್ ಕೇಕ್" ಎಂಬ ರೊಟ್ಟಿಯನ್ನು ತಿನ್ನುತ್ತಿದ್ದರು. ಮತ್ತೊಂದು ಮನೆಯಲ್ಲಿ ಖಂಡಸಕ್ಕರೆಯ ಕೆಲವು ಚೂರುಗಳನ್ನು ಹಂಚಿಕೊಳ್ಳುತ್ತಿದ್ದರು. ಇನ್ನೊಂದು ಮನೆಯಲ್ಲಿ ಒಬ್ಬ ಪಾದ್ರಿಯೂ, ಅವನ ಹೆಂಡತಿಯೂ ಅತ್ಯಂತ ಅಗ್ಗವಾಗಿದ್ದ ಸಾರಾಯಿಯನ್ನು ಯಥೇಚ್ಛವಾಗಿ ಪಾನಮಾಡುತ್ತಿದ್ದರು. ಯಾವ ಮನೆಯಲ್ಲೂ ಕ್ರಿಸ್ತನ ಧರ್ಮಗಳೂ, ಅವುಗಳ ಅನುಷ್ಠಾನ

ಗಳೂ ಕಾಣಬರಲಿಲ್ಲ. ರಾತ್ರಿವೇಳೆಯಲ್ಲಿ ನಿಷಾದ್ರವ್ಯ ಸೇವನೆಯನ್ನು ಮಾಡಿ ಜನಗಳು ನರ್ತನಮಾಡುತ್ತಿದ್ದರು. ಹೀಗೆ ಮನೆಮನೆಗೆ ಹೋಗುತ್ತಿದ್ದಾಗ ಒಬ್ಬ ಮುದುಕನನ್ನು ನೋಡಿದೆನು. "ದೇವರು ಆದಿಪುರುಷನಾದ ಆದಮ್‌ನನ್ನು ಸೃಷ್ಟಿಸಿ, ಈಡೆನ್ ಎಂಬ ತೋಟದಲ್ಲಿಟ್ಟು, ಉದ್ಯೋಗಕ್ಕೆ ಶಾಪವನ್ನು ಕೊಟ್ಟು, ನಿರುದ್ಯೋಗಿಯಾಗಿರು ಎಂದು ಹೇಳಿರುವನು, ಉದ್ಯೋಗಮಾಡುವುದು ಪಾಪವೆಂದು ದೇವರ ಆಜ್ಞೆಯು ಇರುವುದು" ಎಂದು ಅವನು ಹೇಳಿದನು. ಅವನು ನಿರುದ್ಯೋಗಿಯಾಗಿಯೂ ಇದ್ದನು. ಕ್ರಿಸ್‌ಮಸ್ ವಾರದಲ್ಲಿ ಹೇಗೋ ಹಾಗೆಯೇ ಅನೇಕರು ನಿರುದ್ಯೋಗ ಸಾಮ್ರಾಜ್ಯದಲ್ಲಿ ಯಾವಾಗಲೂ ಮುಳುಗಿ ತೇಲುತ್ತಿದ್ದರು.

ಕ್ರೈಸ್ತಧರ್ಮ.—ಪಾಠಶಾಲೆಗಳಲ್ಲಿ ಕ್ರೈಸ್ತಧರ್ಮಗಳನ್ನೂ, ಅವುಗಳ ಅನುಷ್ಠಾನ ಕ್ರಮಗಳನ್ನೂ ತಿಳಿಸುತ್ತಿದ್ದೆನು. ನಮ್ಮ ಪಾಠಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳು ಈ ಧರ್ಮಗಳನ್ನು ತಿಳಿದುಕೊಂಡಿದ್ದರು. ಕ್ರಿಸ್‌ಮಸ್ ವಾರ ವಾರದಲ್ಲಿ ಕ್ರೈಸ್ತಮತಾವಲಂಬಿಗಳು ಬಡವರಿಗೆ ಅನ್ನವಸ್ತ್ರಗಳನ್ನು ಕೊಡುವುದರಲ್ಲಿಯೂ, ಅಜ್ಞಾನಿಗಳಿಗೆ ಜ್ಞಾನೋಪದೇಶವನ್ನು ಮಾಡುವುದರಲ್ಲಿಯೂ, ಸಮಸ್ತ ಜನಗಳಿಗೂ ಕೈಲಾದಮಟ್ಟಿಗೂ ಉಪಕಾರಮಾಡುವುದರಲ್ಲಿಯೂ, ಯಾರಿಗೂ ಯಾವುದರಲ್ಲಿಯೂ, ಅಪಕಾರಮಾಡದೆ ಇರುವುದರಲ್ಲಿಯೂ ಆಸಕ್ತರಾಗಿರಬೇಕು. ಕ್ರಿಸ್‌ಮಸ್ ಹಬ್ಬದಲ್ಲಿ ಸರ್ವರೂ ಇಂಥಾ ಸದುದ್ಯೋಗವುಳ್ಳವರಾಗಿರಬೇಕು. ಇದೇ ಕ್ರೈಸ್ತಧರ್ಮ. ನಮ್ಮ ಪಾಠಶಾಲೆಯ ವಿದ್ಯಾರ್ಥಿಗಳು ಈ ಧರ್ಮಗಳನ್ನು ತಿಳಿದುಕೊಂಡು ಅನುಷ್ಠಿಸುತ್ತಿದ್ದರು. ಕೆಲವು ಜನ ವಿದ್ಯಾರ್ಥಿಗಳು ಶಿಥಿಲವಾದ ಒಂದು ಮನೆಯಲ್ಲಿದ್ದ 75 ವರ್ಷದ ಒಬ್ಬ ಮುದುಕಿಯನ್ನು ನೋಡಿ ಅವಳ ಮನೆಯನ್ನು ಚನ್ನಾಗಿ ದುರಸ್ತು ಮಾಡಿಕೊಟ್ಟರು. ಇನ್ನು ಕೆಲವು ಜನರು ಚಳಿಯಿಂದ ನಡುಗುತ್ತಿದ್ದ ಕೆಲವು ಜನ ಅತ್ಯಂತ ಬಡವರನ್ನು ನೋಡಿ ಅವರಿಗೆ ಕೋಟುಗಳನ್ನು ಹೊಲಿಸಿಕೊಟ್ಟರು. ಮತ್ತೆ ಕೆಲವರು ಅನ್ನೋದಕಗಳಿಗೆ ಇಲ್ಲದೆ ಕಷ್ಟಪಡುತ್ತಿದ್ದ ಜನಗಳಿಗೆ ಅನ್ನೋದಕಗಳನ್ನು ಸರಬರಾಜು ಮಾಡಿದರು. ಈ ಕ್ರಿಸ್‌ಮಸ್ ವಾರದಲ್ಲಿ ಜ್ಞಾನವಿಹೀನರಾದವರಿಗೆ ಒಳ್ಳೆಯ ಕರ್ಮಗಳನ್ನು ಮಾಡಿದವರಿಗೆ ಒಳ್ಳೆಯ ಫಲವೂ, ಕೆಟ್ಟ ಕರ್ಮಗಳನ್ನು ಮಾಡಿದವರಿಗೆ ಕೆಟ್ಟ ಫಲವೂ ಹೇಗೆ ಉಂಟಾಗುವುದೋ ಅದನ್ನು ಎಲ್ಲಾ ವಿದ್ಯಾರ್ಥಿಗಳೂ ಬೋಧಿಸುತ್ತಿದ್ದರು.

ಸೌಹಾರ್ದ.—ಆ ಕಾಲದಲ್ಲಿ ಬಿಳಿಯ ಜನಗಳಿಗೂ, ಕರಿಯ ಜನಗಳಿಗೂ ನಿಸರ್ಗವಾದ ಪ್ರೀತಿಯು ಇರಲಿಲ್ಲ. ಇವರಿಗೆ ಪರಸ್ಪರ ಪ್ರೀತಿಯನ್ನುಂಟುಮಾಡಬೇಕೆಂದು ನಾನು ಪ್ರಯತ್ನಮಾಡಿದೆನು. ಇದಕ್ಕೆ ನನ್ನ ಪಾಠಶಾಲೆಯು ತುಂಬಾ ಸಾಧಕವಾಯಿತು. ಈ ಪಾಠಶಾಲೆಯ ಪುರೋಭಿವೃದ್ಧಿಯಲ್ಲಿ ಕರಿಯ ಜನಗಳಿಗೆ ಹೇಗೋ ಹಾಗೆ ಬಿಳಿಯ ಜನರಿಗೂ ಆಸಕ್ತಿಯನ್ನು ಹುಟ್ಟಿಸಬೇಕೆಂದು ನನಗೆ ಸಂಕಲ್ಪ ಉಂಟಾಯಿತು. ಈ ಪಾಠಶಾಲೆಯು ಕಟ್ಟಡವನ್ನೂ, ತೋಟವನ್ನೂ ಕೊಂಡುಕೊಳ್ಳುವುದಕ್ಕೆ ಅವರವರ ಶಕ್ತಿಗೆ ಅನುಸಾರವಾಗಿ ಸಹಾಯ ಮಾಡಬೇಕೆಂದು ಅನೇಕರನ್ನು ಪ್ರಾರ್ಥಿಸಿದೆನು. ಈ ಪ್ರಾರ್ಥನೆಯಂತೆ ಸಹಾಯವು ಬರುವುದಕ್ಕೆ ಉಪಕ್ರಮವಾಯಿತು. ಟಸ್ಕೆಗಿ ಪಟ್ಟಣದಲ್ಲಿ ಹೇಗೋ ಹಾಗೆ ಬಾಸ್ಟನ್ನಲ್ಲಿಯೂ ಕೂಡ ಧರ್ಮಿಷ್ಟರು ದೊರೆತರು. ವಿದ್ಯಾರ್ಥಿಗಳಿಗೆ ಸದ್ವಿದ್ಯಾಭ್ಯಾಸವನ್ನು ಮಾಡಿಸಿ ಅವರು ವಿದ್ಯಾವಂತರಾಗುವುದಲ್ಲದೆ ವಿನಯಾದಿ ಸದ್ಗುಣಗಳುಳ್ಳವರಾಗುವಂತೆಯೂ ಮಾಡುವುದರಲ್ಲಿ ನಾನು ಅಹೋರಾತ್ರಿಯಲ್ಲಿಯೂ ಮಾಡುತ್ತಿದ್ದ ಮೆಹನತ್ತು ಸಫಲವಾಯಿತು. ಸತ್ಯಸಂಕಲ್ಪವುಳ್ಳವರಿಗೆ ಒಳ್ಳೆಯ ಫಲವಾಗುವುದು ಏನೂ ಆಶ್ಚರ್ಯವಲ್ಲ. ಬಹು ಕೊಂಚಕಾಲದಲ್ಲಿಯೇ ನನ್ನ ಪಾಠಶಾಲೆಯಲ್ಲಿ ಓದಿದವರು ಸಚ್ಚರಿತ್ರೆಯುಳ್ಳವರಾಗುವರೆಂದು ಜನಗಳು ತಿಳಿದುಕೊಂಡರು. ಅಪ್ರಾರ್ಥಿತವಾಗಿ ಸಹಾಯ ಸಂಪತ್ತುಗಳು ಲಭ್ಯವಾಗುವುದಕ್ಕೆ ಉಪಕ್ರಮವಾಯಿತು. ಟಸ್ಕೆಗಿ ಪಾಠಶಾಲೆಯು ಸದ್ವಿದ್ಯಾಭ್ಯಾಸಕ್ಕೆ ಮಾತೃಸ್ಥಾನವೆಂಬ ಪ್ರತಿಷ್ಠೆಯನ್ನು ಹೊಂದಿತು. ಉದಾರವಾದ ಧರ್ಮಗಳಿಗೆ ಈ ಪಾಠಶಾಲೆಗಳಿಗಿಂತ ಹೆಚ್ಚಾದ ಪಾತ್ರತೆಯು ಯಾವ ಧರ್ಮಗಳಿಗೂ ಇಲ್ಲವೆಂಬ ಪ್ರತ್ಯಯವು ಉಂಟಾಯಿತು. ಕರೀ ಜನಗಳು ಹೇಗೋ ಹಾಗೆ ಬಿಳೀ ಜನಗಳೂ ಕೂಡ ಈ ಪಾಠಶಾಲೆಗೆ ಸಹಾಯ ಮಾಡುವುದಕ್ಕೆ ಉಪಕ್ರಮಿಸಿದರು. ಮೂರು ತಿಂಗಳೊಳಗಾಗಿ ನಾನು ಮಾಡಿದ 750 ರೂಪಾಯಿ ಸಾಲವು ತೀರಿಸಲ್ಪಟ್ಟಿತು. ಅನಂತರ ಎರಡು ತಿಂಗಳೊಳಗಾಗಿ ಉಳಿದ 750 ರೂಪಾಯಿ ಸಾಲವು ತೀರಿಸಲ್ಪಟ್ಟಿತು. 100 ಎಕರೆ ಜಮೀನು ಮತ್ತು ಕಟ್ಟಡಗಳು ಈ ಪಾಠಶಾಲೆಗೋಸ್ಕರ ದೊರೆತವು. ಇದರ ಜತೆಯಲ್ಲಿ ಕರೀ ಜನಗಳೂ, ಬಿಳೀ ಜನಗಳೂ ಪರಸ್ಪರ ದ್ವೇಷವನ್ನು ಬಿಟ್ಟು ಸೌಹಾರ್ದದಿಂದ ನಡೆಯುವುದಕ್ಕೂ, ಎಲ್ಲರೂ ಉದಾರವಾಗಿ ಸಹಾಯವನ್ನು ಮಾಡಿ ಈ ಪಾಠಶಾಲೆಯನ್ನು ನಡೆಸುವುದಕ್ಕೂ ಉಪಕ್ರಮಿಸಿದರು.

ಉದ್ಯೋಗ.—ನಮ್ಮ ಪಾಠಶಾಲೆಗೆ ಕಟ್ಟಡವು ಸಿಕ್ಕಿತು. ಅದರ ಜತೆಯಲ್ಲಿಯೇ 100 ಎಕರೆ ಜಮೀನು ಲಭ್ಯವಾಯಿತು. ನಮ್ಮ ಪಾಠಶಾಲೆಯಲ್ಲಿ ಓದತಕ್ಕ ವಿದ್ಯಾರ್ಥಿಗಳು ಬಹಳ ಬಡವರಾಗಿದ್ದರು. ಅವರಿಗೆ ಅನ್ನವಸ್ತ್ರಗಳಿಗೂ, ಪುಸ್ತಕಗಳನ್ನು ಕೊಳ್ಳುವುದಕ್ಕೂ ಮಾರ್ಗವಿರಲಿಲ್ಲ. ಕೆಲಸ ಮಾಡುವುದಕ್ಕೆ ಮಾತ್ರ ಅವರು ಶಕ್ತರಾಗಿದ್ದರು. ಇವರಿಗೆ ಉದ್ಯೋಗಗಳನ್ನು ಕಲ್ಪಿಸಿ ಉದ್ಯೋಗದ ಜತೆಯಲ್ಲಿ ವಿದ್ಯಾಭ್ಯಾಸವನ್ನೂ ಮಾಡಿಸಬೇಕಾಗಿದ್ದಿತ್ತು. ಬುದ್ಧಿಗೆ ಕೆಲಸವನ್ನು ಕೊಡುವುದಕ್ಕೆ ಮುಂಚೆ ಹೊಟ್ಟೆಗೆ ಆಹಾರವನ್ನು ಕೊಡಬೇಕಾಗಿತ್ತು. ಹೊಟ್ಟೆಗೆ ಸಂಪಾದಿಸುವುದಕ್ಕೆ ಎಲ್ಲಾ ವೃತ್ತಿಗಳಿಗಿಂತಲೂ ಜಮೀನು ಸಾಗುವಳಿ ಮಾಡತಕ್ಕ ವೃತ್ತಿಯೇ ಅತ್ಯುತ್ತಮವಾದದ್ದೆಂದು ನಿಷ್ಕರ್ಷೆಮಾಡಿ ನಮ್ಮ ಪಾಠಶಾಲೆಗೆ ಸೇರಿದ ಜಮೀನನ್ನು ಸಾಗುವಳಿ ಮಾಡುವುದಕ್ಕೆ ಉಪಕ್ರಮಿಸಿದೆವು. ಅನೇಕ ವಿದ್ಯಾರ್ಥಿಗಳು ಪಾಠಶಾಲೆಗೆ ರಜಾ ಬಂದ ಕೂಡಲೆ ತಮ್ಮ ಸ್ಥಳಗಳಿಗೆ ಹೊರಟು ಹೋಗುತ್ತಿದ್ದರು. ಬಹುಜನಕ್ಕೆ ಅನ್ನಕ್ಕೆ ಅಭಾವವಾಗಿದ್ದದ್ದೇ ಇದಕ್ಕೆ ಮುಖ್ಯಕಾರಣವಾಗಿತ್ತು. ನಾವು ವ್ಯವಸಾಯಕ್ಕೆ ಉಪಕ್ರಮ ಮಾಡಲು ಕೆಲವು ಜನ ವಿದ್ಯಾರ್ಥಿಗಳು ಜಿರಾಯಿತು ಕೆಲಸವನ್ನು ಮಾಡಿ ಅದರಲ್ಲಿ ಬರತಕ್ಕ ಕೂಲಿಯಿಂದ ಪರಾಪೇಕ್ಷೆಯಿಲ್ಲದೆ ಜೀವನ ಮಾಡಿಕೊಂಡು ವಿದ್ಯಾಭ್ಯಾಸವನ್ನು ಮಾಡಿಕೊಳ್ಳಬಹುದೆಂದು ನಿಷ್ಕರ್ಷೆಮಾಡಿದರು. ಈ ನಿಷ್ಕರ್ಷೆಯು ಬಹಳ ಸಾಧುವಾದದ್ದು. ಇತರ ವೃತ್ತಿಗಳಲ್ಲಿ ತುಂಬಾ ಐಶ್ವರ್ಯವಂತರಾಗುವುದಕ್ಕೆ ಅವಕಾಶವುಂಟು. ಬಡವರಾಗುವುದಕ್ಕೂ ಅವಕಾಶವುಂಟು. ಭೂಮಿಯನ್ನು ನಂಬಿದವರು ಕೆಡುವುದು ಅಪೂರ್ವ. ಇದನ್ನು ಯೋಚಿಸಿ ಇಲ್ಲಿನ ಬಡ ವಿದ್ಯಾರ್ಥಿಗಳಿಗೆ ವ್ಯವಸಾಯದಲ್ಲಿ ಪ್ರವೇಶವನ್ನುಂಟುಮಾಡಿಸಿದೆನು.

ಸಂಪತ್ತು.—ಸಂಪತ್ತು ಧಾನ್ಯರೂಪವಾಗಿಯೂ, ಕಾಲ್ನಡೆಗಳ ರೂಪವಾಗಿಯೂ ಇರುವುದುಂಟು. ರೈತರ ಸಂಪತ್ತು ಪ್ರಾಯಿಕವಾಗಿ ಈ ಎರಡು ರೂಪವಾಗಿಯೂ ಇರುವುದು. ನಾವು ಜಿರಾಯಿತು ಕಸಬಿಗೆ ಉಪಕ್ರಮಿಸಿದಾಗ ಟಸ್ಕೆಗಿ ಪಟ್ಟಣದ ಒಬ್ಬ ಬಿಳೀ ಮನುಷ್ಯನು ನಮಗೆ ಒಂದು ಕುದುರೆಯನ್ನು ಕೊಟ್ಟನು. ಅದು ಕುರುಡು ಕುದುರೆ. ಆದಾಗ್ಯೂ ಅದು ಆರೋಗದೃಢಕಾಯವಾಗಿದ್ದಿತು. ಈಗ ನಮ್ಮ ಜಮೀನಿನಲ್ಲಿ 200 ಕುದುರೆಮರಿಗಳೂ, ಹೇಸರಕತ್ತೆಗಳೂ, ಹಸುಗಳೂ, ಕರುಗಳೂ, ಹೋರಿಗಳೂ, 700 ಹಂದಿಗಳೂ, ಸಾವಿರಾರು ಕುರಿಗಳೂ, ಟಗರು

ಗಳೂ ಇರುತ್ತವೆ. ಈ ಸಂಪದಭ್ಯುದಯಕ್ಕೆ ನಮ್ಮ ಪಾಠಕ್ರಮಗಳೂ ಮತ್ತು ವಿದ್ಯಾರ್ಥಿಗಳ ಮೆಹನತ್ತೂ ಕಾರಣಗಳು.

ಪಾಠಶಾಲೆಯ ಬಡಾವಣೆ.—ನಮ್ಮ ಪಾಠಶಾಲೆಯು ಆತ್ಮಾವಲಂಬನೆಗೆ ಮಾತೃಸ್ಥಾನವೆಂದು ಪ್ರಸಿದ್ಧಿಗೆ ಬಂದಿತು. ಬಹುದೂರದಿಂದ ವಿದ್ಯಾರ್ಥಿಗಳು ಗುಂಪು ಗುಂಪಾಗಿ ಬರುವುದಕ್ಕೆ ಉಪಕ್ರಮವಾಯಿತು. ಜಮೀನನ್ನು ಸಾಗುವಳಿ ಮಾಡು ವುದರಲ್ಲಿ ಪಾಠಕರೂ ಮತ್ತು ವಿದ್ಯಾರ್ಥಿಗಳೂ ದಕ್ಷರಾದರು. ಮೊದಲಿನಲ್ಲಿ ನಾವು ಹಾಕಿಕೊಂಡಿದ್ದ ಗುಡಿಸಲುಗಳು ಒಳ್ಳೆಯ ಕಟ್ಟಡಗಳಾದವು. ಆದಾಗ್ಯೂ ಅನೇಕ ವಿದ್ಯಾರ್ಥಿಗಳು ಹೊಸದಾಗಿ ಬಂದು ಸೇರಿದ್ದರಿಂದ ಪಾಠಶಾಲೆಯ ಕಟ್ಟಡವೂ, ವಿದ್ಯಾರ್ಥಿಗಳ ವಾಸದ ಕಟ್ಟಡಗಳೂ ಸಾಕಾಗಲಿಲ್ಲ. ಈ ಎರಡು ಕಟ್ಟಡಗಳೂ ಬಡಾಯಿಸಲ್ಪಡಬೇಕಾಯಿತು. ಈ ಬಡಾವಣೆಗಳು ಹೇಗೆ ಮಾಡಲ್ಪಡಬೇಕೋ ಅದನ್ನು ಯೋಚನೆಮಾಡಿದೆವು. ಪ್ಲಾನುಗಳನ್ನೂ, ಎಸ್ಟಿಮೇಟುಗಳನ್ನೂ ತಯಾರು ಮಾಡಿದೆವು. ನಮ್ಮ ಎಸ್ಟಿಮೇಟುಗಳು ಎಷ್ಟು ಮಿತವ್ಯಯಾಸಕ್ತಿಯಿಂದ ಮಾಡಲ್ಪ ಟ್ಟಾಗ್ಯೂ, 18,000 ರೂಪಾಯಿ ಬೇಕಾಯಿತು. ಕಟ್ಟಡವು ಬಡಾಯಿಸಲ್ಪಟ್ಟರೆ ನಾವು ಮುಂದಕ್ಕೆ ಹೋಗಬಹುದೆಂಬದಾಗಿಯೂ, ಹಾಗೆ ಬಡಾಯಿಸದೆ ಇದ್ದರೆ ಹಿಂದಕ್ಕೆ ಹೋಗಬೇಕಾಗುವುದೆಂಬದಾಗಿಯೂ ಗೊತ್ತಾಯಿತು. ನಾವು ಈ ವಿಷಯವನ್ನು ಯೋಚಿಸುತ್ತಿರುವಾಗ ಗರಗಸದ ಯಂತ್ರವಿಟ್ಟುಕೊಂಡಿದ್ದ ಒಬ್ಬ ವರ್ತಕನು ನಮ್ಮ ಬಳಿಗೆ ಬಂದು ಕಟ್ಟಡವನ್ನು ಕಟ್ಟುವುದಕ್ಕೆ ಬೇಕಾದ ಮರದ ಸಾಮಾನುಗಳ ನ್ನೆಲ್ಲಾ ಕೊಡುವುದಾಗಿಯೂ, ಅನುಕೂಲವಾದಾಗ ಅದರ ಕ್ರಯವನ್ನು ಕೊಡಬ ಹುದೆಂಬದಾಗಿಯೂ ಹೇಳಿದನು. ನನ್ನ ಬಳಿಯಲ್ಲಿ ಒಂದು ಕಾಸೂ ಇಲ್ಲವೆಂದು ನಾನು ಹೇಳಿದೆನು. ಆದಾಗ್ಯೂ ಆತನು ಕಟ್ಟಡಕ್ಕೆ ಬೇಕಾದಷ್ಟು ಮರಮುಟ್ಟುಗ ಳನ್ನು ಕಳುಹಿಸಿಕೊಟ್ಟನು.

ಯಾಚನೆ.—ಮಿಸ್ ಡೇವಿಡ್‌ಸನ್‌ರವರು ಯಾಚನೆಗೆ ಪ್ರಾರಂಭ ಮಾಡಿ ದರು. ಈ ಕಟ್ಟಡವನ್ನು ಬಡಾಯಿಸುವುದರಿಂದ ಆಗತಕ್ಕ ಪ್ರಯೋಜನವು ಆ ಪುರ ನಿವಾಸಿಗಳಿಗೆಲ್ಲಾ ಸೇರಿದ್ದೆಂಬ ಭಾವನೆಯು ಅವರಿಗೂ ಉಂಟಾಯಿತು. ಇದಕ್ಕೆ ಸಹಾಯ ಮಾಡುವುದು ಎಲ್ಲರಿಗೂ ಕರ್ತವ್ಯವೆಂಬ ಜ್ಞಾನವು ಅವರಿಗೆ ಹುಟ್ಟಿತು. ಈ ಕಟ್ಟಡಕ್ಕೆ ಹಣವನ್ನು ಸೇರಿಸುವುದಕ್ಕೋಸ್ಕರ ಯಾವ ಪ್ರಯತ್ನಗಳನ್ನು ಮಾಡ

ಬೇಕೋ ಅದನ್ನು ಪರ್ಯಾಲೋಚಿಸುವುದಕ್ಕೆ ಒಂದು ಮೀಟಿಂಗನ್ನು ಮಾಡಿ ಯೋಚಿಸುತ್ತಾ ಇದ್ದೆವು. ಅಲ್ಲಿಗೆ 12 ಮೈಲಿ ದೂರದಲ್ಲಿದ್ದ ಒಬ್ಬ ನೀಗ್ರೊ ರೈತನು ಒಂದು ಎತ್ತಿನ ಬಂಡಿಯನ್ನೂ, ಒಂದು ದೊಡ್ಡ ಗಂಡು ಹಂದಿಯನ್ನೂ ತೆಗೆದು ಕೊಂಡು ಬಂದು ಹೇಳಿದ್ದೇನೆಂದರೆ:—"ನೀವು ಪಾಠಶಾಲೆಯ ಕಟ್ಟಡವನ್ನು ಬಡಾಯಿಸುವುದಕ್ಕೋಸ್ಕರ ಪ್ರಯತ್ನ ಮಾಡುತ್ತಿರುವುದಾಗಿ ತಿಳಿಯಬಂದಿತು. ನಾನು ಬಹಳ ಶ್ರಮಪಟ್ಟು ಎರಡು ಗಂಡು ಹಂದಿಗಳನ್ನು ಸಾಕಿಧೇನೆ. ನಿಮಗೆ ಸಹಾಯ ಮಾಡುವುದಕ್ಕೆ ನನ್ನ ಬಳಿಯಲ್ಲಿ ದ್ರವ್ಯವಿರಲಿಲ್ಲ. ದ್ರವ್ಯಕ್ಕೆ ಬದಲಾಗಿ ಈ ಎರಡರಲ್ಲಿ ಒಂದು ಹಂದಿಯನ್ನು ತಂದು ಇಧೇನೆ. ಇದನ್ನು ಪರಿಗ್ರಹಿಸಬೇಕು" ಎಂದು ಹೇಳಿದನು.

ಈ ರೀತಿಯಲ್ಲಿ ಆ ಕರೀ ರೈತನು ಹೇಳಿದ ಕೂಡಲೇ, ಅಲ್ಲಿ ಸೇರಿದ್ದ ಅನೇಕ ರೈತರು ಈ ಕಟ್ಟಡಕ್ಕೋಸ್ಕರ ಈ ರೈತನಂತೆ ದ್ರವ್ಯರೂಪದಿಂದಲಾಗಲಿ, ಧಾನ್ಯರೂಪ ದಿಂದಲಾಗಲಿ, ಕಾಲ್ನಡೆಗಳರೂಪದಿಂದಲಾಗಲಿ, ಮೆಹನತ್ತಿನ ರೂಪದಿಂದಲಾಗಲಿ, ಯಾವುದಾದರೂ ಒಂದು ರೀತಿಯಲ್ಲಿ ಸಹಾಯ ಮಾಡಬೇಕೆಂದು ನಿಸ್ಕರ್ಷೆ ಮಾಡಿ ಕೊಂಡರು. ಈ ರೀತಿಯಲ್ಲಿ ದ್ರವ್ಯವು ಬಹುಮಟ್ಟಿಗೂ ಒದಗಿತು. ಆದಾಗ್ಯೂ ಅದು ಸಾಕಾಗಲಿಲ್ಲ. ಮಿಸ್ ಡೇವಿಡ್‌ಸರ್ನರವರು ಈ ಕಟ್ಟಡಕ್ಕೋಸ್ಕರ ಚಂದಾ ವಸೂಲ್ಮಾಡಬೇಕೆಂದು ಟಸ್ಕೆಗಿ ಪಟ್ಟಣವನ್ನು ಬಿಟ್ಟು ಉತ್ತರ ದೇಶಕ್ಕೆ ಸಂಚಾರ ಮಾಡಿದರು. ಅಲ್ಲಿ ದೇವಸ್ಥಾನಗಳಲ್ಲಿಯೂ, ಪಾಠಶಾಲೆಗಳಲ್ಲಿಯೂ, ಇತರ ಸಭೆಗ ಳಲ್ಲಿಯೂ ಈ ಉದ್ದೇಶವನ್ನು ತಿಳಿಸಿ, ಸಹಾಯಮಾಡಬೇಕೆಂದು ಕೇಳಿಕೊಂಡರು. ಪ್ರಥಮತಃ ಇವರಿಗೆ ಸಹಾಯವು ದೊರೆಯಲಿಲ್ಲ. ಕ್ರಮ ಕ್ರಮವಾಗಿ ಇವರ ಉದ್ದೇಶವು ನಿಜವೆಂಬದಾಗಿಯೂ, ಇವರು ಸಹಾಯಕ್ಕೆ ಪಾತ್ರರೆಂಬದಾಗಿಯೂ ಜನಗಳಿಗೆ ಗೊತ್ತಾಯಿತು. ನ್ಯೂಯಾರ್ಕ್ ಪಟ್ಟಣದ ಒಬ್ಬ ಬಿಳೀ ದೊರೆಸಾನಿ ಯೊಡನೆ ಮಿಸ್ ಡೇವಿಡ್‌ಸರ್ನರವರು ಟಸ್ಕೆಗಿ ಪಟಣದಲ್ಲಿ ತಾವು ಮಾಡುತ್ತಲಿರುವ ವಿದ್ಯಾಭ್ಯಾಸದ ಏರ್ಪಾಡುಗಳ ವಿಷಯವನ್ನು ತಪ್ಸೀಲುವಾರಾಗಿ ವಿಜ್ಞಾಪಿಸಿದರು. ಇದನ್ನು ಕೇಳಿದ ಕೂಡಲೆ ಆ ದೊರೆಸಾನಿಯು 150 ರೂಪಾಯಿಗಳನ್ನು ಕೊಟ್ಟಳು. ಮಿಸ್ ಡೇವಿಡ್‌ಸರ್ನರವರು ಪರೋಪಕಾರ ಮಾಡಬೇಕೆಂದು ಎಷ್ಟು ಉತ್ಸಾಹವುಳ್ಳ ವರಾಗಿದ್ದರೋ ಪರೋಪಕಾರ ಮಾಡುವುದಕ್ಕೆ ಅಷ್ಟು ದೇಹಶಕ್ತಿ ಉಳ್ಳವರಾಗಿರ

ಲಿಲ್ಲ. ಬೋಸ್ಟನ್ ಪಟ್ಟಣದಲ್ಲಿ ಒಬ್ಬ ದೊರೆಸಾನಿಯನ್ನು ನೋಡುವುದಕ್ಕೆ ಅವರು ಹೋದರು. ಅವರಿಗೆ ತುಂಬಾ ಬೇಜಾರಾಗಿದ್ದಿತು. ಆ ದೊರೆಸಾನಿಯು ಬರುವುದಕ್ಕೆ ಸ್ವಲ್ಪ ಸಾವಕಾಶವಾಯಿತು. ಮಿಸ್ ಡೇವಿಡ್‌ಸನ್‌ರವರು ಬಹಳ ಆಯಾಸದಿಂದ ವಿಶ್ರಮಿಸಿಕೊಳ್ಳುವುದಕ್ಕೆ ಕೂತುಕೊಳ್ಳಲು ಬಲವಾದ ನಿದ್ರೆಯು ಬಂದಿತು. ಅವರು ಬಂದು ಇವರು ನಿದ್ರೆ ಮಾಡುವುದನ್ನು ನೋಡಿ ಅವರಿಗೆ ಎಚ್ಚರವಾದ ಮೇಲೆ ಎಲ್ಲಾ ವಿದ್ಯಮಾನಗಳನ್ನೂ ಕೇಳಿ ಅನುತಾಪಪಟ್ಟು ಸಹಾಯ ಮಾಡಿದರು.

ಪಾಠಶಾಲೆಯನ್ನು ಕಟ್ಟಲು ಲಭ್ಯವಾದ ಸಹಾಯ.—ಬ್ರುಕ್ಲಿನ್ ಪಟ್ಟಣದ ಮೆ|| ಪೋರ್ಟರ್ ಎಂಬುವರು ನಮ್ಮ ಸ್ಕೂಲ್ ಕಟ್ಟಡಕ್ಕೋಸ್ಕರ ಉದಾರವಾಗಿ ಸಹಾಯಮಾಡಿದರು. ಈ ಸಹಾಯದ ಬಲದಿಂದ ಕಟ್ಟಡವನ್ನು ಉಪಕ್ರಮಿಸಿದೆನು. ಅವರು ಕೊಟ್ಟ ದ್ರವ್ಯವು ಖರ್ಚಾಯಿತು. ಹೆಚ್ಚು ದ್ರವ್ಯವು ಬೇಕಾಯಿತು. ಒಂದು ವಾಯಿದೆಯನ್ನು ಮಾಡಿಕೊಂಡು 1,200 ರೂಪಾಯನ್ನು ಸಾಲಮಾಡಿ ಕಟ್ಟಡದ ಕೆಲಸವನ್ನು ನಡೆಸುತ್ತಾ ಬಂದೆನು. ವಾಯಿದೆಯು ಪೂರೈಸಿತು. ನಿರೀಕ್ಷಿಸಲ್ಪಟ್ಟ ಸಹಾಯವು ಯಾವುದೂ ಬರಲಿಲ್ಲ. ಸಾಲ ತೀರಿಸತಕ್ಕ ದಿನವು ಬಂದಿತು. ಮಾತಿಗೆ ತಪ್ಪುವ ಕಾಲವು ಬಂದಿತಲ್ಲಾ ಎಂದು ಯೋಚನೆ ಮಾಡುತ್ತಿದ್ದೆನು. ಒಳ್ಳೇ ಕೆಲಸ ಮಾಡತಕ್ಕವರಿಗೆ ದೇವರ ಸಹಾಯವು ಉಂಟಾಗುವುದೆಂದು ನನಗೆ ಒಂದು ನಂಬಿಕೆಯು ಇದ್ದಿತು. ಈ ನಂಬಿಕೆಗೆ ಭಂಗಬರುವಂತೆ ತೋರಿತು. ಹೀಗೆಯೇ ವಿಚಾರಪರನಾಗಿ ತಾಪತ್ರಯ ಪಡುತ್ತಿದ್ದೆನು. ಅಷ್ಟರಲ್ಲಿ ಟಪಾಲು ಬಂದಿತು. ಆ ಟಪಾಲಿನಲ್ಲಿ 16,000 ರೂಪಾಯಿನ ಹುಂಡಿಯೊಂದು ಬಂದಿತು. ಮಿಸ್ ಡೇವಿಡ್‌ಸನ್‌ರವರು ಬೋಸ್ಟನ್ ಪಟ್ಟಣದ ಇಬ್ಬರು ದೊರೆಸಾನಿಯರನ್ನು ಆಶ್ರಯ ಮಾಡಿ ಅವರಿಂದ ಈ ಕೆಲಸಕ್ಕೆ ಈ ದ್ರವ್ಯವು ಒದಗುವಂತೆ ಮಾಡಿದರು. ಕಾಲಕ್ಕೆ ಸರಿಯಾಗಿ ಇಷ್ಟು ದ್ರವ್ಯವು ಬರುವುದೆಂದು ನಾನು ನಿರೀಕ್ಷಿಸಿರಲಿಲ್ಲ. ಹೀಗೆ ಹಠಾತ್ತಾಗಿ ದ್ರವ್ಯಲಾಭವಾದದ್ದನ್ನು ನೋಡಿದ ಕೂಡಲೆ ದೇವರ ಸಹಾಯವು ನನಗೆ ಇರುವುದೆಂಬದಾಗಿಯೂ, ಈ ಪಾಠಶಾಲೆಯ ಕಟ್ಟಡವು ಪೂರೈಸಲ್ಪಡುವುದೆಂಬದಾಗಿಯೂ ನಂಬಿಕೆಯುಂಟಾಯಿತು. ಈ ದ್ರವ್ಯವು ಖರ್ಚಾಯಿತು. ಕಟ್ಟಡವು ಪೂರೈಸಲಿಲ್ಲ. ಪುನಃ ದ್ರವ್ಯವಿಲ್ಲದೆ ತಾಪತ್ರಯವು ಉಂಟಾಯಿತು. ಹೀಗಿರುವಾಗ್ಯೆ ಮೊದಲಿನಲ್ಲಿ ಸಹಾಯಮಾಡಿದ ಇಬ್ಬರು ದೊರೆಸಾನಿಯರು ಈ ಕಟ್ಟಡವು

ಪೂರೈಸಲ್ಪಡಲೆಂದು 18,000 ರೂಪಾಯಿಗಳನ್ನು ಕಳುಹಿಸಿದರು. ಆಗ ನನ್ನ ತಾಪ ತ್ರಯಗಳು ಹರಿದವು. ಕಟ್ಟಡದ ಕೆಲಸವು ಸಮರ್ಪಕವಾಗಿ ನಡೆಯಿತು. ಈ ಕಟ್ಟಡವು ಪೂರೈಸುವುದರೊಳಗಾಗಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿತು. ಬೇರೆ ಕಟ್ಟಡಗಳು ಬೇಕಾದವು. ಮೇಲೆ ಹೇಳಿದ ದೊರಸಾನಿಯರು ತಾವು ಕೊಟ್ಟ ದ್ರವ್ಯವು ಸಫಲವಾಯಿತೆಂದು ಸಂತೋಷಪಟ್ಟು ಎಷ್ಟು ವಿದ್ಯಾರ್ಥಿಗಳು ಹೆಚ್ಚಾಗಿ ಬರುವರೋ ಅಷ್ಟು ಕಟ್ಟಡವನ್ನು ಹೆಚ್ಚಿಸಿಕೊಳ್ಳಬಹುದೆಂದು ಹೇಳಿ ವರ್ಷಕ್ಕೆ 18,000 ರೂ. ಪ್ರಕಾರ 14 ವರುಷಗಳು ಕೊಟ್ಟರು. ಈ ದ್ರವ್ಯವನ್ನು ವಿನಿಯೋಗಿಸುವುದರಲ್ಲಿ ನಾನು ಬಹಳ ಜಾಗರೂಕನಾಗಿದ್ದೆನು. ನಮ್ಮ ಪಾಠಶಾಲೆಯ ವಿದ್ಯಾರ್ಥಿಗಳಲ್ಲಿ ಬಡವರಾದವರು ಕಟ್ಟಡದ ಕೆಲಸಕ್ಕೆ ಸಹಾಯಮಾಡುತ್ತಾ ಬಂದರು. ನಾನೂ ಅವರ ಜೊತೆಯಲ್ಲಿ ಕೆಲಸಮಾಡುತ್ತಿದ್ದೆನು. ಆದಿಭಾಗದಲ್ಲಿ ಕೆಲಸಮಾಡುವುದು ಗೌರವಕ್ಕೆ ಕಡಮೆ ಎಂಬ ಭಾವನೆಯು ಕೆಲವರಿಗೆ ಉಂಟಾಗಿತ್ತು. ಕ್ರಮಕ್ರಮವಾಗಿ ಈ ಭಾವನೆಯು ಹೋಯಿತು. ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಹೇಗೋ ಹಾಗೆ ಕೆಲಸಗಳಲ್ಲಿಯೂ ನಿಪುಣರಾಗುತ್ತಾ ಬಂದರು. ವಿದ್ಯಾಭ್ಯಾಸದಿಂದ ಉಂಟಾಗುತ್ತಿದ್ದ ಲಾಭಕ್ಕಿಂತಲೂ ಇವರು ಕಲಿತ ಕೈಗಾರಿಕೆಯಿಂದ ಹೆಚ್ಚು ಲಾಭವು ಬರುವುದಕ್ಕೆ ಉಪಕ್ರಮವಾಯಿತು. ವಿದ್ಯಾಭ್ಯಾಸವು ಎಷ್ಟು ಗೌರವವಾದದ್ದೆಂದು ಭಾವಿಸಲ್ಪಟ್ಟಿತ್ತೋ ಕೆಲಸಮಾಡುವುದು ಅದಕ್ಕಿಂತಲೂ ಹೆಚ್ಚು ಗೌರವವುಳ್ಳದ್ದೆಂದು ಭಾವಿಸಲ್ಪಡುವುದಕ್ಕೆ ಪ್ರಾರಂಭವಾಯಿತು.

ಕರೀವಲಯ.—ನಾವು ವಾಸವಾಗಿದ್ದ ಪ್ರಾಂತ್ಯಕ್ಕೆ ಕರೀವಲಯವೆಂದು ಹೆಸರಿಟ್ಟಿದ್ದರು. ಕರೀ ಜನಗಳು ದಾಸತ್ವದಿಂದ ನಿವಾರಣೆಮಾಡಲ್ಪಟ್ಟು 16 ವರುಷಗಳಾಗಿದ್ದವು. ಈ ಕರೀ ಜನಗಳಿಗೆ ನೀಗ್ರೊ ಜನಗಳೆಂಬ ಹೆಸರು ಇದ್ದಿತು. ಅವರಿಗೆ ವಿದ್ಯಾಭ್ಯಾಸ ಮಾಡಿಸಕೂಡದೆಂದು ಏರ್ಪಾಟು ಇದ್ದಿತು. ಅವರಿಗೆ ಓನಾಮಗಳನ್ನು ಹೇಳಿಕೊಟ್ಟವರಿಗೆ ದಾಗ್ದಂಡನೆಯಾಗುತ್ತಿತ್ತು. ಇದಲ್ಲದೆ ಅವರಿಗೆ ಬಹಿಷ್ಕಾರವೂ ಹಾಕಲ್ಪಡುತ್ತಿತ್ತು. ಹದಿನಾರು ವರುಷಗಳಲ್ಲಿ ಈ ಭಾಗದಲ್ಲಿ ಆದ ವ್ಯತ್ಯಾಸವನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ನೀಗ್ರೊ ಜನಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸಕೂಡದೆಂಬ ನಿಷೇಧವು ಈ ಹದಿನಾರು ವರುಷಗಳಲ್ಲಿ ಪರಿಹಾರವಾದದ್ದಲ್ಲದೆ ವಿದ್ಯಾಭ್ಯಾಸಕ್ಕೆ ಅವರು ಪಾತ್ರರೆಂಬದಾಗಿಯೂ, ಅವರಿಗೋಸ್ಕರ

ಕಟ್ಟಲ್ಪಡತಕ್ಕ ಪಾಠಶಾಲೆಗಳು ಉದಾರವಾದ ಸಹಾಯಕ್ಕೂ ಪಾತ್ರವಾದವುಗಳೆಂಬದಾಗಿಯೂ ಬಿಳೀ ಜನಗಳಲ್ಲಿಯೂ ಅಭಿಪ್ರಾಯವು ಹುಟ್ಟಿತು. ಇದು ದೈವಸಂಕಲ್ಪವೋ, ಕರೀ ಜನಗಳ ಅದೃಷ್ಟವೋ, ಅಥವಾ ಕಾಲಮಹಿಮೆಯೋ ಹೇಳುವುದಕ್ಕಾಗುವುದಿಲ್ಲ. ಈ ಮೂರು ಕಾರಣಗಳ ಸಂಯೋಗವು ನಮ್ಮ ಪುಣ್ಯಪರಿಪಾಕಕ್ಕೆ ಕಾರಣವಾಗಿರಬಹುದೆಂದು ನಾನು ಭಾವಿಸಿದೆನು.

ಹೊಸ ಕಟ್ಟಡ.—ನಮ್ಮ ಪಾಠಶಾಲೆಗೆ ವಿಶಾಲವಾದ ಭಾರೀ ಕಟ್ಟಡ ಒಂದನ್ನು ಕಟ್ಟಬೇಕಾಯಿತು. ಇದಕ್ಕೆ ಸ್ವಲ್ಪ ಸಹಾಯವೂ ಒದಗಿತು. ಬೀಳಿ ಜನಗಳೂ, ಕರೀ ಜನಗಳೂ ಎಲ್ಲರೂ ಭೇದಭಾವವನ್ನು ಬಿಟ್ಟು ಈ ಕಟ್ಟಡಕ್ಕೆ ಸಹಾಯ ಮಾಡಲು ಉಪಕ್ರಮಿಸಿದರು. ಶಂಕುಸ್ಥಾಪನೆಯ ಕಾಲವು ಬಂದಿತು. ಅಸ್ತಿಭಾರದ ಕಲ್ಲಿನ ಕೆಳಗೆ ಜ್ಞಾಪಕಾರ್ಥವಾಗಿ ಜನಗಳು ತಮಗೆ ಇಷ್ಟವಾದ ಪದಾರ್ಥಗಳನ್ನು ಇಡುವ ಸಂಪ್ರದಾಯವಿದ್ದಿತು. ಕರೀ ಜನಗಳೂ, ಬಿಳೀ ಜನಗಳೂ ಇಬ್ಬರೂ ಸೇರಿ, ಅನೇಕ ಪದಾರ್ಥಗಳನ್ನು ತಂದು ಅಸ್ತಿಭಾರದ ಕಲ್ಲಿನ ಕೆಳಗೆ ಇಟ್ಟರು. ಆ ಸಂಸ್ಥಾನದ ವಿದ್ಯಾಭ್ಯಾಸದ ಸೂಪರಿಂಟೆಂಡೆಂಟರಾದ ದಿ ಆನರಬಲ್ ವಾಡಿ ಥಾಂಪರ್‌ರವರು ಈ ಪಾಠಶಾಲೆಗೆ ಮಂಗಳವಾಗಲೆಂದು ದೇವರನ್ನು ಪ್ರಾರ್ಥಿಸಿ, ಅಲ್ಲಿ ಸೇರಿದ ಮಹಾಜನಗಳ ಎದುರಿಗೆ ಶಂಕುಸ್ಥಾಪನೆಯನ್ನು ಮಾಡಿದರು.

ಕ್ಲೇಶ.—ಈ ಕಟ್ಟಡಕ್ಕೆ ಅಸ್ತಿಭಾರವು ಹಾಕಲ್ಪಡುವಾಗ್ಯೆ, ಮುಂದೆ ಬರುವ ಕಷ್ಟಗಳು ತೋರಲಿಲ್ಲ. ಎಲ್ಲರೂ ಉತ್ಸಾಹಶಾಲಿಗಳಾಗಿದ್ದೆವು. ಕಟ್ಟಡದ ಕೆಲಸವು ಉಪಕ್ರಮವಾದ ಮೇಲೆ ಈ ಕಟ್ಟಡಕ್ಕಾಗಿ ಶೇಖರಿಸಲ್ಪಟ್ಟಿದ್ದ ದ್ರವ್ಯವು ಸಾಲದೆ ಹೋಯಿತು. 'ಮನೆ ಕಟ್ಟಿನೋಡು, ಮದುವೆ ಮಾಡಿನೋಡು' ಎಂಬ ಗಾಥೆಯು ಸ್ಮೃತಿಪಥಕ್ಕೆ ಬಂದಿತು. ಕೆಲಸಗಾರರಿಂದ ಬಿಲ್ಲುಗಳು ಬರುವುದಕ್ಕೆ ಉಪಕ್ರಮವಾದವು. ನಮ್ಮಲ್ಲಿದ್ದ ಹಣವು ಮುಗಿದುಹೋಯಿತು. ಸಾಲ ಹುಟ್ಟುವುದೂ ಕೂಡ ಕಷ್ಟವಾಯಿತು. ಈ ತಾಪತ್ರಯದಿಂದ ದಿಕ್ಕುತೋರದೆ ಕ್ಲೇಶಪಡುತ್ತಿದ್ದೆನು. ವ್ಯಸನದಿಂದ ನಿದ್ರೆಯಿಲ್ಲದೆ ಬೆಳಗಿನ ಜಾವದವರೆಗೂ ಹಾಸಿಗೆಯಲ್ಲಿ ಉರುಳಾಡುತ್ತಿದ್ದೆನು. ಬಿಳೀ ಜನಗಳ ವಿದ್ಯಾಭ್ಯಾಸಕ್ಕೆ ಬೇಕಾದ ಏರ್ಪಾಡುಗಳಿದ್ದುವು. ನಮ್ಮ ಜನಗಳಿಗೆ ಇಂಥಾ ಏರ್ಪಾಟುಗಳಿರಲಿಲ್ಲ. ಆತ್ಮಾವಲಂಬನಕ್ಕೆ ಸಾಧಕವಾದ ವಿದ್ಯಾಭ್ಯಾಸಕ್ಕೂ, ಕೈಗಾರಿಕೆಗಳ ಅಭ್ಯಾಸಕ್ಕೂ ತಕ್ಕ ಏರ್ಪಾಡನ್ನು ನಾವು ಮಾಡಿಕೊಳ್ಳದೆ ಇದ್ದರೆ,

ದಾಸತ್ವವು ವಜಾ ಮಾಡಲ್ಪಟ್ಟಾಗ್ಯೂ ನಾವು ದಾಸಾನುದಾಸರಾಗಿರಬೇಕಾಗುತ್ತ ದೆಂದು ನನಗೆ ತೋರಿತು. ಇದಕ್ಕಾಗಿ ಈ ಪ್ರಯತ್ನವನ್ನು ಮಾಡಿದೆನು. ಆದರೆ ಇದು ಪೂರ್ತಿಯಾಗಿ ನೆರವೇರುವ ಸಂಭವವು ತೋರಲಿಲ್ಲ. ಬಿಳೀ ಜನಗಳು ಎಂಥಾ ದೊಡ್ಡ ಕೆಲಸಗಳನ್ನು ಮಾಡಿದಾಗ್ಯೂ ಅವರ ಪ್ರಯತ್ನಗಳು ಸಫಲವಾಗುತ್ತಿದ್ದವು. ನಾನು ಮಾಡತಕ್ಕ ಪ್ರಯತ್ನಗಳಿಗೆ ಪೂರ್ಣಫಲವಾಗುವಂತೆ ತೋರಿಬರಲಿಲ್ಲ. ಇದ ರಿಂದ ನನಗೆ ತುಂಬಾ ವ್ಯಾಕುಲ ಉಂಟಾಯಿತು. ಕೆಲವು ಕಾಲಗಳಲ್ಲಿ ಈ ವ್ಯಾಕುಲ ದಿಂದ ದೇಹವನ್ನೇ ಬಿಡುವ ಕಾಲವು ಬರಬಹುದೆಂದು ತೋರುತ್ತಿದ್ದಿತು.

ನಾಣ್ಯ.—ಟಸ್ಕೆಗಿ ಪಟ್ಟಣಕ್ಕೆ ನಾನು ಬರುವಾಗ್ಗೆ ಮೆ|| ಕ್ಯಾಂಬೆಲ್‌ರವರು ನನ್ನಲ್ಲಿ ಪುತ್ರವಾತ್ಸಲ್ಯವನ್ನಿಟ್ಟು ಒಂದು ಹಿತೋಪದೇಶವನ್ನು ಮಾಡಿದ್ದರು. ನಾಣ್ಯ ವನ್ನು ಕಳೆದುಕೊಳ್ಳುವುದಕ್ಕಿಂತಲೂ ಪ್ರಾಣವನ್ನು ಕಳೆದುಕೊಳ್ಳುವುದು ಮೇಲೆಂದು ಅವರು ಹೇಳಿದ್ದರು. ಈಗ ಪ್ರಾಣವೂ, ನಾಣ್ಯವೂ ಎರಡೂ ಹೋಗುವ ಕಾಲವು ನನಗೆ ಪ್ರಾಪ್ತವಾಯಿತು. ಅನೇಕ ಸಾವಿರ ರೂಪಾಯಿಗಳ ಬಿಲ್ಲುಗಳು ಒಂದಾಗು ತ್ತಲೂ ಒಂದು ಬರುವುದಕ್ಕೆ ಉಪಕ್ರಮವಾದವು. ಟಸ್ಕೆಗಿ ಪಟ್ಟಣದಲ್ಲಿ ಅನೇಕ ಜನರಿಂದ ಸ್ವಲ್ಪಸ್ವಲ್ಪ ಸಾಲವನ್ನು ತೆಗೆದು ಈ ಬಿಲ್ಲುಗಳ ಹಣವನ್ನು ಕೊಡುವುದಕ್ಕೆ ಉಪಕ್ರಮವಮಾಡಿದೆನು. ಈ ಪಾಠಶಾಲೆಯ ಕೆಲಸಗಳನ್ನು ಸಮರ್ಪಕವಾಗಿ ನಡೆಸಿ ನಮ್ಮ ಮೆಹನತ್ತಿಗೆ ಅಪಕೀರ್ತಿಯು ಬರದಂತೆ ಮಾಡುವುದರ ಪ್ರಯತ್ನವನ್ನು ಮಾಡಿ ದೆನು. ಸಾಲಗಾರರ ಸಾಲವನ್ನು ತೀರಿಸಿ ನಾಣ್ಯವನ್ನು ಉಳಿಸಿಕೊಳುತ್ತಾ ಬಂದೆನು. ಆದರೆ ಚಿಲ್ಲರೇ ಸಾಲಗಾರರ ಸಾಲವನ್ನು ಕಾಲಕ್ಕೆ ಸರಿಯಾಗಿ ತೀರಿಸಿ ನಾಣ್ಯವನ್ನು ಉಳಿಸಿಕೊಳ್ಳುವುದು ಬಹಳ ಕಷ್ಟವಾಯಿತು.

ದೈವಾನುಗ್ರಹ.—ಒಂದಾನೊಂದು ಕಾಲದಲ್ಲಿ ಮಾತಿಗೆ ತಪ್ಪಿ ನಾಣ್ಯವನ್ನು ಕಳೆದುಕೊಳ್ಳುವ ಸಂಭವವು ಬಂದಿತು. ಆಗ ಬಹುಕಾಲ ಯೋಚಿಸಿ ಜನರಲ್ ಆರಮ್‌ಸ್ಟ್ರಾಂಗರವರ ಬಳಿಗೆ ಹೋಗಿ ನಾನು ಮಾಡಿರುವ ಕೆಲಸಗಳನ್ನೆಲ್ಲಾ ಅವರಿಗೆ ವಿಜ್ಞಾಪಿಸಿ ನನಗೆ ಉಂಟಾಗಿದ್ದ ಕಷ್ಟವನ್ನು ಶೃತಪಡಿಸಿದೆನು. ಅವರು ನನ್ನ ಕಷ್ಟ ವನ್ನು ತಪ್ಪಿಸುವುದಕ್ಕೋಸ್ಕರ ತಮ್ಮ ಆಸ್ತಿಯನ್ನೆಲ್ಲಾ ನನ್ನ ಸ್ವಾಧೀನಪಡಿಸಿದರು. ತಾವು ಮಾಡಿದ ಸಹಾಯವು ಯಾರಿಗೂ ತಿಳಿಯಕೂಡದೆಂದು ಆಜ್ಞೆಮಾಡಿದರು. ಈ ಆಜ್ಞೆಯನ್ನು ನೆರವೇರಿಸುವುದಕ್ಕೋಸ್ಕರ ಅವರು ಮಾಡಿದ ಉದಾರವಾದ ಸಹಾ ಯವನ್ನು ನಾನು ರಹಸ್ಯವಾಗಿ ಇಟ್ಟುಕೊಂಡಿದ್ದೆನು.

ವಿವಾಹ.—1882 ನೇ ಇಸವಿಯಲ್ಲಿ ಮಿಸ್ ಫ್ಯಾನಿ ಸ್ಮಿತ್ ಎಂಬಾಕೆಯನ್ನು ನಾನು ವಿವಾಹ ಮಾಡಿಕೊಂಡೆನು. ಟಸ್ಕೆಗಿ ಪಟ್ಟಣದಲ್ಲಿ ನಾವು ಸಂಸಾರಮಾಡುವುದಕ್ಕೆ ಉಪಕ್ರಮಿಸಿದೆವು. ನನ್ನ ಹೆಂಡತಿಯು ಹ್ಯಾಂಪ್ಟನ್ ಇನ್‌ಸ್ಟಿಟ್ಯೂಟಿನಲ್ಲಿ ಬಿ. ಎ. ಪರೀಕ್ಷೆಯನ್ನು ಕೊಟ್ಟಿದ್ದಳು. ನಮ್ಮ ಪಾಠಶಾಲೆಯಲ್ಲಿ ನಾಲ್ಕು ಜನ ಪಾಠಕರು ಇದ್ದರು. ಅವರಿಗೆ ಭೋಜನಕ್ಕೆ ನಮ್ಮ ಮನೆಯಲ್ಲಿಯೇ ಏರ್ಪಾಟನ್ನು ಮಾಡಿದೆನು. ನನ್ನ ಹೆಂಡತಿಯು ನನ್ನ ಪಾಠಶಾಲೆಯ ಮೇಲ್ವಿಚಾರಣೆಯಲ್ಲಿ ತುಂಬಾ ಮೆಹನತ್ತನ್ನು ಮಾಡುತ್ತಾ, ನನ್ನ ವಿದ್ಯಾರ್ಥಿಗಳಲ್ಲಿಯೂ, ನನ್ನ ಸಹಾಯೋಪಾಧ್ಯಾಯರುಗಳಲ್ಲಿಯೂ ಮಾತೃನಿರ್ವಿಶೇಷವಾದ ಪ್ರೀತಿಯನ್ನಿಟ್ಟು ಆದರಿಸುತ್ತಿದ್ದಳು. ಪೋರ್ಷಿಯಾ ವಾಷಿಂಗ್‌ಟನ್ ಎಂಬ ಒಂದು ಮಗುವನ್ನು ಹೆತ್ತು, 1884 ರಲ್ಲಿ ಆಕೆಯು ಸ್ವರ್ಗಸ್ಥಳಾದಳು. ನಾವಿಬ್ಬರೂ ಈ ಪಾಠಶಾಲೆಯಿಂದ ನಮ್ಮ ಜನಗಳು ಉದ್ಧರಿಸಲ್ಪಡಬೇಕೆಂದು ಅಹೋರಾತ್ರಿಯಲ್ಲಿಯೂ ತುಂಬಾ ಕಷ್ಟಪಟ್ಟು ಕೆಲಸಮಾಡುತ್ತಿದ್ದೆವು. ನಮ್ಮ ಮೆಹನತ್ತಿಗೆ ಅನುರೂಪವಾದ ಫಲವು ಉಂಟಾಗುವುದರೊಳಗಾಗಿ ಈಕೆಯು ಕಾಲಾಧೀನಳಾದಳು.

ಅಧ್ಯಾಯ ೭

ಉದ್ಯೋಗ.—ಟಸ್ಕೆಗಿ ಪಟ್ಟಣಕ್ಕೆ ಬಂದಾರಭ್ಯ ನನ್ನ ವಿದ್ಯಾಭ್ಯಾಸಕ್ರಮವು ತುಂಬಾ ಪ್ರಯೋಜನಕಾರಿಯಾಗಿ ವಿದ್ಯಾರ್ಥಿಗಳ ಬುದ್ಧಿಗೂ, ಕೈಗಳಿಗೂ ಎರಡಕ್ಕೂ ಕೆಲಸಗಳು ಕೊಡಲ್ಪಟ್ಟವು. ಜಮೀನನ್ನು ಸಾಗುವಳಿ ಮಾಡುವುದೂ, ಮನೆಯ ಕೆಲಸಗಳನ್ನು ಮಾಡುವುದೂ, ಅವರವರ ಪಾಠಶಾಲೆಗಳನ್ನೂ, ವಿದ್ಯಾನಿಲಯಗಳನ್ನೂ ಅವರೇ ಕಟ್ಟಿಕೊಳ್ಳುವುದೂ, ಓದುಬರಹವನ್ನು ಕಲಿಯುವುದೂ, ಇವುಗಳೆಲ್ಲಾ ಕಡ್ಡಾಯವಾಗಿ ಕಲಿಸಲ್ಪಡುತ್ತಾ ಬಂದವು. ಕೆಲಸಮಾಡತಕ್ಕವರು ತಮ್ಮ ಕೆಲಸವನ್ನು ಲಕ್ಷಣವಾಗಿ ಮಾಡುವುದರಲ್ಲಿ ಶಿಕ್ಷೆಯನ್ನು ಹೊಂದುತ್ತಾ ಬಂದರು. ಶ್ರದ್ಧೆಯಿಂದ ಕೆಲಸಮಾಡುವುದೂ, ಒಬ್ಬರಿಗಿಂತ ಇನ್ನೊಬ್ಬರು ಚೆನ್ನಾಗಿ ಕೆಲಸಮಾಡಬೇಕೆಂಬ ಆಸೆಯುಳ್ಳವರಾಗಿರುವುದೂ, ಪ್ರೀತಿಯಿಂದ ಕೆಲಸಮಾಡುವುದೂ ಇವುಗ

ಳೆಲ್ಲಾ ಆಚರಣೆಗೆ ಬಂದವು. ಕೆಲಸಮಾಡುವುದರಲ್ಲಿ ಅನೇಕ ತಿದ್ದುಪಾಟುಗಳನ್ನು ವಿದ್ಯಾರ್ಥಿಗಳಿಗೆ ಕಲಿಸಿದೆನು. ದೇಹಶಕ್ತಿಯ ಜೊತೆಗೆ ಪಂಚಭೂತಗಳ ಶಕ್ತಿಯೂ ಕೂಡ ಉಪಯೋಗಿಸಲ್ಪಡುವುದಕ್ಕೆ ಉಪಕ್ರಮವಾಯಿತು. ಗಾಳಿ, ನೀರು, ನೀರಿನ ಆವಿ, ವಿದ್ಯುಚ್ಛಕ್ತಿ ಮೊದಲಾದವುಗಳನ್ನು ದೇಹಶಕ್ತಿಯ ಜೊತೆಗೆ ಹೇಗೆ ಉಪಯೋಗಿಸಬಹುದೋ ಅದನ್ನು ಅವರಿಗೆ ಕಲಿಸುತ್ತಾ ಬಂದೆನು. ಪ್ರಥಮತಃ ಅನೇಕರು ವಿದ್ಯಾರ್ಥಿಗಳಿಂದ ಈ ರೀತಿ ಕೆಲಸಮಾಡಿಸುವುದು ತಪ್ಪೆಂದು ಹೇಳುವುದಕ್ಕೆ ಉಪಕ್ರಮಿಸಿದರು. ಆದರೆ ಹಾಗೆ ಹೇಳತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಕೆಲವು ದಿವಸ ನನ್ನ ವಿದ್ಯಾಭ್ಯಾಸಕ್ರಮಕ್ಕೆ ಅವಕಾಶ ಕೊಡಬೇಕೆಂದು ನಾನು ಪ್ರಾರ್ಥಿಸಿದೆನು. ವಿದ್ಯಾರ್ಥಿಗಳು ಮಾಡುವ ಕೆಲಸವು ಕಸಬುದಾರರು ಮಾಡುವ ಕೆಲಸವಷ್ಟು ಚೆನ್ನಾಗಿರುವುದಿಲ್ಲವೆಂಬದಾಗಿಯೂ, ಅಷ್ಟು ಬಲವಾಗಿ ಇರುವುದಿಲ್ಲವೆಂಬದಾಗಿಯೂ ಕೆಲವರು ತಿಳಿದುಕೊಂಡು ಇದ್ದರು. ಉದ್ಯೋಗದಲ್ಲಿ ಕೌಶಲ್ಯವು ಬರಬೇಕಾದರೆ ಉದ್ಯೋಗಮಾಡಿ ಅದನ್ನು ಪಡೆಯಬೇಕೆಂಬದಾಗಿಯೂ, ಕೆಲಸಮಾಡುವಾಗ್ಗೆ ತಪ್ಪುಗಳಿಗೆ ಅವಕಾಶವಾಗದಂತೆ ನೋಡಿಕೊಳ್ಳುತ್ತಾ ಬಂದರೆ ಯಾವ ಕೆಲಸವೂ ಕೆಟ್ಟುಹೋಗುವುದಿಲ್ಲವೆಂಬದಾಗಿಯೂ, ಕಟ್ಟಡಗಳು ಬಲವಾಗಿಯೂ, ಸುಂದರವಾಗಿಯೂ ಇರುವಂತೆ ನೋಡಿಕೊಳ್ಳುವ ಜವಾಬ್ದಾರಿಯು ನನಗೆ ಇರಲೆಂಬದಾಗಿಯೂ, ಬರೀ ಓದುಬರಹಗಳನ್ನು ಕಲಿಸುವುದಕ್ಕಿಂತ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಉದ್ಯೋಗಗಳಲ್ಲಿ ಆಸಕ್ತಿಯನ್ನುಂಟುಮಾಡುವುದು ಕರ್ತವ್ಯವೆಂಬದಾಗಿಯೂ ಹೇಳಿ, ವಿದ್ಯಾರ್ಥಿಗಳ ತಂದೆತಾಯಿಗಳಿಗೂ, ಇತರ ದೊಡ್ಡ ಮನುಷ್ಯರಿಗೂ ಪ್ರತ್ಯಯವನ್ನುಂಟುಮಾಡಿ, ವಿದ್ಯಾಭ್ಯಾಸ ಮಾಡಿಸುವುದರಲ್ಲಿ ಈ ವಿಧವಾದ ಏರ್ಪಾಟನ್ನು ಮಾಡಿದೆನು. ಕ್ರಮ ಕ್ರಮವಾಗಿ ನಾನು ಮಾಡಿದ ಏರ್ಪಾಟು ಸಮರ್ಪಕವಾದದ್ದೆಂದು ಎಲ್ಲರಿಗೂ ಗೊತ್ತಾಗುತ್ತಾ ಬಂದಿತು. ನನ್ನ ಪಾಠಶಾಲೆಗೆ ಬರುತ್ತಿದ್ದ ವಿದ್ಯಾರ್ಥಿಗಳು ಬಹಳ ಬಡವರಾಗಿದ್ದರು. ಅವರ ತಂದೆತಾಯಿಗಳು ಹತ್ತಿ, ಕಬ್ಬು, ಭತ್ತ ಮೊದಲಾದವುಗಳನ್ನು ಬೆಳೆಯತಕ್ಕ ಜಮೀನುಗಳಲ್ಲಿ ಕೆಲಸಮಾಡತಕ್ಕವರಾಗಿದ್ದರು. ಅವರ ಕಸಬನ್ನು ಅವರಿಗೆ ಕಲಿಸುವುದರಲ್ಲಿ ಮೆಹನತ್ತುಮಾಡಿಸುವುದೇ ಉತ್ತಮವೆಂದು ನನಗೆ ತೋರಿತು. ಅದೇ ರೀತಿಯಲ್ಲಿ ಮಾಡಿಸಿದೆನು. ಅವರ ಮನೆಗಳನ್ನು ಅವರು ಕಟ್ಟಿಕೊಳ್ಳುವಂತೆ ಮಾಡುವುದು ಆವಶ್ಯಕವೆಂದು ತೋರಿತು. ಆ ವಿಷಯವನ್ನು ಅವ

ರಿಗೆ ಸೂಚಿಸಿದ ಕೂಡಲೇ ಅವರು ಮನಃಪೂರ್ವಕವಾಗಿ ಒಪ್ಪಿದರು. ಹೀಗೆ ಮಾಡಿ ಸುತ್ತಾ ಬಂದದ್ದರಿಂದ ನನ್ನ ವಿದ್ಯಾರ್ಥಿಗಳು ವ್ಯವಸಾಯ ಮಾಡುವುದರಲ್ಲಿಯೂ, ತಮ್ಮ ತಮ್ಮ ಮನೆಗಳನ್ನು ಕಟ್ಟುವುದರಲ್ಲಿಯೂ, ಪಾಠಶಾಲೆಗಳನ್ನೂ, ವಿದ್ಯಾನಿಲಯಗಳನ್ನೂ ಕಟ್ಟುವುದರಲ್ಲಿಯೂ, ತಮ್ಮ ಕೆಲಸಗಳಿಗೆ ಉಪಯುಕ್ತವಾದ ಮುಟ್ಟುಗಳನ್ನೂ, ಯಂತ್ರಗಳನ್ನೂ ತಯಾರ್ಮಾಡುವುದರಲ್ಲಿಯೂ, ತಮ್ಮ ಬುದ್ಧಿಬಲಗಳ ಮತ್ತು ಬಾಹುಬಲಗಳ ಜೊತೆಯಲ್ಲಿ ನೀರು, ನೀರಿನ ಆವಿ, ವಿದ್ಯುಚ್ಛಕ್ತಿ ಮೊದಲಾಲಾದವುಗಳನ್ನು ಉಪಯೋಗಿಸುವುದರಲ್ಲಿಯೂ, ಯಂತ್ರಗಳನ್ನು ಉಪಯೋಗಿಸುವುದರಲ್ಲಿಯೂ ದಕ್ಷರಾದರು. ಹದಿನೆಂಟು ವರುಷಗಳು ಈ ರೀತಿಯಲ್ಲಿ ಕೆಲಸವನ್ನು ಮಾಡುತ್ತಾ, ಅದರ ಜೊತೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿಸುತ್ತಾ ಬಂದೆನು. ಸಾವಿರಾರು ಜನ ವಿದ್ಯಾರ್ಥಿಗಳು ಈ ರೀತಿಯಲ್ಲಿ ಶಿಕ್ಷಣವನ್ನು ಹೊಂದಿದರು. ನಮ್ಮ ಪಾಠಶಾಲೆಗೂ, ವಿದ್ಯಾರ್ಥಿಗಳಿಗೂ ಬೇಕಾದ ಕಟ್ಟಡಗಳು ನನ್ನ ವಿದ್ಯಾರ್ಥಿಗಳಿಂದ ಕಟ್ಟಲ್ಪಟ್ಟವು. ಪ್ಲಾನ್ ಬರೆಯುವುದು ಮೊದಲುಗೊಂಡು ವಿದ್ಯುಚ್ಛಕ್ತಿಯ ಏರ್ಪಾಟುಗಳನ್ನು ಮಾಡುವವರೆಗೂ ಯಾವ ಕೆಲಸವನ್ನು ಬೇಕಾದರೂ ಪರಾಪೇಕ್ಷೆ ಇಲ್ಲದೆ ಮಾಡುವುದಕ್ಕೆ ನನ್ನ ವಿದ್ಯಾರ್ಥಿಗಳಲ್ಲಿ ಅನೇಕರು ಶಕ್ತರಾದರು. ಇವರ ಸಾಮರ್ಥ್ಯದಿಂದಲೂ, ಮೆಹನತ್ತಿನಿಂದಲೂ ನನ್ನ ಪಾಠಶಾಲೆಯ ಸಂಬಂಧದಲ್ಲಿ ನಲವತ್ತು ಕಟ್ಟಡಗಳು ಕಟ್ಟಲ್ಪಟ್ಟವು. ಈ ಕಟ್ಟಡಗಳನ್ನು ಕಟ್ಟುವುದಕ್ಕೆ ಸಂಬಂಧಪಟ್ಟ ಚಿಲ್ಲರೆ ಉದ್ಯೋಗಗಳಲ್ಲಿ ಅನೇಕರು ಸಮರ್ಥರಾದರು. ನನ್ನ ಪ್ರಯತ್ನವನ್ನು ನೋಡಿ ವಿದ್ಯಾರ್ಥಿಗಳಿಂದ ಇಂಥಾ ಕೆಲಸಗಳನ್ನು ಮಾಡಿಸಕೂಡದೆಂದು ಹೇಳುತ್ತಿದ್ದವರು ತಾವು ತಪ್ಪು ಮಾಡಿದ್ದಾಗಿಯೂ, ನನ್ನ ವಿದ್ಯಾಭ್ಯಾಸಕ್ರಮವೇ ಸರ್ವೋತ್ತಮವಾದದ್ದೆಂಬದಾಗಿಯೂ ಹೇಳಿ ನನ್ನನ್ನು ಶ್ಲಾಘಿಸಲು ಉಪಕ್ರಮಿಸಿದರು.

ಅಭಿಮಾನ.—ನನ್ನ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಪಾಠಶಾಲೆಯಲ್ಲಿ ಅಭಿಮಾನವು ಹೆಚ್ಚಿ ಪಾಠಶಾಲೆಗಾಗಿ ಕುರ್ಚಿ, ಮೇಜು ಮೊದಲಾದವುಗಳನ್ನೆಲ್ಲಾ ಅವರೇ ಮಾಡಿದರು. ಆ ಪದಾರ್ಥಗಳಲ್ಲಿ ಅವರಿಗೆ ಅಭಿಮಾನವು ಉಂಟಾಯಿತು. ಸ್ಕೂಲು ಕಟ್ಟಡದ ಗೋಡೆಗಳ ಮೇಲಾಗಲೀ, ಬೆಂಚು ಕುರ್ಚಿಗಳ ಮೇಲಾಗಲೀ ಪೆನ್ಸಿಲ್ ಗುರ್ತುಗಳು ಕೂಡ ಮಾಡಲ್ಪಡುತ್ತಲಿರಲಿಲ್ಲ. "ನಾವು ಕಟ್ಟಿದ ಕಟ್ಟಡ, ನಾವು ಮಾಡಿದ ಬೆಂಚು, ನಾವು ಮಾಡಿದ ಮೇಜು ಇವನ್ನು ಕೆಡಿಸಬಾರದು"

ಎಂಬ ಅಭಿಮಾನವು ಪ್ರತಿಯೊಬ್ಬ ವಿದ್ಯಾರ್ಥಿಗೂ ಉಂಟಾಯಿತು. ಈ ಅಭಿಮಾನ ದಿಂದ ಕಟ್ಟಡಗಳಲ್ಲಿಯಾಗಲೀ, ತಾವು ಉಪಯೋಗಿಸತಕ್ಕ ಸಾಮಾನುಗಳಲ್ಲಿಯೇ ಆಗಲಿ ಯಾವ ನ್ಯೂನತೆಯೂ ಇಲ್ಲದಂತೆ ಪ್ರತಿಯೊಂದು ಪದಾರ್ಥವೂ ಒಳ್ಳೆಯ ಸ್ಥಿತಿ ಯಲ್ಲಿರುವಂತೆ ನೋಡಿಕೊಳ್ಳುವುದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಆಸಕ್ತನಾ ದನು. ಪ್ರತಿಯೊಬ್ಬ ವಿದ್ಯಾರ್ಥಿಗೂ ಇದು "ನನ್ನ ಪಾಠಶಾಲೆ, ಇವುಗಳು ನನ್ನ ಪಾಠಶಾಲೆಯ ಸಾಮಾನುಗಳು, ಇವುಗಳು ಕೆಡದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ" ಎಂಬ ಅಭಿಮಾನವು ನಿಸರ್ಗವಾಗಿ ಹುಟ್ಟಿತು. ನನ್ನ ಪಾಠಶಾಲೆಯ ಕಟ್ಟಡಗಳನ್ನೂ, ನನ್ನ ಕೈಗಾರಿಕೆಯ ಕಾರ್ಖಾನೆಗಳನ್ನೂ ನನ್ನ ತೋಟವನ್ನೂ, ನನ್ನ ಸಾಗುವಳಿ ಕ್ರಮವನ್ನೂ, ನನ್ನ ವಿದ್ಯಾರ್ಥಿಗಳ ವ್ಯಾಸಂಗವನ್ನೂ ನೋಡಿದವರೆಲ್ಲರೂ ಇದು ನಿಜವಾದ ವಿದ್ಯಾಭ್ಯಾಸವೆಂಬದಾಗಿಯೂ, ಸ್ವಶಕ್ತಿಯಿಂದ ಬದುಕುವಂತೆ ಮಾಡುವುದೇ ವಿದ್ಯಾಭ್ಯಾಸಕ್ಕೆ ಮುಖ್ಯಲಕ್ಷಣವೆಂಬದಾಗಿಯೂ ಹೇಳುವುದಕ್ಕೆ ಉಪಕ್ರಮಿಸಿದರು.

ಇಟ್ಟಿಗೆಗಳು.—ಈ ಪಾಠಶಾಲೆಯ ಕಟ್ಟಡವನ್ನು ಉಪಕ್ರಮಮಾಡುವುದಕ್ಕೆ ಇಟ್ಟಿಗೆಗಳು ಬೇಕಾದವು. ನಮಗೆ ಬೇಕಾದ ಇಟ್ಟಿಗೆಗಳನ್ನು ನಾವೇ ಮಾಡಿಕೊಳ್ಳ ಬೇಕೆಂದು ಸಂಕಲ್ಪಮಾಡಿದೆವು. ಇಟ್ಟಿಗೆಗಳಿಗೆ ಬೇರೆ ಗಿರಾಕಿಯೂ ಕೂಡ ವಿಶೇಷ ವಾಗಿದ್ದಿತು. ಇವುಗಳನ್ನು ಮಾಡತಕ್ಕವರು ವಿಶೇಷವಾಗಿರಲಿಲ್ಲ. ಈ ಕೆಲಸವನ್ನು ಮಾಡುವುದರಲ್ಲಿ ನಮಗೆ ಅನುಭವವಿರಲಿಲ್ಲ. ಇದಲ್ಲದೆ ಈ ಕೆಲಸವು ಸುಲಭವಾಗಿರ ಲಿಲ್ಲ. ಕೆಲಸ ಮಾಡುವುದಕ್ಕೆ ವಿದ್ಯಾರ್ಥಿಗಳನ್ನು ಒಪ್ಪಿಸುವುದು ಕಷ್ಟವಾಗಿದ್ದಿತು. ಅನೇಕ ವಿದ್ಯಾರ್ಥಿಗಳು ಈ ಕೆಲಸ ಮಾಡಲು ಒಪ್ಪಲಿಲ್ಲ. ಮಣ್ಣಿಗೆ ನೀರನ್ನು ಹೊಯ್ದು ಅದನ್ನು ತುಳಿದು, ಮಂಡಿಯವರೆಗೆ ಕೆಸರಿನಲ್ಲಿ ನಿಂತು, ಕಸ ಕಡ್ಡಿ ಮೊದಲಾದ ಕಶ್ಮಲಗಳನ್ನು ತೆಗೆದು, ಮಣ್ಣನ್ನು ಹದಕ್ಕೆ ಇಳಿಸಿಕೊಂಡು, ಅಚ್ಚಿಗೆ ಕೊಟ್ಟು, ಅದನ್ನು ಒಣಗಿಸಿ, ಸುಟ್ಟು, ತಯಾರು ಮಾಡುವುದು ಕಷ್ಟವೆಂದು ತೋರಿತು. ಯಾವ ಕೆಲಸವು ಕಷ್ಟವಾದದ್ದೋ ಅದನ್ನು ಮಾಡುವುದರಲ್ಲಿ ವಿಶೇಷ ಮೆಹನತ್ತು ಮಾಡಬೇಕೆಂಬದಾಗಿಯೂ, ಕಷ್ಟವಿಲ್ಲದ ಕೆಲಸಗಳನ್ನು ಮಾಡುವುದರಲ್ಲಿ ಗೌರವವೇನೂ ಇರುವುದಿಲ್ಲವೆಂಬದಾಗಿಯೂ, ಕಷ್ಟವಾದ ಕೆಲಸವನ್ನು ಯಾರು ಬೇಜಾರು ಪಡದೆ ಮಾಡುವರೋ ಅವರು ಪ್ರಪಂಚದಲ್ಲಿ ಅತ್ಯುತ್ತಮವಾದ ಪದವಿಗೆ

ಬರುವರೆಂಬದಾಗಿಯೂ, ಉಪದೇಶ ಮಾಡುತ್ತಾ ವಿದ್ಯಾರ್ಥಿಗಳಿಗೆ ಈ ಕೆಲಸದಲ್ಲಿ ಆಸಕ್ತಿಯನ್ನು ಹುಟ್ಟಿಸುವುದಕ್ಕೆ ಪ್ರಯತ್ನಮಾಡಿದೆನು. ಈ ಪ್ರಯತ್ನವು ಸಫಲ ವಾಗಲಿಲ್ಲ. ಕೆಲವು ಜನ ವಿದ್ಯಾರ್ಥಿಗಳು ನಮ್ಮ ಪಾಠಶಾಲೆಯನ್ನು ಬಿಟ್ಟು ಹೊರಟು ಹೋದರು. ಆದಾಗ್ಯೂ ನಾನು ಭಯಪಡಲಿಲ್ಲ. ಎಷ್ಟು ಅಸಹ್ಯವಾಗಿದ್ದಾಗ್ಯೂ ಕೆಲಸಮಾಡುವುದರಲ್ಲಿ ಬೇಜಾರುಪಡತಕ್ಕವರು ಎಂದಿಗೂ ವೃದ್ಧಿಗೆ ಬರುವುದಿಲ್ಲವೆಂಬ ದಾಗಿಯೂ, ಬೇಜಾರಿಲ್ಲದೆ ಕೆಲಸಮಾಡತಕ್ಕವರು ಒಳ್ಳೆಯ ಸ್ಥಿತಿಗೆ ಬರುವರೆಂಬದಾ ಗಿಯೂ ಉಪದೇಶಮಾಡುತ್ತಾ ಬಂದೆನು. ಕ್ರಮಕ್ರಮವಾಗಿ ಅನೇಕ ವಿದ್ಯಾರ್ಥಿ ಗಳು ನಾನು ಹೇಳುವುದು ನಿಜವೆಂದು ತಿಳಿದುಕೊಂಡರು. ಇಟ್ಟಿಗೆಗಳನ್ನು ತಯಾರು ಮಾಡುವುದರಲ್ಲಿ ಮೆಹನತ್ತು ಮಾಡುವುದಕ್ಕೆ ಒಪ್ಪಿಕೊಂಡರು. ಇಟ್ಟಿಗೆಯನ್ನು ಮಾಡುವ ಕ್ರಮವು ನನಗೆ ಗೊತ್ತಾಗಿರಲಿಲ್ಲ. ನಮ್ಮಲ್ಲಿ ಯಾರಿಗೂ ಗೊತ್ತಿರಲಿಲ್ಲ. ಆದರೆ ಇಟ್ಟಿಗೆ ಮಾಡತಕ್ಕವರು ಮಾಡತಕ್ಕ ಕೆಲಸವನ್ನು ನೋಡಿದ್ದೆವು. ನೋಡಿದ ಮಾತ್ರದಿಂದಲೇ ಆ ಕೆಲಸವು ಸರಿಯಾಗಿ ಮಾಡುವುದಕ್ಕಾಗುವುದಿಲ್ಲವೆಂಬದಾಗಿಯೂ, ಪ್ರತಿಯೊಂದು ಕೆಲಸವನ್ನೂ ತಾವೇ ಮಾಡಿ ತಿಳಿದುಕೊಳ್ಳಬೇಕೆಂಬದಾಗಿಯೂ ಗೊತ್ತಾಯಿತು. ಬಹಳ ಶ್ರಮಪಟ್ಟು 25,000 ಇಟ್ಟಿಗೆಗಳನ್ನು ತಯಾರುಮಾಡಿ ಗೂಡಿಗೆ ಹಾಕಿದೆವು. ಇಟ್ಟಿಗೆ ಗೂಡನ್ನು ಕಟ್ಟುವುದರಲ್ಲಿ ನಮಗೆ ಅನುಭವವಿರಲಿಲ್ಲ. ಅದು ಬಿದ್ದುಹೋಯಿತು. ನಾವು ಮಾಡಿದ ಮೆಹನತ್ತು ವ್ಯರ್ಥವಾಯಿತು. ಈ ಕೆಲಸ ತಿಳಿದವರು ಯಾರೂ ಸಿಕ್ಕಲಿಲ್ಲ. ಪುನಃ ಪ್ರಯತ್ನವನ್ನು ಮಾಡಿದೆವು. ಪುನಃ 25,000 ಇಟ್ಟಿಗೆಗಳನ್ನು ಮಾಡಿ ಇನ್ನೊಂದು ಗೂಡನ್ನು ಹಾಕಿದೆವು. ಅದೂ ಕೆಟ್ಟುಹೋಯಿತು. ವಿದ್ಯಾರ್ಥಿಗಳು ಭಗ್ನಮನೋರಥರಾದರು. ನನ್ನ ಸಹಾಯೋ ಪಾಧ್ಯಾಯರಲ್ಲಿ ಕೆಲವರು ಸಹಾಯಕ್ಕೆ ಬಂದರು. ಮೂರನೇ ಆವರ್ತಿ ಎಲ್ಲರೂ ಸೇರಿ ಇಟ್ಟಿಗೆಗಳನ್ನು ಮಾಡಿ ಗೂಡನ್ನು ಹಾಕಿದೆವು. ಅದೂ ಕೆಟ್ಟುಹೋಯಿತು. ನನ್ನಲ್ಲಿದ್ದ ಹಣವೆಲ್ಲಾ ಖರ್ಚಾಯಿತು. ಇನ್ನೊಂದಾವರ್ತಿ ಪ್ರಯತ್ನ ಮಾಡುವುದಕ್ಕೆ ದ್ರವ್ಯ ಸಹಾಯವಿರಲಿಲ್ಲ. ನನ್ನ ಸಹಾಯೋಪಾಧ್ಯಾಯರೂ ಮತ್ತು ವಿದ್ಯಾರ್ಥಿಗಳೂ ಈ ಪ್ರಯತ್ನವನ್ನು ಬಿಡುವುದು ಉತ್ತಮವೆಂದು ಹೇಳಿದರು. ಹಾಗೆ ಬಿಡಲು ನನಗೆ ಇಷ್ಟವಿರಲಿಲ್ಲ. ಪ್ರಯತ್ನಮಾಡಬೇಕೆಂದು ಆಸೆ ಇದ್ದಿತು. ದುಡ್ಡಿಗೆ ಗತಿಯು ಇರ ಲಿಲ್ಲ. ನನ್ನಲ್ಲಿ ಒಂದು ಗಡಿಯಾರವಿದ್ದಿತು. ಅದನ್ನು ತೆಗೆದುಕೊಂಡು ಹೋಗಿ,

ಅಡವಿಟ್ಟು ನಲವತ್ತೈದು ರೂಪಾಯಿಗಳನ್ನು ತೆಗೆದುಕೊಂಡು ಬಂದೆನು. ಈ ದ್ರವ್ಯದ ಸಹಾಯದಿಂದ ಇನ್ನೊಂದಾವರ್ತಿ ಪ್ರಯತ್ನ ಮಾಡಬೇಕೆಂದು ಸಂಕಲ್ಪ ಮಾಡಿದೆನು. ವಿದ್ಯಾರ್ಥಿಗಳನ್ನು ಕರೆದು ಇನ್ನೊಂದು ಸಾರಿ ಪ್ರಯತ್ನಮಾಡಬೇಕೆಂದು ಹೇಳಿದೆನು. ಅವರಿಗೆ ಇಷ್ಟವಿರಲಿಲ್ಲ. ಆದಾಗ್ಯೂ ನನಗೋಸ್ಕರ ಒಪ್ಪಿದರು. ಹಿಂದೆ ತಪ್ಪುಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಈ ಕೆಲಸವು ಸರಿಯಾಗಿ ನಡೆಯುವುದಕ್ಕೆ ತಕ್ಕ ಉಪಾಯಗಳನ್ನು ಮಾಡಿದೆನು. ಗೂಡು ಕೆಟ್ಟುಹೋಗಲಿಲ್ಲ. ಇಟ್ಟಿಗೆಗಳು ಸರಿಯಾಗಿ ಸುಡಲ್ಪಟ್ಟವು. ನಮ್ಮ ಪ್ರಯತ್ನವು ಸಫಲವಾಯಿತು. ನನಗೂ, ನನ್ನ ವಿದ್ಯಾರ್ಥಿಗಳಿಗೂ ಆಗ ಉಂಟಾದ ಸಂತೋಷವನ್ನು ಊಹಿಸಿಕೊಳ್ಳಬಹುದೇ ಹೊರತು ಹೇಳುವುದಕ್ಕೂ, ಬರೆಯುವುದಕ್ಕೂ ಆಗುವುದಿಲ್ಲ. ಹೀಗಾದ ಕೂಡಲೇ ಬೇಜಾರನ್ನು ಹೊಂದಿದ್ದ ವಿದ್ಯಾರ್ಥಿಗಳೂ ಕೂಡ ಈ ಕೆಲಸ ಮಾಡುವುದಕ್ಕೆ ಬಂದರು. ನಮ್ಮ ಪಾಠಶಾಲೆಯಲ್ಲಿ ಇಟ್ಟಿಗೆ ಮಾಡುವುದೇ ಒಂದು ಮುಖ್ಯ ಕಸಬಾಯಿತು. ಕೊಂಚ ಕಾಲದಲ್ಲಿಯೇ 12 ಲಕ್ಷ ಇಟ್ಟಿಗೆಗಳನ್ನು ಸುಟ್ಟೆವು. ನಮ್ಮ ಕಟ್ಟಡಗಳಿಗೆ ಬೇಕಾದಷ್ಟು ಉಪಯೋಗಿಸಿಕೊಂಡೆವು. ಇವರಿಗೆ ಮಾರುವುದಕ್ಕೂ ಉಪಕ್ರಮಿಸಿದೆವು. ನಮ್ಮ ವಿದ್ಯಾರ್ಥಿಗಳೆಲ್ಲರೂ ಇಟ್ಟಿಗೆ ಮಾಡುವುದರಲ್ಲಿ ಅತ್ಯಂತ ಸಮರ್ಥರಾದರು.

ಲೇವಾದೇವಿ.—ಇಟ್ಟಿಗೆಗಳನ್ನು ನಾವು ಬಹಳ ಚೆನ್ನಾಗಿ ಮಾಡುತ್ತಾ ಬಂದೆವು. ದಕ್ಷಿಣ ದೇಶದಲ್ಲೆಲ್ಲಾ ನಮ್ಮ ಇಟ್ಟಿಗೆಗಳು ಒಳ್ಳೆಯವುಗಳೆಂದು ನಂಬಿಕೆಯುಂಟಾಯಿತು. ಅನೇಕ ಬಿಳೀ ಜನಗಳು ನಮ್ಮಿಂದ ಇಟ್ಟಿಗೆಗಳನ್ನು ಕೊಂಡುಕೊಳ್ಳುವುದಕ್ಕೆ ಬಂದರು. ಕರೀ ಜನಗಳಿಗೆ ವಿದ್ಯಾಭ್ಯಾಸ ಮಾಡಿಸಿದರೆ, ಅವರು ತಮ್ಮ ಉದ್ಯೋಗಗಳನ್ನು ಬಿಡುವರೆಂಬದಾಗಿ ಅನೇಕ ಬಿಳೀ ಜನಗಳು ತಿಳಿದುಕೊಂಡಿದ್ದರು. ಇವರ ಅಭಿಪ್ರಾಯವು ನನಗೆ ಗೊತ್ತಾಗಿದ್ದಿತು. ಉದ್ಯೋಗದಲ್ಲಿ ಉದಾಸೀನರಾಗದಂತೆ ವಿದ್ಯಾಭ್ಯಾಸ ಮಾಡಿಸುವುದೇ ಮುಖ್ಯ ಕರ್ತವ್ಯವೆಂದು ನಾನು ಭಾವಿಸಿದೆನು. ಈ ಭಾವನೆಗೆ ಅನುಸಾರವಾಗಿ ವಿದ್ಯಾಭ್ಯಾಸದ ಏರ್ಪಾಟುಗಳನ್ನು ಮಾಡಿದೆನು. ಇಟ್ಟಿಗೆಗಳನ್ನು ಚೆನ್ನಾಗಿ ಮಾಡಿ, ಬಿಕರಿಗೆ ಒದಗಿಸಿದ್ದರಿಂದ ಬಿಳೀ ಜನಗಳಿಗೂ ನಮಗೂ ವಿಶೇಷ ಬಳಿಕೆಯಾಯಿತು. ನಮಗೆ ಲೇವಾದೇವಿಗಳು ಬೆಳೆಯುವುದಕ್ಕೂ ಅವಕಾಶವಾಯಿತು. ಇದಕ್ಕೆ ಮುಂಚೆ ನಮಗೂ, ಬಿಳೀ ಜನ

ಗಳಿಗೂ ವಿಶೇಷ ಪ್ರೀತಿಯು ಇರಲಿಲ್ಲ. ಈಗ ಈ ಪ್ರೀತಿಗೂ, ಸೌಹಾರ್ದಕ್ಕೂ ಅವಕಾಶವಾಯಿತು. ನಮ್ಮ ಪಾಠಶಾಲೆಯಲ್ಲಿ ತಯಾರಾದ ಇಟ್ಟಿಗೆ ಮಾಡತಕ್ಕವರು ದಕ್ಷಿಣ ದೇಶದಲ್ಲಿ ಅನೇಕ ಪಟ್ಟಣಗಳಿಗೆ ಹೋಗಿರುವರು. ಇವರು ಹೋದ ಕಡೆಯಲ್ಲೆಲ್ಲಾ ಒಳ್ಳೇ ಹೆಸರನ್ನು ಸಂಪಾದಿಸಿ, ಈ ಭಾಗದಲ್ಲಿ ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕೆ ಕಾರಣಭೂತರೆಂದು ಗಣಿಸಲ್ಪಟ್ಟಿಧಾರೆ.

ಯೋಗ್ಯತೆ.—ಈ ಉದ್ಯೋಗವನ್ನು ನಾವು ಉಪಕ್ರಮಿಸಿದ್ದರಿಂದ ನಮಗೂ, ಬಿಳೀ ಜನಗಳಿಗೂ ತುಂಬಾ ಸ್ನೇಹವುಂಟಾಯಿತು. ಪ್ರೀತಿಗೂ, ಗೌರವಕ್ಕೂ, ಜಾತಿ, ಕುಲ, ಚರ್ಮದ ರಂಗು ಇವುಗಳು ಯಾವವೂ ಕಾರಣವಲ್ಲ. ಯೋಗ್ಯತೆಯುಳ್ಳವರೂ, ಚೆನ್ನಾಗಿ ಕೆಲಸಮಾಡತಕ್ಕವರೂ, ಪ್ರಾಮಾಣಿಕರೂ ಯಾವ ಜಾತಿಗೆ ಸೇರಿದ್ದಾಗ್ಯೂ ಪುರಸ್ಕಾರಕ್ಕೆ ಅರ್ಹರಾಗುವರು. ನೀಗ್ರೊ ಜನಗಳು ಕಟ್ಟಿರತಕ್ಕ ಮನೆಗಳು ಅನೇಕ ಇತರ ಮನೆಗಳಿಗಿಂತ ಹೆಚ್ಚಾದ ವಸತಿಯುಳ್ಳ ಮನೆಗಳೆಂದು ಗೊತ್ತಾಯಿತು. ನಮ್ಮ ಮೆಹನತ್ತು ವ್ಯವಸಾಯ ಮಾಡುವುದರಲ್ಲಿಯೂ, ಮನೆಗಳನ್ನು ಕಟ್ಟುವುದರಲ್ಲಿಯೂ, ಇಟ್ಟಿಗೆಗಳನ್ನು ಸುಡುವುದರಲ್ಲಿಯೂ ಮಾತ್ರವೇ ತೋರಿಸಲ್ಪಡಲಿಲ್ಲ. ರೈಲ್ ಗಾಡಿಗಳು, ಬಂಡಿಗಳು, ಬಗ್ಗಿಗಳು, ಸಾರೋಟುಗಳು ಇವೇ ಮೊದಲಾದ ಭೋಗ್ಯವಸ್ತುಗಳನ್ನು ಮಾಡುವುದರಲ್ಲಿಯೂ ನಾವು ಕೃಷಿಯನ್ನು ಮಾಡುತ್ತಾ ಬಂದೆವು. ನಾನೂ, ನನ್ನ ವಿದ್ಯಾರ್ಥಿಗಳೂ ಅನೇಕ ಗಾಡಿಗಳನ್ನು ತಯಾರುಮಾಡಿ ಜನಗಳಿಗೆ ಮಾರಿ ಇಧೇವೆ. ಟಸ್ಕೆಗಿ ಪಟ್ಟಣದಲ್ಲಿ ನಮ್ಮ ಕಾರ್ಖಾನೆಯಲ್ಲಿ ತಯಾರಾದ ಗಾಡಿಗಳಿಗೆ ವಿಶೇಷ ಗಿರಾಕಿಯು ಉಂಟಾಯಿತು. ನಮ್ಮಲ್ಲಿ ತಯಾರಾದ ಪದಾರ್ಥಗಳೆಲ್ಲಾ ಬಹಳ ಬಲವಾದವುಗಳೆಂಬದಾಗಿಯೂ, ತುಂಬಾ ಬಾಳಿಕೆ ಬರತಕ್ಕವುಗಳೆಂಬದಾಗಿಯೂ ಪ್ರತ್ಯಯವು ಉಂಟಾಯಿತು. ಈ ಇಟ್ಟಿಗೆಗಳು ಕರೀ ಜನಗಳು ಸುಟ್ಟದ್ದು. ಈ ಮನೆಗಳು ಕರೀ ಜನಗಳು ಕಟ್ಟಿದ್ದು, ಈ ಗಾಡಿಗಳು ಕರೀ ಜನಗಳು ಮಾಡಿದ್ದು ಎಂದು ಭಾವಿಸಿ ಅದನ್ನು ಯಾರೂ ಉಪೇಕ್ಷಿಸಲಿಲ್ಲ. ಈ ಕೆಲಸಗಳನ್ನೆಲ್ಲಾ ಕರೀ ಜನಗಳು ಬಿಳೀ ಜನಗಳಿಗಿಂತಲೂ ಚೆನ್ನಾಗಿ ಮಾಡುತ್ತಾರೆಂಬ ಹೆಸರು ಬರುವಂತಾಯಿತು. ಇಟ್ಟಿಗೆ ಮಾಡುವುದಕ್ಕೆ ಉಪಕ್ರಮಮಾಡಿದಾಗ ಅನೇಕ ವಿದ್ಯಾರ್ಥಿಗಳು ಜಿಗುಪ್ಸೆಪಟ್ಟರು. ನಮ್ಮ ಪದಾರ್ಥಗಳಿಗೆ ಗಿರಾಕಿಯು ಈಗ ಹೆಚ್ಚಿದೆ. ಸಂಪದಭ್ಯುದಯದ ವಿಷಯದಲ್ಲಿ ನಾವು

ಮಾಡತಕ್ಕ ಪ್ರಯತ್ನಗಳು ಪ್ರಯೋಜನಕರವಾದವುಗಳೆಂದು ಗೊತ್ತಾದ ಮೇಲೆ ನನ್ನ ಪಾಠಶಾಲೆಗೆ ಬರತಕ್ಕ ವಿದ್ಯಾರ್ಥಿಗಳೆಲ್ಲರೂ ಯಾವುದಾದರೂ ಒಂದು ಉದ್ಯೋಗವನ್ನು ಕಲಿಯುವುದರಲ್ಲಿ ವಿಶೇಷ ಆಸಕ್ತಿಯನ್ನು ತೋರಿಸುತ್ತಾ ಬಂದರು. " ಚಿಕ್ಕ ವಯಸ್ಸಿನಲ್ಲಿಯೇ ಉದ್ಯೋಗವು ಆವಶ್ಯಕವಿಲ್ಲವೆಂದು ಅನೇಕ ತಂದೆ-ತಾಯಿಗಳು ಹೇಳುತ್ತಿದ್ದರು. ನಮ್ಮ ಮಕ್ಕಳಿಗೆ ಉದ್ಯೋಗವನ್ನು ಕಲಿಸಬೇಕು. ಗ್ರಂಥಾವಲೋಕನಕ್ಕೆ ವಿಶೇಷ ಗಮನವು ಅವಶ್ಯಕವಿಲ್ಲ " ಎಂದು ತಂದೆತಾಯಿಗಳು ಹೇಳುವುದಕ್ಕೆ ಈಗ ಉಪಕ್ರಮವಾಯಿತು. ನಾನು ದೇಶಾಟನವನ್ನು ಮಾಡುವುದಕ್ಕೂ, ವಿದ್ಯಾಭ್ಯಾಸದ ಜೊತೆಗೆ ಯಾವುದಾದರೊಂದು ಉದ್ಯೋಗವನ್ನು ಕಲಿಸಬೇಕೆಂದು ಅನೇಕ ತಂದೆ-ತಾಯಿಗಳಿಗೆ ಉಪದೇಶಮಾಡುವುದಕ್ಕೂ ಪ್ರಾರಂಭಮಾಡಿದೆನು. ಇದಲ್ಲದೆ ಈ ವಿಷಯದಲ್ಲಿ ವಿದ್ಯಾರ್ಥಿಗಳೊಡನೆ ಆಗಾಗ್ಗೆ ಸಂಭಾಷಣೆ ಮಾಡುವುದಕ್ಕೂ ಉಪಕ್ರಮಿಸಿದೆನು. ಕ್ರಮೇಣ ಬಹಳ ಜನ ವಿದ್ಯಾರ್ಥಿಗಳು ಅರ್ಥಕಾರಿಗಳಾದ ಕೈಗಾರಿಕೆಗಳ ಅಭ್ಯಾಸದಲ್ಲಿ ಆಸಕ್ತರಾದರು.

ನಮ್ಮ ಹೊಸ ಕಟ್ಟಡ.—ನಮ್ಮ ಕಟ್ಟಡಗಳೆಲ್ಲಾ ಭರ್ತಿಯಾದವು. ಹೊಸ ಕಟ್ಟಡ ಒಂದು ಬೇಕಾಯಿತು. ಅದನ್ನು ಉಪಕ್ರಮಿಸಿದೆನು. ಅದನ್ನು ಪೂರೈಸುವುದಕ್ಕೆ ದ್ರವ್ಯವು ಸಾಲದೆ ಹೋಯಿತು. 1882 ನೇ ಇಸವಿಯಲ್ಲಿ ದ್ರವ್ಯಾರ್ಜನೆಗೋಸ್ಕರ ಉತ್ತರ ದೇಶಕ್ಕೆ ಹೊರಟೆನು. ನ್ಯೂಯಾರ್ಕ್ ಪಟ್ಟಣದಲ್ಲಿ ಒಬ್ಬ ಕ್ರೈಸ್ತ ದೊಡ್ಡಮನುಷ್ಯನನ್ನು ನೋಡಿ ಅವನಿಗೆ ವಿದ್ಯಾಭಿವೃದ್ಧಿಗೋಸ್ಕರ ನಾನು ಮಾಡುತ್ತಲಿರುವ ಕೆಲಸಗಳನ್ನೆಲ್ಲಾ ಶ್ರುತಪಡಿಸಿ ಕೆಲವು ಜನ ದೊಡ್ಡಮನುಷ್ಯರಿಗೆ ಶಿಫಾರಸು ಕಾಗದಗಳನ್ನು ಕೇಳಿದೆನು. ಆತನು 'ಈ ಪ್ರಯತ್ನಕ್ಕೆ ಯಾರೂ ಸಹಾಯಮಾಡುವುದಿಲ್ಲ. ಯಾಚನೆಯಿಂದ ಬರತಕ್ಕ ನೋಬಲಗು ನಿನ್ನ ದಾರಿಯ ಖರ್ಚಿಗೂ ಸಾಕಾಗುವುದಿಲ್ಲ. ನೀನು ಹೊರಟುಹೋಗುವುದು ಉತ್ತಮ ' ಎಂದು ಹೇಳಿದರು. ಇದಕ್ಕೆ ನಾನು ಭಯಪಡಲಿಲ್ಲ. ಮೆಸಾಚಿಸಟ್ಸ್ ಎಂಬ ಸಂಸ್ಥಾನದಲ್ಲಿರುವ ನಾರ್ಥಾಂಪ್ಟನ್ ಪಟ್ಟಣಕ್ಕೆ ಹೋದೆನು. ಬಿಳೀ ಜನಗಳ ಮನೆಯಲ್ಲಿ ಕರೀ ಜನಗಳಿಗೆ ಅನ್ನೋದಕಗಳು ದೊರೆಯುತ್ತಿರಲಿಲ್ಲ. ಬಿಳೀ ಜನಗಳ ಹೊಟೇಲುಗಳಲ್ಲಿ ಕರೀ ಜನಗಳಿಗೆ ಅನ್ನವನ್ನು ಹಾಕುತ್ತಿರಲಿಲ್ಲ; ಆಗ ಒಂದು ಹೊಟೇಲಿನಲ್ಲಿ ವಿಚಾರಿಸಲು ಅವರು ಅನ್ನೋದಕಗಳನ್ನು ಕೊಡುವುದಾಗಿಯೂ, ಇಳಿಯುವುದಕ್ಕೆ ಸ್ಥಳವನ್ನು ಕೊಡುವುದಾ

ಗಿಯೂ ಹೇಳಿದರು. ಇದು ನನಗೆ ತುಂಬಾ ಆಶ್ಚರ್ಯವನ್ನುಂಟುಮಾಡಿತು. ನನ್ನ ಪಾಠಶಾಲೆಯ ಕಟ್ಟಡಕ್ಕೆ ಅಲ್ಲಿ ದ್ರವ್ಯ ಸಹಾಯವನ್ನು ಹೊಂದುವ ಪ್ರಯತ್ನವನ್ನು ಮಾಡಿದೆನು. ಈ ಪ್ರಯತ್ನವು ಸಫಲವಾಯಿತು. ಕಟ್ಟಡಕ್ಕೆ ಬೇಕಾದಷ್ಟು ದ್ರವ್ಯವು ದೊರತು ಉತ್ತರ ದೇಶದಲ್ಲಿ ಸಂಚಾರ ಮಾಡುತ್ತಿರುವಾಗ ರೆವರೆಂಡ್ ರಾಬರ್ಟ್ಸ್ ಬೆಡ್‌ಫರ್ಡ್‌ರವರ ಪರಿಚಯವು ಆಯಿತು. ಅವರಿಗೆ ನನ್ನ ಪಾಠಶಾಲೆಯ ವಿದ್ಯಮಾನಗಳನ್ನೆಲ್ಲಾ ತಿಳಿಸಿದೆನು. ಕೂಡಲೇ ಅವರು ಖುದ್ದಾಗಿ ಈ ಕೆಲಸಗಳನ್ನು ನೋಡುವುದಕ್ಕೋಸ್ಕರ ದಯಮಾಡಿಸುವುದಾಗಿ ಅಪ್ಪಣೆ ಕೊಟ್ಟರು. ಅವರನ್ನು ಕರೆದುಕೊಂಡು ಹೋಗಿ ತೋರಿಸಿದೆನು. ಅವರು ನನ್ನ ಕೆಲಸಗಳನ್ನು ನೋಡಿ ಅತ್ಯಂತ ಸಂತೋಷಪಟ್ಟರು. ನಮ್ಮ ಪಾಠಶಾಲೆಯು ವೃದ್ಧಿಗೆ ಬರುವುದಕ್ಕೆ ಇವರು ವಿಶೇಷ ಸಹಾಯ ಮಾಡಿದರು. ಕೆಲವು ದಿನಗಳಲ್ಲಿ ಮಿ|| ವಾರ್ನ್ ಲೋಗನ್ ಎಂಬುವರಿಗೂ ನನಗೂ ಪರಿಚಯವಾಯಿತು. ಅವರು ನಮ್ಮ ಪಾಠಶಾಲೆಯಲ್ಲಿ ಕೆಲಸಮಾಡುವದಕ್ಕೆ ಒಪ್ಪಿಕೊಂಡರು. ನನ್ನ ಗೈರುಹಾಜರಿಯಲ್ಲಿ ಪಾಠಶಾಲೆಗೆ ಅಧ್ಯಕ್ಷರಾಗಿಯೂ ಇದ್ದರು. ಪಾಠಶಾಲೆಯಲ್ಲಿ ನಾನೇ ಇದ್ದರೆ ಹೇಗೋ ಹಾಗೆ ಅವರು ಬಹಳ ವಿವೇಕದಿಂದಲೂ, ವಿದ್ಯಾರ್ಥಿಗಳಲ್ಲಿ ಪ್ರೀತಿಯಿಂದಲೂ ಪಾಠಗಳನ್ನು ನಡೆಸುತ್ತಾ ಬಂದರು. ಪಾಠಶಾಲೆಯನ್ನು ನಡೆಸುವುದರಲ್ಲಿ ಇವರು ಅಧ್ಯಕ್ಷರಾಗಿ ನಿಂತದ್ದರಿಂದ ನಾನು ದೇಶಾಟನವನ್ನು ಮಾಡಿ, ದ್ರವ್ಯಾರ್ಜನೆಯನ್ನು ಮಾಡುವುದಕ್ಕೆ ಅವಕಾಶವಾಯಿತು.

ವಿದ್ಯಾರ್ಥಿನಿಲಯ.—ಈ ಪಾಠಶಾಲೆಯು ಪೂರೈಸಿದ ಕೂಡಲೇ ವಿದ್ಯಾರ್ಥಿನಿಲಯಕ್ಕೊಂದು ಕಟ್ಟಡವಾಗಬೇಕೆಂದು ತೋರಿತು. ವಿದ್ಯಾರ್ಥಿಗಳು ಹೆಚ್ಚುತ್ತಾ ಬಂದರು. ಅವರಿಗೆ ಭೋಜನಕ್ಕೂ, ವಾಸಕ್ಕೂ ಅನುಕೂಲವಾದ ಕಟ್ಟಡವು ಇರಲಿಲ್ಲ. ಒಂದು ನೆಲಮಾಳಿಗೆಯನ್ನು ಅಡಿಗೆಗೋಸ್ಕರ ಉಪಯೋಗಿಸುತ್ತಿದ್ದೆವು. ಈ ಸ್ಥಳವು ಅನುಕೂಲವಾಗಿರಲಿಲ್ಲ. ಜನಗಳಿಗೆ ನನ್ನಲ್ಲಿ ವಿಶ್ವಾಸವಿದ್ದಿತು. ವಿದ್ಯಾರ್ಥಿಗಳಿಗೆ ಭೋಜನಕ್ಕೆ ಬೇಕಾದ ಸಾಮಾನುಗಳು ಒದಗುತ್ತಿದ್ದವು. ಆದರೆ ಅಡಿಗೆ ಮಾಡುವುದಕ್ಕೂ, ಭೋಜನಕ್ಕೂ ಸ್ಥಳವಿಲ್ಲದೆ ಕಷ್ಟವಾಗಿತ್ತು. ವಿದ್ಯಾರ್ಥಿಗಳು ಗೊಣಗುಟ್ಟುತ್ತಿದ್ದರು. ಅಡಿಗೆಯು ಚೆನ್ನಾಗಿ ಆಗುತ್ತಿರಲಿಲ್ಲ. ಒಬ್ಬ ವಿದ್ಯಾರ್ಥಿಯು ಅಡಿಗೆಯು ಕೆಟ್ಟುಹೋಗಿದ್ದರಿಂದ ನೀರನ್ನಾದರೂ ಕುಡಿದು ಕಾಲಕ್ಷೇಪ ಮಾಡೋಣವೇ ಎಂದು ಸಮೀಪದಲ್ಲಿದ್ದ ಒಂದು ಭಾವಿಗೆ ತಂಬಿಗೆಯನ್ನು ಬಿಟ್ಟನು. ಹಗ್ಗವು

ಕಿತ್ತುಹೋಗಿ ಭಾವಿಯಲ್ಲಿ ತಂಬಿಗೆಯು ಮುಳುಗಿಹೋಯಿತು. ನಾನು ಸಮೀಪದಲ್ಲಿದ್ದೆನು. ನನ್ನನ್ನು ಅವನು ನೋಡಲಿಲ್ಲ. ಬಹಳ ವ್ಯಸನದಿಂದ ಈ ಪಾಠಶಾಲೆಯಲ್ಲಿ ಓದತಕ್ಕವರಿಗೆ ನೀರಿಗೂ ಕೂಡ ಗತಿಯಿಲ್ಲವೆಂದು ರೋದನವನ್ನು ಮಾಡಿದನು. ಇದು ನನಗೆ ತುಂಬಾ ವ್ಯಸನವನ್ನುಂಟುಮಾಡಿತು. ಎಷ್ಟು ಕಷ್ಟ ಬಂದಾಗ್ಯೂ ಚಿಂತೆಯಿಲ್ಲ. ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಿ ಸಮರ್ಪಕವಾದ ಏರ್ಪಾಡನ್ನು ಮಾಡಬೇಕೆಂದು ಸಂಕಲ್ಪಮಾಡಿದೆನು.

ಕ್ಲೇಶಗಳು.—ಹೀಗೆ ನಾನಾವಿಧವಾದ ತೊಂದರೆಗಳನ್ನು ಅನುಭವಿಸುತ್ತಿದ್ದಾಗ ಮೆ|| ಬೆಡ್‌ಫರ್ಡ್‌ರವರು ಬಂದರು. ನಮ್ಮ ಪಾಠಶಾಲೆಯನ್ನೂ, ವಿದ್ಯಾರ್ಥಿಗಳು ವಾಸಮಾಡುವ ಸ್ಥಳಗಳನ್ನೂ ನೋಡಿದರು. ಭೋಜನಶಾಲೆಯ ಸಮೀಪದಲ್ಲಿ ಅವರು ಮಲಗುವುದಕ್ಕೆ ಒಂದು ಕೊಠಡಿಯು ಕಟ್ಟಿತ್ತು. ಬೆಳಿಗ್ಗೆ ಅವರು ಏಳುವ ಸಮಯಕ್ಕೆ ಸರಿಯಾಗಿ ಇಬ್ಬರು ಹುಡುಗರು ಬಂದು ಕಾಫೀ ಬಟ್ಟಲಿಗೋಸ್ಕರ ಜಗಳವಾಡುತ್ತಿದ್ದರು. ಒಂದು ಬಟ್ಟಲನ್ನು ಮೂರುನಾಲ್ಕು ದಿವಸಗಳು ಒಬ್ಬ ವಿದ್ಯಾರ್ಥಿಯು ಉಪಯೋಗಿಸಿದ್ದನು. ಇನ್ನೊಬ್ಬ ವಿದ್ಯಾರ್ಥಿಯು ಆ ದಿನ ಆ ಬಟ್ಟಲು ತನಗೆ ಬೇಕೆಂದು ಜಗಳವಾಡುತ್ತಿದ್ದನು. ಇದನ್ನು ಮೆ|| ಬೆಡ್‌ಫರ್ಡ್‌ರವರು ಕೇಳಿದರು. ಎಲ್ಲಾ ಹುಡುಗರಿಗೂ ಸರಿಯಾದ ಏರ್ಪಾಡಿಲ್ಲವೆಂದು ಅವರು ತಿಳಿದುಕೊಂಡರು. ಇದು ನನಗೆ ತುಂಬಾ ವಿಷಾದವನ್ನುಂಟುಮಾಡಿತು. ಸರ್ವಪ್ರಯತ್ನಗಳನ್ನೂ ಮಾಡಿ ವಿದ್ಯಾರ್ಥಿನಿಲಯವನ್ನು ಕಟ್ಟಿಸಿ ಅವರ ಅನ್ನೋದಕಗಳಿಗೂ, ವಿದ್ಯಾಭ್ಯಾಸಕ್ಕೂ, ಕೈಗಾರಿಕೆಗಳ ಅಭ್ಯಾಸಕ್ಕೂ ಸಕಲ ಸೌಲಭ್ಯಗಳೂ ಇರುವಂತೆಯೂ, ಯಾವ ನ್ಯೂನತೆಗೂ ಅವಕಾಶವಿಲ್ಲದಂತೆಯೂ ಮಾಡಬೇಕೆಂದು ಸಂಕಲ್ಪಮಾಡಿದೆನು.

ಅಧ್ಯಾಯ ೪.

ನಮ್ಮ ಪಾಠಶಾಲೆಯ ಸ್ಥಿತಿ.—ಟಸ್ಕೆಗಿ ಪಟ್ಟಣಕ್ಕೆ ನಾನು ಬಂದಾಗ ಪಾಠಶಾಲೆಗೆ ಅನುಕೂಲವಾದ ಕಟ್ಟಡವಿರಲಿಲ್ಲ. ಈಗ ಅನೇಕ ಕಟ್ಟಡಗಳಾದವು. ಬಹುಜನ ಕರೀ ವಿದ್ಯಾರ್ಥಿಗಳ ಭೋಜನಕ್ಕೂ, ವಾಸಕ್ಕೂ ಸುಮಾರಾದ ಏರ್ಪಾಡಾ

ಗಿತ್ತು. ಈ ಸಮಯದಲ್ಲಿ ಪಾಠಶಾಲೆಯ ಕಟ್ಟಡವನ್ನು ಕಟ್ಟುವುದಕ್ಕೆ ಮೊದಲು ನನಗೆ 750 ರೂಪಾಯಿಗಳನ್ನು ಕೊಟ್ಟು, ಜನರಲ್ ಮಾರ್ಷಲ್‌ರವರು ಇಲ್ಲಿನ ಏರ್ಪಾಟುಗಳನ್ನು ನೋಡುವುದಕ್ಕೋಸ್ಕರ ದಯಮಾಡಿಸಿದರು. ಒಂದು ವಾರದವರೆಗೂ ಇಲ್ಲಿದ್ದು ಇಲ್ಲಿನ ವಿದ್ಯಮಾನಗಳನ್ನೆಲ್ಲಾ ಕಣ್ಣಾರ ನೋಡಿ, ಅತ್ಯಂತ ಸಂತುಷ್ಟರಾಗಿ, ತಮ್ಮ ಸಂತೋಷವನ್ನು ರಿಪೋರ್ಟಿನಲ್ಲಿ ತೋರ್ಪಡಿಸಿದರು. ಕೊಂಚ ದಿವಸವಾದ ಮೇಲೆ ಗುಡಿಸುವುದರಲ್ಲಿ ನನ್ನನ್ನು ಪರೀಕ್ಷೆಮಾಡಿ ಪಾಠಶಾಲೆಗೆ ಸೇರಿಸಿಕೊಂಡ ಮಿಸ್ ಮೇರಿ ಮ್ಯಾಕಿಯವರು ಬಂದರು. ಸ್ವಲ್ಪ ದಿವಸಗಳಲ್ಲಿಯೇ ಜನರಲ್ ಆರಂಸ್ಟ್ರಾಂಗ್‌ರವರೂ ಬಂದರು. ಪಾಠಶಾಲೆಯ ಕಟ್ಟಡಗಳು ವೃದ್ಧಿಯಾಗಿರುವುದನ್ನೂ, ಪಾಠಕರ ಸಂಖ್ಯೆಯು ಹೆಚ್ಚಿರುವುದನ್ನೂ, ಈ ಪಾಠಕರಲ್ಲನೇಕರು ಬಿ. ಎ. ಪರೀಕ್ಷೆಯನ್ನು ಕೊಟ್ಟಿರುವುದನ್ನೂ, ಬಹುದೂರದಿಂದ ಬಂದು ಅನೇಕ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗಮಾಡುವುದನ್ನೂ, ವಿದ್ಯಾಭ್ಯಾಸದ ಜೊತೆಗೆ ಕೈಗಾರಿಕೆಯೂ ಅಭ್ಯಾಸ ಮಾಡಲ್ಪಡುತ್ತಿರುವುದನ್ನೂ, ವಿದ್ಯಾಭ್ಯಾಸ ಮಾಡಿದವರು ಕೃಷಿ, ಕೈಗಾರಿಕೆ ಮೊದಲಾದವುಗಳಲ್ಲಿ ವಿಶೇಷ ಆಸಕ್ತರಾಗಿರುವುದನ್ನೂ ನೋಡಿ ಇವರೆಲ್ಲರೂ ತುಂಬಾ ಸಂತೋಷಪಟ್ಟರು.

ಜನರಲ್ ಆರಂಸ್ಟ್ರಾಂಗರವರ ಭೂತದಯೆ.—ಜನರಲ್ ಆರಂಸ್ಟ್ರಾಂಗರವರ ಅಸಾಧಾರಣವಾದ ಭೂತದಯೆಯು ನನಗೆ ಚೆನ್ನಾಗಿ ಗೊತ್ತಾಗಿರಲಿಲ್ಲ. ಕರೀ ಜನಗಳ ವಿಷಯದಲ್ಲಿ ಇವರಿಗೆ ತುಂಬಾ ಪ್ರೀತಿಯು ಇದ್ದಿತು. ನಮ್ಮನ್ನು ದಾಸತ್ವದಿಂದ ಬಿಡುಗಡೆ ಮಾಡುವುದಕ್ಕೋಸ್ಕರ ದಕ್ಷಿಣ ದೇಶದಲ್ಲಿದ್ದ ತಮ್ಮ ಸ್ವಂತ ಜನಗಳೊಡನೆ ಇವರು ಯುದ್ಧ ಮಾಡಿದರು. ಅವರನ್ನು ಜಯಿಸುವುದರಲ್ಲಿ ಕೃಷಿಯನ್ನು ಮಾಡಿ, ಅವರು ಪರಾಜಿತರಾದ ಕೂಡಲೇ ನಮಗೆ ಸ್ವಾತಂತ್ರ್ಯವು ಬರುವಂತೆ ಮಾಡಿದರು. ಏನೋ ಒಂದು ಅನಿರ್ವಚನೀಯವಾದ ಪ್ರೀತಿಯೂ, ಭೂತದಯೆಯೂ ಇವರಿಗೆ ನಮ್ಮಲ್ಲಿರುವುದೆಂಬದಾಗಿಯೂ, ಈ ಪ್ರೀತಿಯ ದೆಸೆಯಿಂದ ನಮ್ಮ ವಿಷಯದಲ್ಲಿ ಸ್ವಂತ ಜನಗಳ ವಿಷಯದಲ್ಲಿರುವ ಪ್ರೀತಿಗಿಂತಲೂ ಹೆಚ್ಚಾದ ಪ್ರೀತಿಯು ಇರುವುದೆಂಬದಾಗಿಯೂ ನಾನು ತಿಳಿದುಕೊಂಡೆನು. ಹಾಗೆಯೇ ಪರಿಶೀಲಿಸಿ ನೋಡುವುದರಲ್ಲಿ ಅವರಿಗೆ ನಮ್ಮಲ್ಲಿ ಹೇಗೋ ಹಾಗೆ ದಕ್ಷಿಣ ದೇಶದ ಬಿಳೀ ಜನಗಳಲ್ಲಿಯೂ ಪ್ರೀತಿಯು ಇದ್ದಿತು. ಬಿಳೀ ಜನಗಳು ಹೇಗೋ ಹಾಗೆ ಕರೀ ಜನಗಳೂ ಕೂಡ ಕಾಣಲ್ಪಡಬೇ

ಕೆಂಬುವುದೇ ಇವರ ಮುಖ್ಯ ಉದ್ದೇಶವಾಗಿದ್ದಿತು. ದಕ್ಷಿಣದ ಬಿಳೀ ಜನಗಳು ಇದಕ್ಕೆ ಪ್ರತಿಭಟಿಸಿದ್ದರಿಂದ ಅವರೊಡನೆ ಯುದ್ಧಮಾಡಿದರು. ಈ ಯುದ್ಧವು ಪೂರೈಸಿ ನಮಗೆ ಸ್ವಾತಂತ್ರ್ಯವು ಬಂದ ಕೂಡಲೇ ದಕ್ಷಿಣದ ಬಿಳೀ ಜನಗಳಲ್ಲಿ ಇವರಿಗಿದ್ದ ಅಸಮಾಧಾನವು ಹೋಯಿತು. ಅವರ ವಿಷಯದಲ್ಲಿ ಅಸಮಾಧಾನದ ಮಾತನ್ನು ಕೂಡ ಇವರು ಆಡುತ್ತಲಿರಲಿಲ್ಲ. ಆಗಾಗ್ಯೆ ಆ ದೇಶಗಳಿಗೆ ಹೋಗಿ ಅಲ್ಲಿನ ಬೀಳೀ ಜನಗಳು ಕರೀ ಜನಗಳಾಗಿದ್ದರೆ ಹೇಗೋ ಹಾಗೆ ಅವರನ್ನು ಕಾಣುತ್ತಾ, ಕೈಲಾದ ಉಪಕಾರವನ್ನು ಅವರಿಗೆ ಮಾಡುತ್ತಾ ಬಂದರು. ಅಲ್ಲಿನ ಜನಗಳೂ ಕೂಡ ಸರ್ವಸಮದೃಷ್ಟಿಯು ಸ್ಥಾಪಿಸಲ್ಪಡುವುದಕ್ಕೆ ಯುದ್ಧ ಮಾಡಿದರೇ ಹೊರತು ಬೇರೆ ಯಾವ ಕಾರಣದಿಂದಲೂ ಯುದ್ಧ ಮಾಡಲಿಲ್ಲವೆಂದು ತಿಳಿದುಕೊಂಡರು. ಈ ಭಾವನೆಯು ಈಗ ನನಗೆ ಗೊತ್ತಾಯಿತು. ಬಿಳೀ ಜನಗಳಲ್ಲಿ ನಮ್ಮನ್ನು ದ್ವೇಷಿಸತಕ್ಕವರು ಅನೇಕರಿದ್ದರು. ನಮಗೆ ಅಪಕಾರವನ್ನು ಮಾಡಿದವರು ಅನೇಕರಿದ್ದರು. ಆರಂಸ್ಟ್ರಾಂಗರವರ ಸ್ವಭಾವವನ್ನು ನೋಡಿ ನಮಗೆ ವಿರೋಧಿಗಳಾದವರನ್ನು ನಾವು ಪ್ರೀತಿಸುವುದು ಉತ್ತಮವೆಂದು ನಾನು ಭಾವಿಸಿದೆನು. ಜನಗಳು ತಮ್ಮ ಚರ್ಮದ ಬಣ್ಣಕ್ಕೆ ತಾವು ಜವಾಬ್ದಾರರಲ್ಲ. ಅದಕ್ಕೋಸ್ಕರ ಅವರನ್ನು ದ್ವೇಷಿಸುವುದು ತಪ್ಪು. ಹೀಗೆ ದ್ವೇಷಿಸುವುದಕ್ಕೆ ಅಜ್ಞಾನವೇ ಕಾರಣ. ಬಿಳೀ ಜನರು ನಮ್ಮನ್ನು ದ್ವೇಷಿಸಿದ್ದರಿಂದ ನಮಗೆ ವಿಶೇಷ ನಷ್ಟವಾಗಲಿಲ್ಲ. ಇದರಿಂದ ಅವರಲ್ಲಿ ದುರಭಿಮಾನವೂ, ನಿಷ್ಕಾರಣವಾಗಿ ದ್ವೇಷವೂ ಉಂಟಾಗುವುದಕ್ಕೆ ಅವಕಾಶವಾಯಿತು. ಕರೀ ಜನಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟರೆ ಪ್ರತಿನಿಧಿಸಭೆಗೆ ಅವರು ತಮ್ಮನ್ನು ಚುನಾಯಿಸುವುದಿಲ್ಲವೆಂದು ತಿಳಿದುಕೊಂಡು ಬಿಳೀ ಜನಗಳು ನಮ್ಮನ್ನು ದ್ವೇಷಿಸುವುದಕ್ಕುಪಕ್ರಮಿಸಿದರು. ದ್ವೇಷಕ್ಕೆ ಅವಕಾಶ ಕೊಟ್ಟಹಾಗೆಲ್ಲಾ ಅದು ಬೆಳೆಯುವುದು. ಈ ಜನಗಳನ್ನು ದ್ವೇಷಿಸುವುದಕ್ಕೆ ಆದ ಅಭ್ಯಾಸವು ತಮಗೆ ಇಷ್ಟವಿಲ್ಲದ ಬಿಳೀ ಜನಗಳನ್ನು ದ್ವೇಷಿಸುವುದಕ್ಕೆ ಸಹಕಾರಿಯಾಗುತ್ತದೆ. ದ್ವೇಷಮಾಡುವ ಸ್ವಭಾವವೇ ಕೆಟ್ಟದ್ದು. ಆ ಸ್ವಭಾವಕ್ಕೆ ಅವಕಾಶವನ್ನು ಕೊಡಬಾರದು.

ಆತ್ಮಾವಲಂಬನೆ.—ನನ್ನ ಪಾಠಶಾಲೆಯಲ್ಲಿ ಕರೀ ವಿದ್ಯಾರ್ಥಿಗಳೂ ಮತ್ತು ವಿದ್ಯಾರ್ಥಿನಿಯರೂ ವಿದ್ಯಾಭ್ಯಾಸದ ಜೊತೆಗೆ ಕೈಗಾರಿಕೆ, ಕೃಷಿ ಇವುಗಳನ್ನು ಅಭ್ಯಾಸಮಾಡಿ ಸ್ವಶಕ್ತಿಯಿಂದ ಬದುಕುವುದಕ್ಕೆ ತಕ್ಕ ಯೋಗ್ಯತೆಯನ್ನು ಹೊಂದುತ್ತಿರುವು

ದನ್ನು ನೋಡಿ ಜನರಲ್ ಆರಂಸ್ಟ್ರಾಂಗರವರು ಅತ್ಯಂತ ಸಂತುಷ್ಟರಾದರು. ದಕ್ಷಿಣ ದೇಶದಲ್ಲಿದ್ದ ಬಿಳೀ ಜನಗಳಲ್ಲಿ ಆತ್ಮಾವಲಂಬನೆಗೆ ಸಾಧಕನಾದ ಉದ್ಯೋಗಗಳು ಕಲಿಸಲ್ಪಡುತ್ತಲಿರಲಿಲ್ಲ. ಸಾಮಾನ್ಯ ವಿದ್ಯಾಭ್ಯಾಸವು ಅವರಲ್ಲಿ ನಡೆಯುತ್ತಿತ್ತು. ಇದನ್ನು ನೋಡಿ ಜನರಲ್ ಆರಂಸ್ಟ್ರಾಂಗರವರು ತುಂಬಾ ವಿಷಾದಪಟ್ಟು ನನ್ನ ಪಾಠಶಾಲೆಯಲ್ಲಿ ಕರೀ ಜನಗಳು ಹೇಗೆ ವಿದ್ಯಾಭ್ಯಾಸದ ಜೊತೆಗೆ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಮೆಹನತ್ತು ಮಾಡುತ್ತಲಿರುವರೋ ಅದನ್ನು ಅವರಿಗೆ ತಿಳಿಸಿದರು. ಕ್ರಮಕ್ರಮವಾಗಿ ಆ ದೇಶದ ಬಿಳೀ ಜನಗಳು ತಮ್ಮ ಮಕ್ಕಳು ಈ ಭಾಗದಲ್ಲಿ ಹಿಂದಾಳುಗಳಾದರೆ ಕೆಲವು ವರ್ಷಗಳಲ್ಲಿ ಕರೀ ಜನಗಳು ಉತ್ತಮಸ್ಥಿತಿಗೆ ಬರಬಹುದೆಂಬದಾಗಿಯೂ, ಬಿಳೀ ಜನಗಳು ಹೀನಸ್ಥಿತಿಗೆ ಬರಬಹುದೆಂಬದಾಗಿಯೂ ತಿಳಿದುಕೊಂಡು, ಉದ್ಯೋಗ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೆ ತಾವೂ ಉಪಕ್ರಮಮಾಡಿದರು.

ವಿದ್ಯಾಭ್ಯಾಸದ ಖರ್ಚು.—ಆದಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಅನ್ನವನ್ನು ಹಾಕುತ್ತಿದ್ದೆನು. ಬಾಡಿಗೆ ಇಲ್ಲದೆ ವಾಸಕ್ಕೆ ಅವಕಾಶವನ್ನು ಮಾಡುತ್ತಿದ್ದೆನು. ಇದಕ್ಕೋಸ್ಕರ ಅನೇಕ ಮನೆಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದೆನು. ಈ ಮನೆಗಳ ಪೈಕಿ ಕೆಲವು ಬಹಳ ಶಿಥಿಲವಾಗಿದ್ದವು. ಆದಾಗ್ಯೂ ವಿದ್ಯಾರ್ಥಿನಿಲಯವನ್ನು ಕಟ್ಟುವವರೆಗೂ ಈ ಮನೆಗಳೇ ಉಪಯೋಗಿಸಲ್ಪಡಬೇಕಾಗಿದ್ದವು. ಹಾಗೆ ಕೆಲವು ದಿವಸ ಪ್ರೋತ್ಸಾಹವನ್ನು ಮಾಡಿ, ವಿದ್ಯಾರ್ಥಿಗಳು ವಿಶೇಷವಾಗಿ ಬಂದ ಮೇಲೆ ಅವರಲ್ಲಿ ಉಪಪನ್ನರಾದವರು ಅವರ ಆಹಾರಕ್ಕೂ ವಾಸಕ್ಕೂ ತಗಲತಕ್ಕ ಖರ್ಚನ್ನು ಕೊಡಬೇಕೆಂದು ಸೂಚಿಸಿದೆನು. ಅದಕ್ಕೆ ಅನೇಕರು ಒಪ್ಪಿದರು. ಒಬ್ಬೊಬ್ಬ ವಿದ್ಯಾರ್ಥಿಗೆ ಭೋಜನ, ವಾಸ ಮೊದಲಾದವುಗಳ ಖರ್ಚಿಗೆ ತಿಂಗಳಿಗೆ 24 ರೂಪಾಯಿ ಬೀಳುತ್ತಿದ್ದಿತು. ಈ ಖರ್ಚಿನಲ್ಲಿ ಅವರು ಮಾಡತಕ್ಕ ಕೈಗಾರಿಕೆಯಿಂದ ಎಷ್ಟು ಉತ್ಪತ್ತಿಯಾಗುವುದೋ ಅದನ್ನು ಕಳೆದು ಉಳಿದದ್ದನ್ನು ಅವರಿಂದ ತೆಗೆದುಕೊಳುತ್ತಿದ್ದೆನು. ಬಹು ಜನ ಬಡ ವಿದ್ಯಾರ್ಥಿಗಳು ತಾವು ಮಾಡತಕ್ಕ ಕೆಲಸದಿಂದ ಈ ಖರ್ಚನ್ನೆಲ್ಲಾ ಕಳೆದುಕೊಳ್ಳುತ್ತಲೂ ಇದ್ದರು. ಸಾಮಾನ್ಯವಾಗಿ ಒಬ್ಬೊಬ್ಬ ವಿದ್ಯಾರ್ಥಿಗೆ ವರ್ಷಕ್ಕೆ 150 ರೂಪಾಯಿ ಖರ್ಚು ತಗಲುತ್ತಿದ್ದಿತು.

ವಿದ್ಯಾರ್ಥಿಗಳು ಪಡುತ್ತಿದ್ದ ಕಷ್ಟಗಳು.—ವಿದ್ಯಾರ್ಥಿಗಳು ಕೊಡತಕ್ಕ ದ್ರವ್ಯವು ಅವರಿಗೆ ಬೇಕಾದ ಏರ್ಪಾಡುಗಳನ್ನು ಮಾಡುವುದಕ್ಕೆ ಸಾಲುತ್ತಿರಲಿಲ್ಲ.

ನನ್ನ ಕೈಯಿಂದ ಹಾಕುವುದಕ್ಕೆ ನನಗೂ ಗತಿ ಇರಲಿಲ್ಲ. ಚಳಿಗಾಲದಲ್ಲಿ ಟಸ್ಕೆಗಿ ಪಟ್ಟಣದಲ್ಲಿ ಚಳಿಯು ಬಹಳ ಜೋರಾಗಿರುತ್ತಿದ್ದಿತು. ಸರಿಯಾದ ಹಾಸಿಗೆ ಹೊದ್ದಿಕೆಗಳಿಗೆ ವಿದ್ಯಾರ್ಥಿಗಳಿಗೆ ಗತಿ ಇರಲಿಲ್ಲ. ಅವುಗಳನ್ನು ಒದಗಿಸುವುದಕ್ಕೆ ನನಗೂ ಶಕ್ತಿ ಇರಲಿಲ್ಲ. ಮಂಚ, ಸುಪ್ಪತ್ತಿಗೆ ಮೊದಲಾದವುಗಳಿಗೆ ಅವಕಾಶವೇ ಇರಲಿಲ್ಲ. ಅತ್ಯಂತ ಚಳಿಯುಳ್ಳ ರಾತ್ರಿಗಳಲ್ಲಿ ನನಗೂ ನಿದ್ರೆ ಬರುತ್ತಿರಲಿಲ್ಲ. ವಿದ್ಯಾರ್ಥಿಗಳ ಕಷ್ಟವನ್ನು ನೋಡಿ ನಾನೂ ಬಹಳ ಸಂಕಟಪಡುತ್ತಿದ್ದೆನು. ರಾತ್ರಿ ವೇಳೆಯಲ್ಲಿ ಹೊದ್ದುಕೊಳ್ಳುವುದಕ್ಕೋಸ್ಕರ ಪ್ರತಿಯೊಬ್ಬ ವಿದ್ಯಾರ್ಥಿಗೂ ಒಂದೊಂದು ಕಂಬಳಿಯನ್ನು ಕೊಟ್ಟಿದ್ದೆನು. ಆ ಕಂಬಳಿಯನ್ನು ಮೈತುಂಬಾ ಸುತ್ತಿಕೊಂಡಿದ್ದಾಗ್ಯೂ ಚಳಿಯ ಹೊಡೆತವು ಜೋರಾಗಿದ್ದಿತು. ಬೆಂಕಿಯನ್ನು ಕಾಯಿಸಿಕೊಳ್ಳುತ್ತಾ, ಅವರು ಕಾಲಕ್ಷೇಪ ಮಾಡುತ್ತಿದ್ದರು. ಅಂಥಾ ವೇಳೆಯಲ್ಲಿ ಅಲ್ಲಿಗೆ ಹೋಗಿ ಅವರಿಗೆ ಧೈರ್ಯವನ್ನು ಹೇಳಿ, ಈ ಕಷ್ಟವು ತೀರತಕ್ಕ ಕಾಲವು ಶೀಘ್ರದಲ್ಲಿಯೇ ಬರಬಹುದೆಂಬದಾಗಿಯೂ, ಅದುವರೆಗೂ ಧೈರ್ಯವಾಗಿರಬೇಕೆಂಬದಾಗಿಯೂ ಹೇಳುತ್ತಿದ್ದೆನು. ಒಂದು ದಿನ ರಾತ್ರಿ ಬಹಳ ಚಳಿಯಾಗಿದ್ದಿತು. ಆ ಚಳಿಯಿಂದ ರಕ್ತಸಂಚಾರವೂ ಕೂಡ ನಿಂತುಹೋಗುವ ಸ್ಥಿತಿಗೆ ಬಂದಿತು. ವಿದ್ಯಾರ್ಥಿಗಳ ಬಳಿಗೆ ಹೋಗಿ "ಕೈಯನ್ನೆತ್ತಿ" ಎಂಬದಾಗಿ ಹೇಳಿದೆನು. ಬಹಳ ಶ್ರಮದಿಂದ ಅವರು ಕೈಯನ್ನೆತ್ತಿದರು. ಇಷ್ಟು ಕಷ್ಟಕ್ಕೆ ಗುರಿಯಾಗಿದ್ದಾಗ್ಯೂ, ಅವರಲ್ಲಿ ಯಾರೂ ಗೊಣಗುಟ್ಟುತ್ತಿರಲಿಲ್ಲ. ನನ್ನ ಕೈಲಾದಮಟ್ಟಿಗೂ ಅವರಿಗೆ ಸಹಾಯಮಾಡುತ್ತೇನೆಂದು ಅವರು ತಿಳಿದುಕೊಂಡಿದ್ದರು. ಅವರು ತೃಪ್ತರಾಗಿದ್ದುದಕ್ಕೆ ಇದೇ ಮುಖ್ಯಕಾರಣ. ವಿದ್ಯಾರ್ಥಿಗಳಂತೆಯೇ ಪಾಠಕರೂ ಕೂಡ ಕಷ್ಟಪಡುತ್ತಿದ್ದರು. ಅದನ್ನು ನೋಡಿ ಪಾಠಕರ ಕಷ್ಟವನ್ನು ಕಡಿಮೆ ಮಾಡುವುದಕ್ಕೆ ವಿದ್ಯಾರ್ಥಿಗಳೆಲ್ಲರೂ ಮನಃಪೂರ್ವಕವಾಗಿ ಕೆಲಸಮಾಡುತ್ತಿದ್ದರು.

ವಿದ್ಯಾರ್ಥಿಗಳ ಭಕ್ತಿ.—ಮೆಹನತ್ತಿಗೆ ಅನುಸಾರವಾದ ಪದವಿಯು ಜನಗಳಿಗೆ ಲಭ್ಯವಾಗುವುದು. ಬಿಳೀ ಜನಗಳೆಲ್ಲರೂ ಅಧಿಕಾರಿಗಳಾಗಿಯೂ, ಕರೀ ಜನಗಳೆಲ್ಲರೂ ದಾಸರಾಗಿಯೂ ಇರತಕ್ಕ ಕಾಲವು ಹೋಯಿತು. ಹೆಚ್ಚು ಮೆಹನತ್ತು ಮಾಡತಕ್ಕವರು ಒಳ್ಳೇ ಪದವಿಗೆ ಬರುವುದಕ್ಕೆ ಪ್ರಾರಂಭವಾಯಿತು. ಬಿಳೀ ಜನಗಳು ಹೇಗೋ ಹಾಗೆ ಕರೀ ಜನಗಳೂ ಕೂಡ ಅಧಿಕಾರಿಗಳಾಗುವುದಕ್ಕೆ ಉಪ

ಕ್ರಮವಾಯಿತು. ಕರೀ ಜನಗಳೇ ಅಧಿಕಾರಿಗಳಾಗಿಯೂ, ಬಿಳೀ ಜನಗಳು ಅವರ ಕೈಕೆಳಗೆ ಕೆಲಸ ಮಾಡತಕ್ಕವರಾಗಿಯೂ ಇರುವ ಸ್ಥಿತಿಯು ಬಂದಿತು. ನಾನು ಅಧಿಕಾರ ಮಾಡುವಾಗಲೂ ಕೂಡ ಸೇವಕನಾಗಿದ್ದರೆ ಹೇಗೋ ಹಾಗೆ ನಡೆದುಕೊಳ್ಳುತ್ತಿದ್ದೆನು. ಅಧಿಕಾರವೆಂದರೇನು ? ಅದು ವಿಸ್ತಾರವಾದ ಸೇವೆಯಲ್ಲವೆ ? ಬಹು ಜನಗಳ ಸೇವೆಯೇ ಅಧಿಕಾರವೆನ್ನಿಸಿಕೊಳ್ಳುವುದು. ಈ ಭಾವನೆಯಿಂದ ನಾನು ನಡೆಯುತ್ತಾ ಬಂದೆನು. ಇದರಿಂದ ಅಸಾಧಾರಣವಾದ ಫಲವು ನನಗೆ ಉಂಟಾಯಿತು. ಎಂಥಾ ಕಷ್ಟವಾದ ಕೆಲಸಗಳಲ್ಲಿಯೂ ನಾನು ಸಹಾಯವನ್ನಪೇಕ್ಷಿಸುತ್ತಿರಲಿಲ್ಲ. ಆದಾಗ್ಯೂ ಅಪ್ರಾರ್ಥಿತವಾಗಿ ನನ್ನ ಕೆಲಸದಲ್ಲಿ ಸಹಾಯ ಮಾಡುವುದಕ್ಕೆ ವಿದ್ಯಾರ್ಥಿಗಳೇ ಮೊದಲಾದವರು ಬರುತ್ತಿದ್ದರು. ನಾನು ಪುಸ್ತಕಗಳನ್ನಾಗಲೀ, ಕೈಗಾರಿಕೆಗಳಿಗೆ ಸಂಬಂಧಪಟ್ಟ ಮುಟ್ಟುಗಳನ್ನಾಗಲೀ ತೆಗೆದುಕೊಂಡು ಹೋಗುತ್ತಿದ್ದರೆ ವಿದ್ಯಾರ್ಥಿಗಳು ಬಂದು ಬಲಾತ್ಕಾರವಾಗಿ ಅವುಗಳನ್ನು ತೆಗೆದುಕೊಂಡು ಬರುತ್ತಿದ್ದರು. ಮಳೆಯಲ್ಲಿ ನಾನು ಹೋಗುತ್ತಿದ್ದರೆ ಯಾರಾದರೂ ಒಬ್ಬರು ಬಂದು ಛತ್ರಿಯನ್ನು ಹಿಡಿಯುತ್ತಿದ್ದರು. ಬೇಡವೆಂದು ಹೇಳಿದರೆ ಕೇಳುತ್ತಿರಲಿಲ್ಲ. ಇದು ಪ್ರಪಂಚಧರ್ಮ. ನಾವು ಜನಗಳನ್ನು ಪ್ರೀತಿಸಿದರೆ ಅವರು ನಮ್ಮನ್ನು ಪ್ರೀತಿಸುವರು. ನಾವು ದೂಷಿಸಿದರೆ ಅವರು ನಮ್ಮನ್ನು ದೂಷಿಸುವರು. ಇದು ಅನುಭವಸಿದ್ಧವಾದದ್ದು. ನನ್ನ ಪಾಠಶಾಲೆಯಲ್ಲಿ ದ್ವೇಷಕ್ಕೆ ಅವಕಾಶವಾಗಲಿಲ್ಲ. ಎಲ್ಲೆಲ್ಲಿಯೂ ಪರಸ್ಪರ ಪ್ರೀತಿಯು ತಾಂಡವವಾಡುತ್ತಿದ್ದಿತು.

ಸನ್ಮಾನ:—ಯೋಗ್ಯತೆಗೆ ತಕ್ಕ ಸನ್ಮಾನವು ಎಂದಿಗೂ ತಪ್ಪುವುದಿಲ್ಲ. ನಾನು ಕರೀ ಜನಗಳಿಗೆ ಸೇರಿದವನೆಂಬದಾಗಿಯೂ, ನಾನು ಯಾವ ಸನ್ಮಾನಕ್ಕೂ ಅರ್ಹನಲ್ಲವೆಂಬದಾಗಿಯೂ, ನಾನೂ ನನ್ನ ಪಂಗಡದ ಜನಗಳೂ ತಿಳಿದುಕೊಂಡಿದ್ದೆವು. ನಾನು ಯಾವ ಮರ್ಯಾದೆಗೂ ಅರ್ಹನಾಗಿರಲಿಲ್ಲ. ಆದಾಗ್ಯೂ ಬಿಳೀ ಜನಗಳೂ ಕೂಡ ನನಗೆ ಮರ್ಯಾದೆ ಮಾಡುತ್ತಾ ಬಂದರು. ಟಸ್ಕೆಗಿ ಪಟ್ಟಣದಲ್ಲಿದ್ದ ಬಿಳೀ ಜನಗಳು ನಾನು ಸ್ವಜನಗಳ ಸೇವೆಯನ್ನು ಮಾಡುತ್ತಿರುವುದನ್ನು ನೋಡಿ ನನಗೆ ಮರ್ಯಾದೆಯನ್ನು ತೋರಿಸಲಾರರೆಂದು ಭಾವಿಸಿದ್ದೆನು. ಕೊಂಚಕಾಲಕ್ಕೆ ಮುಂಚೆ ಟೆಕ್ಸಾಸ್ ಮತ್ತು ಹೂಸ್ಟನ್ ಸಂಸ್ಥಾನಗಳ ಮಾರ್ಗವಾಗಿ ರೈಲಿನಲ್ಲಿ ನಾನು ಸಂಚಾರಮಾಡುತ್ತಿದ್ದೆನು. ಯಾವ ಯಾವ ಸ್ಟೇಷನ್‌ಗಳಲ್ಲಿ ಗಾಡಿಯು ನಿಲ್ಲು

ತ್ತಿತ್ತೋ ಅಲ್ಲಲ್ಲಿ ಅನೇಕ ಅಧಿಕಾರಿಗಳೂ ಮತ್ತು ಬಿಳೀ ಜನಗಳೂ ಕೂಡ ನನ್ನ ಬಂಡಿಯ ಬಳಿಗೆ ಬಂದು ತಮ್ಮ ಪ್ರವರಗಳನ್ನು ಹೇಳಿಕೊಂಡು ನನ್ನ ಸಂಗಡ ಸ್ವಲ್ಪಹೊತ್ತು ಮಾತನಾಡಿ, ನಾನು ದಕ್ಷಿಣ ದೇಶದಲ್ಲಿ ಮಾಡುತ್ತಿದ್ದ ಕೆಲಸಗಳನ್ನು ಶ್ಲಾಘಿಸುವುದಕ್ಕೆ ಉಪಕ್ರಮಿಸಿದರು. ಒಂದಾವೃತ್ತಿ ಅಗಸ್ಟಾ ಪಟ್ಟಣದಿಂದ ಅಟ್ಲಾಂಟಾ ಪಟ್ಟಣಕ್ಕೆ ಸಂಚಾರ ಮಾಡುತ್ತಾ ಇದ್ದಾಗ, ಒಂದು ಗಾಡಿಯಲ್ಲಿ ಇಬ್ಬರು ದೊರೆಸಾನಿಯರು ಸಂಚಾರ ಮಾಡುತ್ತಿದ್ದರು. ಅವರಿಗೂ, ನನಗೂ ಪರಿಚಯವಿದ್ದಿತು. ಹೆಂಗಸರು ಇರುವ ಗಾಡಿಗೆ ಹೋಗಲು ಸಂದೇಹಪಡುತ್ತಿರುವಾಗ ಅವರು ನನ್ನನ್ನು ಗಾಡಿಗೆ ಬರಬೇಕೆಂದು ಕರೆದರು. ಸ್ವಲ್ಪ ಸಂದೇಹಪಟ್ಟು ನಾನು ಒಪ್ಪಿಕೊಂಡೆನು. ಕೆಲವು ನಿಮಿಷಗಳೊಳಗಾಗಿ ನಮ್ಮ ಮೂರು ಜನಗಳಿಗೂ ಭೋಜನಕ್ಕೆ ತರಬೇಕೆಂದು ಅವರು ಆಜ್ಞೆ ಮಾಡಿದರು. ಆ ಗಾಡಿಯಲ್ಲಿ ದಕ್ಷಿಣ ದೇಶದ ಅನೇಕ ಬಿಳೀ ಜನಗಳಿದ್ದರು. ಅವರ ದೃಷ್ಟಿಗಳೆಲ್ಲಾ ನಮ್ಮ ಮೇಲೆ ಬಿದ್ದವು. ನಾನು ಏನೋ ಒಂದು ನೆಪವನ್ನಿಟ್ಟುಕೊಂಡು ಬೇರೆ ಗಾಡಿಗೆ ಹೋಗುವ ಪ್ರಯತ್ನವನ್ನು ಮಾಡಿದೆನು. ಅವರು ಹೋಗಕೂಡದೆಂದು ಹಠವನ್ನು ಹಿಡಿದರು. ಕೊನೆಗೆ ವಿಧಿಯಿಲ್ಲದೆ ಕುಳಿತುಕೊಂಡೆನು. ಕೂಡಲೇ ಅವರಲ್ಲ ಒಬ್ಬಾಕೆಯು ತನ್ನಲ್ಲಿ ಅತ್ಯಂತ ಶ್ಲಾಘ್ಯವಾದ ತೇಯಲೆಯು ಇರುವುದೆಂಬದಾಗಿಯೂ, ಅಡಿಗೆಯವನಿಗೆ ಒಪ್ಪಿಸಿದರೆ ಅದನ್ನು ಕೆಡಿಸುವನೆಂಬದಾಗಿಯೂ, ನಾವು ಭೋಜನ ಮಾಡುತ್ತಿರುವಾಗ ತಾನೇ ಹೋಗಿ ಟೀಯನ್ನು ಮಾಡಿ ತೆಗೆದುಕೊಂಡು ಬಂದು ನನಗೆ ಕೊಟ್ಟು ಉಪಚಾರ ಮಾಡಿದರು. ಸ್ವಲ್ಪ ಹೊತ್ತಿನಲ್ಲಿಯೇ ಅಲ್ಲಿದ್ದ ಬೀಳೀ ಜನಗಳೆಲ್ಲಾ ನನ್ನ ಪೂರ್ವೋತ್ತರಗಳನ್ನು ವಿಚಾರಿಸಿಕೊಂಡು ಒಬ್ಬೊಬ್ಬರಾಗಿ ನನ್ನ ಬಳಿಗೆ ಬಂದು ನನ್ನ ದರ್ಶನದಿಂದ ತಾವು ಧನ್ಯರಾದೆವೆಂದು ಹೇಳಿ, ನಾನು ದಕ್ಷಿಣ ದೇಶದಲ್ಲಿ ಮಾಡುತ್ತಿದ್ದ ಕೆಲಸಗಳಿಗಾಗಿ ನನ್ನನ್ನು ವಂದಿಸುವುದಕ್ಕೆ ಪ್ರಾರಂಭಿಸಿದರು. ಇದು ಶ್ರುತಿಪಾಠವೆಂದು ಹೇಳುವುದಕ್ಕೆ ಅವಕಾಶವಿರಲಿಲ್ಲ. ಏಕೆಂದರೆ ಅವರಲ್ಲಿ ಯಾರೂ ನನ್ನ ಪರಿಚಿತಸ್ಥರಾಗಿರಲಿಲ್ಲ. ಅವರಲ್ಲಿ ಯಾರಿಗೂ ನನ್ನಿಂದಾಗತಕ್ಕ ಕೆಲಸವೇನೂ ಇರಲಿಲ್ಲ. ಇದರಿಂದ ನಮ್ಮ ನಮ್ಮ ಪಂಗಡದಲ್ಲಿ ನಮ್ಮ ಜನಗಳ ಸೇವೆಯನ್ನು ಮಾಡಿದರೆ ಹಾಗೆ ಸೇವೆ ಮಾಡತಕ್ಕವರಿಗೂ ಕೂಡ ಗೌರವವೂ, ಸನ್ಮಾನವೂ ಬರುವುದೆಂದು ನನಗೆ ಗೊತ್ತಾಯಿತು.

ವಿಧೇಯತೆ.—ಟಸ್ಕೆಗಿ ಪಟ್ಟಣಕ್ಕೆ ನಾನು ಹೋದಾರಭ್ಯ ಆ ವಿದ್ಯಾರ್ಥಿಗಳಿಗೆ ನನ್ನಲ್ಲಿ ಅಸಾಧಾರಣವಾದ ಪ್ರೀತಿಯು ಉಂಟಾಯಿತು. ಇದು ನನ್ನ ಕರ್ಮಫಲವೆಂದು ನಾನು ಭಾವಿಸಿದೆನು. ವಾಸ್ತವವಾಗಿಯೂ ಅದು ನನ್ನ ಕರ್ಮಫಲವು. ಅನೇಕ ಪಾಠಕರಿಗೆ ವಿದ್ಯಾರ್ಥಿಗಳಲ್ಲಿ ಪ್ರೀತಿಯು ಇರುವುದಿಲ್ಲ. ಅಂಥಾ ಪಾಠಕರಿಗೆ ಅವರು ವಿಧೇಯರಾಗಿಯೂ ಇರುವುದಿಲ್ಲ. ಅದೂ ಅವರ ಕರ್ಮಫಲವು. ಜನಗಳನ್ನು ನಾವು ಪ್ರೀತಿಸಿದರೆ ಅವರು ನಮ್ಮನ್ನು ಪ್ರೀತಿಸುವರು. ಜನಗಳನ್ನು ನಾವು ದ್ವೇಷಿಸಿದರೆ ಅವರು ನಮ್ಮನ್ನು ದ್ವೇಷಿಸುವರು. ಇದು ಸಾಮಾನ್ಯವಾದ ಧರ್ಮ. ಟಸ್ಕೆಗಿ ಪಟ್ಟಣಕ್ಕೆ ಬಂದಾರಭ್ಯ ಕರೀ ಜನಗಳ ಸೇವೆಯನ್ನು ಮಾಡಿ, ಅವರ ಮಕ್ಕಳಿಗೆ ವಿದ್ಯಾಭ್ಯಾಸನ್ನು ಮಾಡಿಸಿ, ಅವರನ್ನು ಉದ್ಧರಿಸುವುದೇ ನನಗೆ ಮುಖ್ಯ ಕೆಲಸವಾಗಿದ್ದಿತು. ಟಸ್ಕೆಗಿ ಪಾಠಶಾಲೆಯು ಕರೀ ಜನಗಳ ವಿದ್ಯಾರ್ಥಿಗಳದೇ ಹೊರತು ನನ್ನದಲ್ಲವೆಂದು ಹೇಳುತ್ತಿದ್ದೆನು. ಅದರಲ್ಲಿ ನಾನು ಯಾವ ಸ್ವತ್ವವನ್ನೂ ಇಟ್ಟುಕೊಂಡಿರಲಿಲ್ಲ. ಯಾವ ಕೆಲಸ ನಡೆಯಬೇಕಾದಾಗ್ಯೂ ಅವರನ್ನು ಕೇಳದೆ ಅವರ ಅನುಮತಿಯನ್ನು ಹೊಂದದೆ ನಾನು ಮಾಡುತ್ತಿರಲಿಲ್ಲ. ಆಗಾಗ್ಯೆ ಅವರೊಡನೆ ಸಂಭಾಷಣೆ ಮಾಡುತ್ತಾ, ಪಾಠಶಾಲೆಯನ್ನು ನಡೆಯಿಸುವುದರಲ್ಲಿ ಅವರ ಸಲಹೆಗಳನ್ನು ತೆಗೆದುಕೊಳ್ಳುತ್ತಾ ಇದ್ದೆನು. ಪಾಠಶಾಲೆಯ ಏರ್ಪಾಟುಗಳಲ್ಲಿ ವಿದ್ಯಾರ್ಥಿಗಳು ಅನೇಕ ಯುಕ್ತಿಯುಕ್ತವಾದ ಸಲಹೆಗಳನ್ನು ಕೊಡುತ್ತಿದ್ದರು. ಅವರ ಸಹಾಯವಿಲ್ಲದಿದ್ದರೆ ನಾನು ಮಾಡಿದ ಕೆಲಸಗಳಲ್ಲಿ ಒಂದು ಶತಾಂಶವೂ ನನ್ನಿಂದಾಗುತ್ತಿರಲಿಲ್ಲ. ಎಲ್ಲಾ ಕೆಲಸಗಳನ್ನೂ ಅವರನ್ನು ನಂಬಿ ಅವರಿಗೇ ಬಿಡುತ್ತಿದ್ದೆನು. ಅವರು ಎಲ್ಲಾ ಕೆಲಸಗಳೂ ತಮಗೆ ಸೇರಿದವುಗಳೆಂಬದಾಗಿಯೂ, ಅವುಗಳಲ್ಲಿ ನ್ಯೂನಾತಿರಿಕ್ತಗಳು ಬಂದರೆ ತಾವು ಜವಾಬ್ದಾರರೆಂಬದಾಗಿಯೂ ತಿಳಿದುಕೊಂಡು ಕೆಲಸ ಮಾಡುತ್ತಿದ್ದರು. ಈ ರೀತಿಯಾದ ಸಂಬಂಧವು ನನಗೂ, ನನ್ನ ವಿದ್ಯಾರ್ಥಿಗಳಿಗೂ ಉಂಟಾದ್ದರಿಂದ ಹೊರಗಿನ ಜನಗಳು ಪಾಠಶಾಲೆಗೆ ಬಂದರೆ ನಮ್ಮ ಕೆಲಸಗಳನ್ನು ನೋಡಿ ಇವರು ಗುರುಗಳು ಇವರು ಶಿಷ್ಯರು ಎಂದು ಹೇಳುವುದೇ ಅಸಾಧ್ಯವಾಗಿತ್ತು. ಪಾಠಶಾಲೆಯ ಯೋಗಕ್ಷೇಮಚಿಂತೆಯು ಪಾಠಕರಿಗೆ ಹೇಗೋ ಹಾಗೆ ವಿದ್ಯಾರ್ಥಿಗಳಿಗೂ ಇರುತ್ತಿತ್ತು. ಹೀಗಿದ್ದಾಗ್ಗೂ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬರಿಗೂ ನಾನು ಹೇಳುವ ಮಾತಿನಲ್ಲಿ ತುಂಬಾ ಗೌರವವು ಇರುತ್ತಿತ್ತು. ಈ ಗೌರವದಿಂದ ನಾನು ಪಾಠಕ

ನೆಂಬದಾಗಿಯೂ, ಅವರು ಶಿಷ್ಯರೆಂಬದಾಗಿಯೂ ಗೊತ್ತಾಗುತ್ತಿದ್ದಿತು. ಅಧಿಕಾರ ಮಾಡತಕ್ಕವರು ಈ ರೀತಿಯಲ್ಲಿ ಅಧಿಕಾರ ಮಾಡಬೇಕೆಂದು ಜನಗಳು ಅಂದುಕೊಳ್ಳುತ್ತಿದ್ದರು. ಎಲ್ಲರೂ ಪರಸ್ಪರ ಅನುರಾಗವುಳ್ಳವರಾಗಿ ಒಬ್ಬರ ಮಾತನ್ನು ಒಬ್ಬರು ಕೇಳುತ್ತಿರುವಾಗ ಅಧಿಕಾರಕ್ಕೆ ಅವಕಾಶವೆಲ್ಲಿರುವುದು ? ಯಜಮಾನ, ಭೃತ್ಯ ಎಂಬ ಮಾತುಗಳ ಸಂಭವವೆಲ್ಲಿರುವುದು ? ಪರಸ್ಪರ ಸೇವೆಯೊಂದು ವಿನಾ ಮತ್ತಾವುದೂ ನನಗೆ ತೋರುತ್ತಿರಲಿಲ್ಲ. ಆಗ ಅಮೆರಿಕಾ ಖಂಡದಲ್ಲಿ ಕೆಲಸ ಮಾಡತಕ್ಕವರಿಗೂ, ಕೆಲಸ ಮಾಡಿಸಿಕೊಳ್ಳತಕ್ಕವರಿಗೂ ಪರಸ್ಪರ ಮನಸ್ತಾಪಗಳು ಬಂದು ಕೂಲಿಯವರು ಕೆಲಸಮಾಡುವುದಿಲ್ಲವೆಂದು ಕಟ್ಟುಮಾಡಿಕೊಳ್ಳುತ್ತಿದ್ದರು. ಅದರಿಂದ ಕಾರ್ಖಾನೆಗಳ ಯಜಮಾನರಿಗೆ ನಷ್ಟವಾಗುತ್ತಿದ್ದಿತು. ಕೂಲಿಯವರಿಗೂ ಕೂಡ ಜೀವನಕ್ಕಿಲ್ಲದೆ ತೊಂದರೆಯಾಗುತ್ತಿದ್ದಿತು. ಕಾರ್ಖಾನೆಯ ಉತ್ಪತ್ತಿಯಲ್ಲಿ ಪಾಲುದಾರರಾಗಿರಬೇಕು. ಧರ್ಮವಾದ ಪಾಲನ್ನು ಎಲ್ಲರೂ ಹಂಚಿಕೊಳ್ಳಬೇಕು. ಹಾಗೆ ಹಂಚಿಕೊಳ್ಳುವುದು ಕಷ್ಟವೇ ? ಎಂದಿಗೂ ಅಲ್ಲ. ಕಾರ್ಖಾನೆಗಳ ಯಜಮಾನರು ಕಾರ್ಖಾನೆಯಲ್ಲಿ ಕೆಲಸಮಾಡತಕ್ಕವರೆಲ್ಲರನ್ನೂ ಸೇರಿಸಿ, ಆದಾಯವೆಚ್ಚಗಳ ತಪಶೀಲುಗಳನ್ನು ಅವರಿಗೆ ತಿಳಿಸಿ, ಉತ್ಪತ್ತಿಯಲ್ಲಿ ಖರ್ಚು ಕಳೆದು ಉಳಿದ ಮೊಬಲಗನ್ನು ಎಲ್ಲರೂ ಪರ್ಯಾಲೋಚಿಸಿ ಯಾರಿಗೂ ನಷ್ಟವಿಲ್ಲದಂತೆ ಹಂಚಿಕೊಳ್ಳುವ ಪ್ರಯತ್ನವನ್ನು ಮಾಡಿದರೆ ಮನಸ್ತಾಪಕ್ಕೆ ಅವಕಾಶವೆಲ್ಲಿಂದ ಬರುವುದು ? ಒಬ್ಬರು ತಮ್ಮ ಮೆಹನತ್ತಿಗೆ ಎಷ್ಟು ಬರಬೇಕೋ ಅದಕ್ಕಿಂತಲೂ ಹೆಚ್ಚಾಗಿ ಬರಬೇಕೆಂದು ಪ್ರಯತ್ನ ಮಾಡಿದರೆ, ಮತ್ತೊಬ್ಬರು ಪ್ರತಿಭಟಿಸುವರು. ಎಲ್ಲರೂ ಧರ್ಮವನ್ನನುಸರಿಸಿ ನಡೆದರೆ, ಪರಸ್ಪರ ಪ್ರೀತಿಗೆ ಯಾವ ನ್ಯೂನತೆಯೂ ಉಂಟಾಗುವುದಿಲ್ಲ. ಧರ್ಮದಿಂದ ಮಾಡಲ್ಪಡತಕ್ಕ ಆಜ್ಞೆಯನ್ನು ಯಾರೂ ಉಲ್ಲಂಘಿಸುವುದಿಲ್ಲ. ಈ ಧರ್ಮ ಸೂಕ್ಷ್ಮವನ್ನು ತಿಳಿದುಕೊಂಡು ಯಾರು ಕೆಲಸ ಮಾಡುವರೋ ಅವರ ಕೆಲಸಗಳಿಗೆ ಯಾವ ವಿಘ್ನವೂ ಬರುವುದಿಲ್ಲ. ಅವರ ಆಜ್ಞೆಗೆ ಅನುಸಾರವಾಗಿ ಎಲ್ಲರೂ ನಡೆದುಕೊಳ್ಳುವರು. ಎಲ್ಲಿ ಭೃತ್ಯರು ಅವಿಧೇಯರೆಂದು ಹೇಳಲ್ಪಡುವರೋ ಅಲ್ಲಿ ಪ್ರಾಯಕವಾಗಿ ಯಜಮಾನರು ಧರ್ಮಿಷ್ಟರಾಗಿರುವುದು ಅಪೂರ್ವ.

ಭೋಗ್ಯವಸ್ತುಗಳು.—ಟಸ್ಕೆಗಿ ಪಟ್ಟಣಕೆ ನಾನು ಬಂದಾಗ, ನನಗೂ ನನ್ನ ವಿದ್ಯಾರ್ಥಿಗಳಿಗೂ ಭೂಮಿಯೇ ಹಾಸಿಗೆಯಾಗಿದ್ದಿತು. ಆಕಾಶವೇ ಹೊದ್ದಿಕೆಯಾ

ಗಿದ್ದಿತು. ಮೇಜು, ಕುರ್ಚಿ, ಮಂಚ ಮೊದಲಾದವುಗಳು ಶಬ್ದರೂಪವಾಗಿದ್ದವೇ ಹೊರತು ವಸ್ತುರೂಪವಾಗಿರಲಿಲ್ಲ. ನಾನೂ ನನ್ನ ವಿದ್ಯಾರ್ಥಿಗಳೂ ಅಹೋರಾತ್ರಿಯಲ್ಲಿಯೂ ಕಷ್ಟಪಟ್ಟು ಕಟ್ಟಡಗಳನ್ನು ಕಟ್ಟಿಕೊಂಡೆವು. ಮಂಚಗಳನ್ನೂ, ಬೆಂಚುಗಳನ್ನೂ, ಕುರ್ಚಿಗಳನ್ನೂ, ಮೇಜುಗಳನ್ನೂ ಸ್ವಂತ ಮೆಹನತ್ತಿನಿಂದ ಮಾಡಿಕೊಂಡೆವು. ಹಾಸಿಗೆಗಳನ್ನು ಮಾಡಿಕೊಳ್ಳಬೇಕೆಂಬ ಕುತೂಹಲವು ಉಂಟಾಯಿತು. ಉಪಪನ್ನರಾದವರು ಹಾಸಿಗೆ, ತಲೆದಿಂಬು ಮೊದಲಾದವುಗಳನ್ನು ಉಪಯೋಗಿಸುತ್ತಿದ್ದರು. ನಾವೂ ಏತಕ್ಕೆ ಹಾಸಿಗೆಗಳನ್ನು ಮಾಡಿಕೊಳ್ಳಬಾರದೆಂಬ ಯೋಚನೆಯು ಉಂಟಾಯಿತು. ಅಗ್ಗವಾದ ಬಟ್ಟೆಯನ್ನು ತಂದೆವು. ಅದನ್ನು ಹೊಲಿದು ಹಾಸಿಗೆಗಳಿಗೂ, ದಿಂಬುಗಳಿಗೂ ಚೀಲಗಳನ್ನು ಮಾಡಿದೆವು. ಸಮೀಪದ ಕಾಡಿಗೆ ಹೋಗಿ ಹುಲ್ಲು ತಂದೆವು. ಬರೀ ಚೀಲಗಳಲ್ಲಿ ಆ ಹುಲ್ಲನ್ನು ಹಾಕಿ ಹೊಲಿದು, ಅದನ್ನು ನಾನೂ, ನನ್ನ ವಿದ್ಯಾರ್ಥಿಗಳೂ ಹಾಸಿಗೆಗಳಾಗಿ ಉಪಯೋಗಿಸುವುದಕ್ಕೆ ಉಪಕ್ರಮಿಸಿದೆವು. ಪ್ರತಿಯೊಬ್ಬ ವಿದ್ಯಾರ್ಥಿಗೂ ಈ ರೀತಿಯಾದ ಹಾಸಿಗೆಯೂ, ದಿಂಬುಗಳೂ ಒದಗಿಸಲ್ಪಟ್ಟವು. ಅವುಗಳಲ್ಲಿ ಕೆಲವು ಹುಲ್ಲಿನ ಕಡ್ಡಿಗಳು ಸೂಜಿಗಳಂತೆಯೂ, ಮುಳ್ಳುಗಳಂತೆಯೂ ಚುಚ್ಚುತ್ತಿದ್ದವು. ಅದೂ ನಮಗೆ ಅಭ್ಯಾಸವಾಯಿತು. ಕ್ಲೇಶಕ್ಕೆ ಕಾರಣವಾಗಲಿಲ್ಲ. ಈಗ ತುಬಟಗಳಿಂದಲೂ ಮೆತ್ತಗಿರತಕ್ಕ ನಾನಾವಿಧವಾದ ಹತ್ತಿಗಳಿಂದಲೂ ಮಾಡಲ್ಪಡತಕ್ಕ ದಿಂಬುಗಳೊಡನೆಯೂ, ಸುಪ್ಪತ್ತಿಗೆಗಳೊಡನೆಯೂ ನಾವು ಉಪಯೋಗಿಸುತ್ತಿದ್ದ ಸುಪ್ಪತಿಗೆ ಮತ್ತು ದಿಂಬುಗಳನ್ನು ಹೋಲಿಸುವುದಕ್ಕಾಗುವುದಿಲ್ಲ. ಮೋಟಾರು ಬಂಡಿಯೊಡನೆ ಒಡ್ಡರ ಬಂಡಿಯನ್ನು ಹೋಲಿಸಿದಂತೆ ಆಗುವುದು. ಆದರೆ ನಾನು ಟಸ್ಕೆಗಿಗೆ ಬಂದಾಗ, ಈ ಹಾಸಿಗೆಗಳು ಉಪಯೋಗಕ್ಕೆ ಬಂದಕೂಡಲೆ ಹಂಸತೂಲಿಕಾ ತಲ್ಪಗಳು ಉಪಯೋಗಕ್ಕೆ ಬಂದರೆ ಎಷ್ಟು ಸಂತೋಷವೋ ಅಷ್ಟು ಸಂತೋಷವು ನಮಗೆ ಉಂಟಾಯಿತು. ಹೀಗೆ ಸಂತೋಷ ಉಂಟಾಗುವುದಕ್ಕೆ ಇನ್ನೊಂದು ಕಾರಣವಿತ್ತು. ಈ ಹಾಸಿಗೆಗಳು ನಮ್ಮ ಕೈಯಿಂದ ಮಾಡಿಕೊಂಡದ್ದು. ಹೆತ್ತವರಿಗೆ ಹೆಗ್ಗಣದಂತೆ ಇರುವ ಮಗವೂ ಕೂಡ ಮುದ್ದಾಗಿರುವುದು. ಹಾಗೆಯೇ ನಾವು ಮಾಡಿದ ಹಾಸಿಗೆಗಳು ನಮಗೆ ತುಂಬಾ ಸಂತೋಷಜನಕವಾಗಿದ್ದವು.

ಹಲ್ಲನ್ನು ಉಜ್ಜುವ ಬುರುಸು.—ಜನರಲ್ ಆರಂಸ್ಟ್ರಾಂಗರವರು ದೇಹಶುದ್ಧಿಯ ಮತ್ತು ಆತ್ಮಶುದ್ಧಿಯ ವಿಷಯದಲ್ಲಿ ನನಗೆ ಅನೇಕ ಹಿತೋಪದೇಶಗಳನು

ಮಾಡಿದ್ದರು. ಅದರಲ್ಲಿ ದೇಹಶುದ್ಧಿಗೆ ಸಂಬಂಧಪಟ್ಟ ಹಿತೋಪದೇಶವು ಅತ್ಯಂತ ಮುಖ್ಯವಾದದ್ದು. ಜಲಮಲವಿಸರ್ಜನೆಗಳು, ಮುಖಪ್ರಕ್ಷಾಳನ, ಸ್ನಾನ, ಒಗೆದ ಬಟ್ಟೆಗಳನ್ನು ಹಾಕಿಕೊಳ್ಳುವುದು ಇವುಗಳಿಗೆ ವಿದ್ಯಾರ್ಥಿಗಳು ತುಂಬಾ ಗಮನವನ್ನು ಕೊಡಬೇಕು. ಹಲ್ಲುಜ್ಜಿಕೊಳ್ಳುವುದು ದೇಹಶುದ್ಧಿಯಲ್ಲಿ ಮುಖ್ಯವಾದದ್ದು. ಯಾರು ಬುರುಸನ್ನು ಇಟ್ಟುಕೊಂಡು ಹಲ್ಲುಗಳ ಸಂದಿಯಲ್ಲಿ ಯಾವ ಕಶ್ಮಲವೂ ಸೇರದಂತೆ ನಿರ್ಮಲವಾಗಿಟ್ಟುಕೊಂಡಿರುವರೋ ಅವರಿಗೆ ಆರೋಗ್ಯವು ಸಂಪೂರ್ಣವಾಗಿರುವುದು. ಆರೋಗ್ಯವುಳ್ಳವರಿಗೆ ಸಕಲ ಸಂಪತ್ತುಗಳೂ ಬರುವುದಕ್ಕೆ ಅವಕಾಶವಾಗುವುದು. ಬಾಲಕರ ಪಾಠಶಾಲೆಯಲ್ಲಿ ಹೇಗೋ ಹಾಗೆ ಬಾಲೆಯರ ಪಾಠಶಾಲೆಯಲ್ಲಿಯೂ ಕೂಡ ಪ್ರತಿಯೊಬ್ಬರೂ ಹಲ್ಲಿನ ಬುರುಸುಗಳನ್ನು ಇಟ್ಟುಕೊಂಡು ಸ್ನಾನಾದಿಗಳಿಂದ ದೇಹವನ್ನು ಹೇಗೆ ನಿರ್ಮಲವಾಗಿಟ್ಟುಕೊಳ್ಳುತ್ತಿದ್ದರೋ ಹಾಗೆ ಈ ಬುರುಸುಗಳ ಸಹಾಯದಿಂದ ಬಾಯನ್ನು ನಿರ್ಮಲವಾಗಿಟ್ಟುಕೊಳ್ಳುತ್ತಿದ್ದರು. ತ್ರಿಕಾಲಸ್ನಾನ ವನ್ನು ಮಾಡುತ್ತೇವೆಂಬದಾಗಿ ವಿಜೃಂಭಣೆ ಮಾಡತಕ್ಕವರ ಸಮೀಪದಲ್ಲಿ ನಿಂತಾಗ್ಯೂ ಅವರ ಬಾಯಿಂದ ಬರತಕ್ಕ ದುರ್ಗಂಧವು ದುಸ್ಸಹವಾಗಿರುವುದುಂಟು. ಬಾಹ್ಯ ಶುದ್ಧಿಯು ಹೇಗೆ ಅವಶ್ಯಕವೋ ಅಂತಶ್ಶುದ್ಧಿಯೂ ಹಾಗೆಯೇ ಅವಶ್ಯಕವಾದದ್ದು. ಈ ವಿಷಯವನ್ನು ಜನರಲ್ ಆರಂಸ್ಟ್ರಾಂಗರವರು ನನಗೆ ಉಪದೇಶಿಸಿದ್ದರು. ಈ ಉಪದೇಶದ ಫಲವನ್ನು ನನ್ನ ವಿದ್ಯಾರ್ಥಿಗಳಿಗೆಲ್ಲಾ ನಾನು ಬೋಧಿಸಿದ್ದೆನು. ಊಟ ಮಾಡಿದ ಮೇಲೂ, ಫಲಾಹಾರಗಳನ್ನು ಮಾಡಿದ ಮೇಲೂ ನನ್ನ ವಿದ್ಯಾರ್ಥಿಗಳೆಲ್ಲಾ ಬಾಯಲ್ಲಿ ಯಾವ ಶೇಷವೂ ಇಲ್ಲದಂತೆ ಬುರುಸನ್ನು ಉಪಯೋಗಿಸಿ ತೊಳೆದುಕೊಳ್ಳು ತ್ತಿದ್ದರು. ಹೀಗೆ ಮಾಡತಕ್ಕವರಿಗೆ ಪರಿಪೂರ್ಣವಾದ ವಾರ್ಧಿಕ್ಯ ಬಂದಾಗಲೂ ಕೂಡ ಹಲ್ಲುಗಳು ಬೀಳುವುದಿಲ್ಲ. ಈ ಉಪದೇಶವು ನನ್ನ ವಿದ್ಯಾರ್ಥಿಗಳಲ್ಲಿ ಉಪಕ್ರಮವಾಗಿ ಅವರ ಮನೆಗಳಿಗೆ ಪ್ರಸರಿಸಿ ದೇಶವೆಲ್ಲಾ ಹರಡಿಕೊಂಡಿತು. ಕರೀ ಜನಗಳನ್ನು ನೋಡಿ ಬಿಳೀ ಜನಗಳೂ ಕೂಡ ದೇಹಶುದ್ಧಿಗೂ, ನಿರ್ಮಲವಾದ ಉಡುಪುಗಳನ್ನು ಹಾ ಕೊಳ್ಳುವುದಕ್ಕೂ ಉಪಕ್ರಮಿಸಿದರು.

ಉಡಿಗೆಗಳು.—ಸ್ನಾನಾದಿಗಳಿಂದ ದೇಹವನ್ನು ಶುದ್ಧಿಮಾಡಿಕೊಂಡರೆ ಆರೋ ಗ್ಯಕ್ಕೆ ಬೇಕಾದ ಪ್ರಯೋಜನಗಳೆಲ್ಲಾ ಸಿದ್ಧಿಸುವುದಿಲ್ಲ. ದೇಹಶುದ್ಧಿಗೆ ವಸ್ತ್ರಶು ಎಂದರೆ ತುಂಬಾ ಬೆಲೆಯುಳ್ಳ ಥಳಥಳಿಸುವ ಉಡಿಗೆಗಳನ್ನು ಹಾಕಿಕೊಳ್ಳಬೇಕೆಂದ

ವಲ್ಲ. ಅವರವರ ಅಂತಸ್ತಿಗೆ ಅನುರೂಪವಾದ ಉಡಿಗೆಗಳನ್ನು ಜನಗಳು ಹಾಕಿಕೊಳ್ಳಬಹುದು. ಅದನ್ನು ಚೆನ್ನಾಗಿ ಒಗೆದು ನಿರ್ಮಲವಾಗಿರುವಂತೆ ಮಾಡಿಕೊಳ್ಳುವುದು ಕಷ್ಟವಲ್ಲ. ಒಂದೆರಡು ರೂಪಾಯಿನ ಬಟ್ಟೆಗಳು ನಿರ್ಮಲವಾಗಿ ಇರುವಂತೆ ಮಡಿ ಮಾಡಿ ಹಾಕಿಕೊಂಡರೆ ಅದು ಬಹಳ ಬೆಲೆ ಬಾಳುವ ಪೀತಾಂಬರಕ್ಕಿಂತಲೂ ಎಂದಿಗೂ ಕಡಮೆಯಾಗಿರುವುದಿಲ್ಲ. ಈ ವಿಷಯಗಳನ್ನೆಲ್ಲಾ ನನ್ನ ವಿದ್ಯಾರ್ಥಿಗಳಿಗೆ ಬೋಧಿಸಿದೆನು. ಈ ಬೋಧೆಯ ತತ್ವವನ್ನು ಅವರು ಸಂಪೂರ್ಣವಾಗಿ ಅನುಷ್ಠಾನಕ್ಕೆ ತಂದುಕೊಂಡು ಆಯುರಾರೋಗ್ಯ ಐಶ್ವರ್ಯಗಳನ್ನು ಸಮಗ್ರವಾಗಿ ಪಡೆಯುವುದಕ್ಕೆ ಉಪಕ್ರಮಿಸಿಧಾರೆ. ಪಾಠಕರಿಗೆ ಶಿಷ್ಯರ ಅಭಿವೃದ್ಧಿಗಿಂತಲೂ ಹೆಚ್ಚಾದ ಸಂಪತ್ತು ಯಾವುದೂ ಅಲ್ಲ. ದೈವಯೋಗದಿಂದ ಈ ಸಂಪತ್ತು ನಮಗೆ ಲಭ್ಯವಾಯಿತು.

ಅಧ್ಯಾಯ ೯

ದ್ರವ್ಯವನ್ನು ಶೇಖರಿಸಿದ್ದು.—ವಿದ್ಯಾರ್ಥಿನಿಲಯವನ್ನು ನಾವು ಪ್ರತಿಷ್ಠಿಸಿದೆವು. ಪೋರ್ಟರ್ ಹಾಲ್ ಎಂಬದಾಗಿ ಒಂದು ವಿಸ್ತಾರವಾದ ಹಜಾರವೂ, ಅದಕ್ಕೆ ಸೇರಿದ ಹಾಗೆ ಕೆಲವು ಕೊಠಡಿಗಳೂ ಕಟ್ಟಲ್ಪಟ್ಟವು. ಕೆಲವು ಜನ ವಿದ್ಯಾರ್ಥಿನಿಯರಿಗೆ ವಾಸಕ್ಕೆ ಒಂದು ಕಟ್ಟಡವನ್ನು ಏರ್ಪಡಿಸಿದೆವು. ವಿದ್ಯಾರ್ಥಿಗಳ ಸಂಖ್ಯೆಯೂ, ವಿದ್ಯಾರ್ಥಿನಿಯರ ಸಂಖ್ಯೆಯೂ ಹೆಚ್ಚಿತು. ವಿದ್ಯಾರ್ಥಿಗಳಿಗೆ ಸ್ಕೂಲಿನ ಹೊರಗೆ ವಾಸಕ್ಕೆ ಏರ್ಪಾಟು ಮಾಡಿದೆವು. ವಿದ್ಯಾರ್ಥಿನಿಯರನ್ನು ಹೊರಗೆ ಕಳುಹಿಸುವುದು ಯುಕ್ತವಾಗಿರಲಿಲ್ಲ. ಎಲ್ಲಾ ವಿದ್ಯಾರ್ಥಿಗಳಿಗೂ ಭೋಜನಶಾಲೆಯು ಸಾಲಲಿಲ್ಲ. ವಿದ್ಯಾರ್ಥಿನಿಯರ ವಾಸಕ್ಕೂ, ಎಲ್ಲರ ಭೋಜನಶಾಲೆಗೂ ಸಾಕಾಗುವಷ್ಟು ಒಂದು ದೊಡ್ಡ ಕಟ್ಟಡವನ್ನು ಕಟ್ಟಬೇಕೆಂದು ಯೋಚಿಸಿದೆನು. ಇದಕ್ಕಾಗಿ ಒಂದು ಪ್ಲಾನನ್ನೂ, ಎಸ್ಟಿಮೇಟನ್ನೂ ಮಾಡಿಸಿದೆನು. ಈ ಕಟ್ಟಡಕ್ಕೆ 30,000 ರೂಪಾಯಿಗಳು ಬೇಕಾಯಿತು. ನಮ್ಮ ಬಳಿಯಲ್ಲಿ ಒಂದು ಕಾಸೂ ಇರಲಿಲ್ಲ. ಆದಾಗ್ಯೂ ಕಟ್ಟಡವನ್ನು ಕಟ್ಟಿಸಬೇಕೆಂಬ ಸಂಕಲ್ಪವನ್ನು ಮಾತ್ರ ಮಾಡಿದೆವು. ದ್ರವ್ಯವಿಲ್ಲದೆ ಇದ್ದಾಗ್ಯೂ ಸಂಕಲ್ಪಮಾತ್ರ ಬಲವಾಗಿದ್ದಿತು. ನಾವು ಉದ್ಯೋಗ ಮಾಡುತ್ತಿದ್ದ ಸಂಸ್ಥಾನಕ್ಕೆ ಅಲಬಾಮಾ ಎಂಬ ಹೆಸರಿದ್ದಿತು. ನಾವು

ವಾದ ಬ
ಉದಾರ
ಣದ ವಿದ
ಪಟ್ಟಣಗಳ
ನೀಗ್ರೊ ಜ
ಪಟ್ಟಣಗಳ
ಗಿದ್ದರಿಂದ
ಮವು ಸಾ
ಕ್ಷೇಮವನ್ನು
ಮಾಡಬೇಕಾ
ಉಪದೇಶವ
ಕ್ಕಾಗುವುದಿ
ಡಿರಬೇಕು.
ಅರ್ಥವತ್ತಾ
ವಾಕ್ಯವು
ಉಪನ್ಯಾಸ
ತತ್ವಾರ್ಥ
ವಶ್ಯಕ.
ಗಿರಬೇಕು.
ವಾಗಿತ್ತು.
ಮಾಡಕೂ
ಅವರು ಹ
ಸಹಾಯ
ವಾಗಿರಬೇ
ಮಾಡಿದ
ದೇಶದ